ಭಾರತ ಸರ್ಕಾರದವರು ಈ ದಿವಸದಿಂದ ಬಟ್ಟೆ ಹತ್ತೋಟಿಯನ್ನು ರದ್ದುಗೊಳಿಸುವರೆಂದು ಖಚಿತವಾಗಿ ಗೊತ್ತಾಗಿದೆ. ಒಂದು ಪ್ರಾಂತ್ಯದಿಂದ ಮತ್ತೊಂದು ಪ್ರಾಂತ್ಯಕ್ಕೆ ಬಟ್ಟೆಗಳನ್ನು ಸಾಗಿಸಲು ಮಾತ್ರ ಈ ನಿಯಮವನ್ನು ಪಡೆಯಬೇಕಾಗಿರುವುದು

ಬಟ್ಟೆ ಕೂಪರ್

ಮೈಸೂರು ೨೦

ಮೈಸೂರು ಜಿಲ್ಲಾಧಿಕಾರಿಗಳು ಒಂದು ಪ್ರಕಟಣೆಯನ್ನು ಹೊರಡಿಸಿ, ಕಳೆದ ವರ್ಷ ಹಂಚಲಾಗಿದ್ದ ಬಟ್ಟೆ ಕೂಪನ್ನು ೧೯೪೮ನೇ ಮಾರ್ಚ್ ತಿಂಗಳಿನ ಅಂತ್ಯದ ವರೆಗೂ ಜಾರಿಯಲ್ಲಿರುವುದೆಂದು ತಿಳಿದ್ದಾರೆ ಈ ವರ್ಷದ ನಾಲ್ಕನೇ ಒಂದು ಭಾಗದ ಕೋಟಾವನ್ನೂ ಮತ್ತು ಹಿಂದಿನ ವರ್ಷದಲ್ಲಿ ಉಳಿದ ಕೋಟಾವನ್ನೂ ಜನರುಗಳು ಅಂಗಡಿ ತಾಲ್ಲೂಕು ಅಧಿಕಾರಿಗಳಿಂದ ಅಥವಾ ನಗರದ ಬಟ್ಟೆ ವರ್ತಕರ ಸಂಘದವರ ಮುದ್ರೆಗಳನ್ನು ಕೂಪನ್ನುಗಳ ಮೇಲೆ ಹೊಂದಿ ಬಟ್ಟೆಗಳನ್ನು ಪಡೆಯಬಹುದೆಂದೂ ತಿಳಿಸಲಾಗಿದೆ. ಒಂದು ತಂಗಳಿನ ಕೋಟಾಗಿಂತ ಕಡಿಮೆ ಕೊಡಕೂಡದೆಂದು ನಗರದ ಸುತ್ತಮುತ್ತಲ ಜಿಲ್ಲಾ ವರ್ತಕರುಗಳಿಗೆ ಸೂಚಿಸಲಾಗಿದೆ.

ಫುಟ್‌ಬಾಲ್ ಪಂದ್ಯ

ನಿನ್ನೆ ನಡೆದ ದಸರಾ ಫುಟ್‌ಬಾಲ್ ಪಂದ್ಯದಲ್ಲಿ ಮೈಸೂರು ಬಾಯ್ಸನವರನ್ನು ಮೈ

ಗೋಲಿನಿಂದ

ಪ್ರಜಾ ಮಂಡಲದ ಸಭೆ

ಮೈಸೂರು ೨೦

ರಾಜಧಾನಿಯ ಪ್ರಜಾ ವ ಡಲದ ಆಶ್ರ ಯದಲ್ಲಿ ಬೆಂಸ್ಟೆ ದಿನ ಟ್ಯಾಗೂರಿನಲ್ಲಿ ನ ಡೆದ ಬಹಿರಂಗ ಸಭೆ ರಲ್ಲಿ ಹೈದರಾಬಾದಿನ ಸೋಲಿಟದಲ್ಲಿ ನೆಹರಂರವರಿಗೆ ಸಂಸ್ಥಾಪವನ್ನು ಸೂಚಿಸಿ, ಹೈದರಾಬಾದ್ ಸರ್ಕಾರ ನ ವರ್ತನೆಯನ್ನೂ ಕಾಂಗ್ರೆಸ್ಸಿನ ಮತ್ತು ಕಾರ್ಯಕರ್ತರುಗಳ ಅಲಕ್ಷ್ಯ ವರ್ತನೆಗ ಳನ್ನು ಖಂಡಿಸಿ, ಪ್ರಜಾ ಮಂಡಲವು ಮೈಸೂರಿನ ದೌರ್ಭಾಗ್ಯ ಪರಿಹಾರದ ಮೂಲಕ ಲೋಕಾದ್ಯಂತ ಶಾಂತಿಗಾಗಿ ಹೊಡಗಿರುವ ಕಾರ್ಯ ಕ್ರಮಗಳಿಗೆ ಸರ್ವಾ ಸಹಕಾರವಿದೆ ಕೆಂದು ಕೋರಿ ನಿರ್ಣಯವನ್ನು ಮಾಡಲಾಯಿತ .

ಉಪನ್ಯಾಸ

ರಾಜಧಾನಿಯ ಹಂಡಿಕ ಮಂಡಲವು ಆ ವ್ಯಯದಲ್ಲಿ ಸಾರ್ವಜಿ ದ ಆ ವಿನಗಳು ಪ್ರತಿನಿತ್ಯವೂ ಸಂಜೆ ೬-೩೦ ಗಂಟೆಗೆ ಸಂ ಸ್ಕೃತ ಪಾಠಶಾಲೆಯಲ್ಲಿ ಕೆಳಗೆ ಕಂಡಂತೆ ಉಪನ್ಯಾಸಗಳು ನಡೆಯಲಿವೆ ರಾಜಸೇವಾ ಪ್ರಾಮುಖ್ಯ ಶ್ರೀ ಎಚ್ ಕೃಷ್ಣಾ ಅಯ್ಯಂಗಾರ್ ಅಧ್ಯಕ್ಷತೆ ನಡೆಸುವರು. ವಿಷಯ ನೇ ತಾ ಶ್ರೀ ವಿ ಟಿ ನಾರಾಯಣ ಶಾಸ್ತ್ರಿಗಳಿಂದ 'ಕವಿತೆ', ೨೬ ನೇ ತಾ ಶ್ರೀ ಮದ್ವಿದ್ವಾನ್ ನೀಲಕಂಠ ಶಾಸ್ತ್ರಿಗಳಿಂದ 'ಸಂಸ್ಕೃತ ಭಕ್ತಿಯ ಮಹತ್ವ', ೨೭ ನೇ ತಾ ಶ್ರೀ ಮದ್ವಿದ್ವಾನ್ ಆಸ್ಥಾನ ವಿದ್ವಾನ್ ಶ್ರೀ ಗೂಡೂರು ದೀಕ್ಷಿತರಿಂದ "ಶ್ರೀ ಮದಾಚಾರ್ಯರು ಮಾಡಿರುವ ಉಪಕಾರ"; ೨೮ ನೇ ತಾ ಶ್ರೀ ವಿ ಶಾಮಣಾಕರ ಹಂದ್ರಶೇಖರಭಟ್ಟರಿಂದ 'ಭಜಭೂತ'; ೨೯ ನೇ ತಾ ಶ್ರೀ ವಿದ್ವಾನ್ ಎ ಸುಬ್ರಹ್ಮಣ್ಯಂ 'ಶ್ರೀ ವಿದ್ಯಾರಣ್ಯ ಮತ್ತು ವಿಜಯನಗರ'; ೩೦ ನೇ ತಾ ಶ್ರೀ ಮಹಾ ವಿದ್ವಾನ್ ಕೆ. ಗೋಪಾಲಕೃಷ್ಣ ಶಾಸ್ತ್ರಿಗಳಿಂದ 'ಭಕ್ತಿ'.

ಸ್ಮಾರಕ ಸ್ಪರ್ಧೆ

ರಾಜಧಾನಿಯ ಮಹಿಳಾ ಸದನದ ಸಂಸ್ಥಾಪಕರಾದ ಶ್ರೀ ಎಂ ಡಿ ಗೋಪಾಲಾಚಾರ್ಯರ ಸ್ಮಾರಕ ಸ್ಪರ್ಧೆಯು ನೆನ್ನೆ ದಿನ ನಡೆಯಿತು. ನಗರದ ನಾಲ್ಕು ಮಹಿಳಾ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಅಕ್ಕನ ಬಳಗಕ್ಕೆ ಪ್ರಥಮ ಬಹುಮಾನವೂ, ಅಮೆ ರಂಸ್ಥೆಯ ಪ್ರತಿನಿಧಿಗಳಾದ ಶ್ರೀಮತಿ ನಾರಾಯಣಿಯವರಿಗೆ ಪ್ರಥಮ ಬಹುಮಾನವೂ, ವನಿತಾ ಸದನದ ಶ್ರೀ ಎ ಎಸ್ ಸೀತಮ್ಮನವರಿಗೆ ೨ನೆ ಬಹುಮಾನವೂ, ವನಿತಾ ಸದನದ ಶ್ರೀ ಎಸ್ ನಾಗರತ್ನಮ್ಮನಿಗೆ ವಿಶೇಷ ಬಹುಮಾನವೂ ಬಂದಿತ್ತು

ಶ್ರೀ ಗುರುದೇವಾ ಟಾಕೀಸ್

20-1-48 ರಿಂದ ಮೈಸೂರಿನ

ಶ್ರೀ ರನ್ನಿಕಾ

(ಕನ್ನಡ)

ಪ್ರತಿ ದಿನ ಎರಡು ಆಟಗಳು

Printed and published by A. R. Nagarajan at the Sadhvi, D. Sublabad Road Mysore

ಕೊರ್ಟಾ ಪರಿಸುವ ಹಿಂದೂ ಮಹಿಳೆ

ಮದನಪಲ್ಲಿಯ ಹಿಂದೂ ಮಹಿಳೆಯೊಬ್ಬಳು ತನಗೆ ಉರ್ದು ಭಾಷೆ ಬರದಿದ್ದರೂ ಕೂಡ ಕೊರ್ಟಾನನ್ನು ಬಾಯಿಪಾಠ ಮಾಡಿ ದಂತೆ ಹೇಳಿ ತ್ರಿಬುವಳೆಂದು ವರದಿಯಾಗಿದೆ ಆಳುವು ಕುಳಿತು ಕೊರ್ಟಾನನ್ನು ಪರಿಸುವ ಪ್ರಸೇರವನ್ನು ಪ್ರದರ್ಶಿಸಿ ಮಾಡುವುದರಿಂದ ಹದ್ದು ಹಾಯಿಲೆ ಮತ್ತು ಕಪ್ಪಗಳು ನಿವಾರಣೆಯಾಗುವುದೆಂದು ನಂಬಿ ಸಾವಿರಾರು ಜನರು ಅಲ್ಲಿಗೆ ಬರುತ್ತಿರುವರೆಂದು ಹೇಳಲಾಗಿದೆ.

ಕಲ್ಲನ್ನು ಉಪ್ಪೆಂದು ಮೋಸ ಮಾಡಿದವನು

ಶ್ರೀನಗರದಲ್ಲಿ ಹಳ್ಳಿಯ ವನೊಬ್ಬನಿಗೆ ಉಪ್ಪೆಂದು ನಾಲ್ಕು ಸೇರು ಕಲ್ಲನ್ನು ಮಾರಿ ಮೋಸಹಡಿಸಿದವನೊಬ್ಬನನ್ನು ಪತ್ತೆ ಗಿರಿ ಮಾಡಿ ಕೋರ್ಟಿನ ಮುಂದೆ ಹಾಜರ್‌ಪಡಿಸಲಾಗಿದೆ ಆದಕ್ಕೆ ಮುಂಚೆ ಆಪಾದಿತ ಕತ್ತಿಗೆ "ಉಪ್ಪೆಂದು ಹೇಳಿ ಕಲ್ಲನ್ನು ಮಾರಿದ ಮನುಷ್ಯ" ಎಂಬ ಬೋರ್ಡನ್ನು ಕಟ್ಟಿ ನಗರದ ಬೀದಿಗಳಲ್ಲಿ ಪ್ರದರ್ಶನ ಮಾಡಲಾಯಿತೆಂದೂ ಹೇಳಲಾಗಿದೆ

ಬ್ರಿಟಿಷ್ ಪಾರ್ಲಿಮೆಂಟಿನ ಸದಸ್ಯರೊಬ್ಬರು ಅಲ್ಲಿನ ಎಲ್ಲಾ ಸರ್ಕಾರಿ ಕಛೇರಿಗಳಲ್ಲೂ ಧೂಮಪಾನ ನಿಷೇಧವನ್ನು ಜಾರಿಗೆ ತಂದರೆ ಅದು ದೇಶದ ಪ್ರಗತಿಗೆ ಸಹಾಯಕವಾಗುವುದೆಂದು ಸೂಚಿಸಿದ್ದಾರೆ

ಅಪೇರಾ ಟಾಕೀಸ್

15-1-1948 ರಿಂದ

ಪ್ರತಿ ದಿನ ೩ ಆಟಗಳು

ಜಂಗಲ್ ಬುಕ್

(ಟೆಕ್ನಿ ಕಲರ್)

ಪಾತ್ರ — ಮೈಸೂರು ನಾಬು

ಮಂಡ್ಯ ಜಿಲ್ಲಾ ಕಾಂಗ್ರೆಸ್ ಸಮಿತಿ ಸಭೆ

ಮಂಡ್ಯದ ಜಿಲ್ಲಾ ಕಾಂಗ್ರೆಸ್ ಸಮಿತಿಯು ಕಾರ್ಯಕಾರೀ ಮಂಡಲಿಯು ಇದೇ ೨೫ ನೇ ತಾ ಬೆಳಿಗ್ಗೆ ೧೦ ೩೦ ಗಂಟೆಗೆ ಮಂಡ್ಯದ ಕಾಂಗ್ರೆಸ್ ಕಛೇರಿಯಲ್ಲಿ ಸೇರುವುದು ಮೈಸೂರು ರಾಜ್ಯಾಂಗ ಸಭೆಯ ಚುನಾವಣೆಗೆ ಉಮೇದುವಾರರನ್ನು ನಿಲ್ಲಿಸುವ ವಿಚಾರದಲ್ಲಿ ಪಾಲಿಸಬೇಕಾದ ಸಮಿತಿಯ ಸದಸ್ಯರುಗಳು ಅದರಲ್ಲಿ ಭಾಗವಹಿಸುವುದರಿಂದ, ಜಿಲ್ಲಾ ಕಾಂಗ್ರೆಸ್, ನ್ಯಾಯವಿಧಾಯಕ ಮತ್ತು ಪ್ರಜಾ ಪ್ರತಿನಿಧಿ ಸಭೆ, ಜಿಲ್ಲಾಬೋರ್ಡ್ ಸದಸ್ಯರುಗಳೂ ಮತ್ತು ತಾಲ್ಲೂಕು ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷರೂ ಮತ್ತು ಕಾರ್ಯದರ್ಶಿಗಳೂ ಸಭೆಗೆ ದಯಮಾಡಿಸಬೇಕೆಂದು ಕಾರ್ಯದರ್ಶಿಗಳು ಕೋರಿಯುತ್ತಾರೆ

ವಯಸ್ಕರ ಶಿಕ್ಷಣ ಶಾಲೆ

ಮೈಸೂರು ತಾಲ್ಲೂಕು ಯಲಚಹಳ್ಳಿಯ ಕ-೦ ಪೋಷಕ ಸಂಘದ ಕೂಲಿಗಾರರಿಗೆ ಕಳೆದ ೧೭ ನೇ ತಾ ಶ್ರೀ ಬಸವಲಿಂಗಪ್ಪನವರ ನೇತೃತ್ವದಲ್ಲಿ ರಾತ್ರಿ ಶಾಲೆಯೊಂದನ್ನು ತೆರೆಯಲಾಯಿತು. ಈ ಸಂಬಂಧದಲ್ಲಿ ಅಕ್ಷರ ಪ್ರಚಾರ ಸಮಿತಿಯವರು ವಿದ್ಯಾರ್ಥಿಗಳಿಗೆ ಬಳಪ ಚಿತ್ರಗಳನ್ನು ಪ್ರದರ್ಶಿಸಿದರು. ಕೃಷ್ಣರಾಜ ನಗರದ ಜಮೀನುದಾರರಾದ ಶ್ರೀ ದೇವೇಗೌಡರು ವಯಸ್ಕರ ಶಿಕ್ಷಣ ಸಮಿತಿಯವರ ಕಾರ್ಯಕ್ರಮಗಳನ್ನು ಪ್ರಶಂಸಿಸಿದರು.

ವುಡ್‌ಲ್ಯಾಂಡ್ಸ್

16-1-48 ರಿಂದ

ಪ್ರತಿ ದಿನ ಮೂರು ಆಟಗಳು

ದಿಲ್ ರಾತ್

(ಅಮೋಘ ಹಿಂದೀ ಚಿತ್ರ)

ಪಾತ್ರ — ಸ್ನೇಹ ಪ್ರಧಾನ

(ಕರ್ನಾಟಕ ಫಿಲ್ಮ್ಸ್ ರಿಲೀಸ್)

16-1-48 ರಿಂದ ಆ ಮೋ ಘ ೧೦ ನೇ ವಾರ

ಪ್ರತಿ ದಿನ ೨ ಆಟಗಳು

★ ಮಹಾತ್ಮಾ ಕಬೀರ್ ★

(ಕನ್ನಡ)

ರಾಜಕಮಲ್ ಟಾಕೀಸಿನಲ್ಲಿ

A BOX-OFFICE HIT!

Coming Shortly at your Favourite Theatre

BACHCHON-KA-KHEL

— (HINDI) —

Directed by - RAJA NENA

Cast:— K. B. Shakuntala, N Kabir Meena Kumari, Nga Jan, Shanta Patel

Distributor: C. P. M CHANDRIAH, Asoka Road, MYSORE

ಮೂಲ ಶಿಕ್ಷಣ ಸಮಿ

ಸಂಸ್ಥಾನದ ದ್ವಿತೀಯ ಮ ಸಮ್ಮೇಳನವು ಬೆಂಗಳೂರು ಪು ರ ಪುಭುದೇವನದಲ್ಲಿ ೨೫ ನೇ ತಾ ಪ್ಪ ೪ ಗಂಟೆಗೆ ಹಿಂದೂಸ್ಥಾನೀ ಮೊ ಸಂಘದ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಆರಂಭವಾಗುವುದು. ಶಿಕ್ಷಣ ಸಚಿವರಾದ ಹೆಚ್. ಚಿಂದ್ರಶೇಖರಯ್ಯನವರು ಧಾ ಪ ಣ ಮಾಡುವರು

ಅಡಿ ಎತ್ತರದ ವ

ಅಡಿ ಎತ್ತರದ ವ್ಯಕ್ತಿ ಡು ತೂಕವುಳ್ಳ ೨೩ ವರ್ಷದ ವಾನಾಂ ಎಂಬ ಇಂಗ್ಲೆಂಡಿನವ ಶಸ್ತ್ರಚಿಕಿತ್ಸೆಗಾಗಿ ವಿಡಲ್‌ಸೆಕ್ಸ್ ಹೋದಾಗ ಆತನು ಮಲಗಲು ಜಾಗವಿಲ್ಲದೆ ಮೂರು ಹಾ ಒಟ್ಟುಗೂಡಿಸಿ ಅವನನ್ನು ಮ ಕಾಯಿತೆಂದು ಹೇಳಲಾಗಿದೆ

ಭಾರತೀಯ ರೇಡಿಂ ಸೆಟ್ಟಿ

ಪೆಸಲಿಯಾ ಶ್ರೀ ಹು ಸ ರಾ ನರು ರಾಟಿಯ ಚಕ್ರ ಮತ್ತು ನೂ ಯಲಾಗುವಷ್ಟು ಹಾಯಿಂದಲೈಗ ನ್ಸ್‌ವಿಟ್ಸನ್ನು ತಯಾರಿಸಿದ್ದಾರೆ ಮಯಾತ್ಮರ. ಉ ಪ ವಾ ಸ ಪ್ರ ನಂತರ ಅವರಿಗೆ ತೋರಿಸಲಾ ಹೇಳಲಾಗಿದೆ.

ಕುರುಬರ ವಿದ್ಯಾರ್ಥಿ

ನಂಜನಗ

ಜಿಲ್ಲೆಯ ಹೊಸ ಬಸ್ ನಿಲ್ದಾ ಕಟ್ಟಲಾಗುವ ಕುರುಬರ ವಿದ್ಯಾ ಯಿಂದ ಕಂಬುಸ್ಥಾಪನೆಯನ್ನು ತಿಂಗಳು ೧೫ ನೇ ತಾ ಮಂಗ ಜಿವರಾದ ಶ್ರೀ ಹೆಚ್. ಸಿದ್ದಯ್ಯ ನೆರವೇರಿಸಬೇಕೆಂದು ಆದರ ಸಂ ನಿರ್ಧರಿಸಿರುತ್ತಾರೆ. ಈ ಕಾರ್ಯ ಬಾಂಧವರೆಲ್ಲರೂ ಸಹಾಯ ಮಾ ದು ಪ್ರಾರ್ಥಿಸಿರುತ್ತಾರೆ ಈ ದಲ್ಲಿ ಕುರುಬ ಜನಾಂಗ ತಾಲ್ಲೂಕ ಳನವನ್ನು ನಡೆಸಬೇಕೆಂದೂ ನಿ ಸಲಾಗಿದೆ.

ಪ್ರಭುದೇವಾ ಟಾಕೀ

17-1-48 ರಿಂದ ಅಮೋಘ ಆ

ತಮಿಳು ನಾಡು ಟಾಕೀಸ

ಮದನ ಮಾ

—: ಮುಖ್ಯ ಪಾತ್ರಧಾರಿಗ

ಶ್ರೀ ರಾಮ್, ರಜನಿ, ಮ

ವಿದ್ಯಾ ಶ್ರೀನಿವಾಸನ್, ರಂಗಾ

ರಾಜಲಕ್ಷ್ಮಿ

॥ ಜೈ ಭಾರತಮಾತ ॥

ಕೆಂಪ ಬಣ್ಣದ ಮೋಕಾಲ್ಮ

ರೇಷ್ಮೆ ವಸ್ತ್ರಗಳು

ಸ್ವಾತಂತ್ರ್ಯಲಕ್ಷ್ಮಿರತ್ನ ವೆ.

ಜನರ ಆದರಕ್ಕೆ ಪಾತ್ರವಾದ ಮೈಸೂರು ಸ

ಸಾಡಿ ಬೀದಿ, ಕಾಮಯ್ಯನ ಪ್ರ

ಫೋನ್ ನಂ. ೧೬೨೦ ರಲ್ಲಿ

ಇಂಜಿ ಎಂ. ರಂಗಯ್ಯನವ

ಸಪ್ತಯ ಬಂಧವು

ಸಂಪುಟ] ಬುಧವಾರ ೨೧-೧-೪೮ [ಸಂಚಿಕೆ ೧೫೧

ಗಡಿನಾಡಿನ ಗಾಂಧಿಗೆ ಎರಡು ರೂ. ಜುಲ್ಮಾನೆ

ಮತ್ತೆ ೨೪ ಗಂಟೆ ಕರ್ಫ್ಯೂ

೩ ಮರಣ; ೧೮ ಗಾಯ

ಸ್ವಂ ಸು.ವೋ॥] ಬೆಂಗಳೂರು ೨೧

ಈ ದಿನ ಬೆಳಗ್ಗೆ ೭ ಗಂಟೆಗೆ ಮುಕ್ತಾಯವಾದ ಕರ್ಫ್ಯೂವನ್ನು ಅದೇ ಪ್ರದೇಶಗಳಲ್ಲಿ ಮತ್ತೆ ೨೪ ಗಂಟೆ ಕಾಲ ಹೆಚ್ಚಿಸಲಾಗಿದೆ. ನಿನ್ನೆ ಮಧ್ಯಾಹ್ನ ಮತ್ತು ಸಂಜೆ ನಗರವು ಕಾಂತವಾಗಿದ್ದಿತು. ೬ ಘಂಟೆ ಮೇಲೆ ಬಂದೂಕು ಲಾಠಿ ಮತ್ತು ಬೆಂಕಿ ಹಚ್ಚುವ ಪ್ರಯತ್ನಗಳು ನಡೆದುವು ಆದರೆ ಯಾವ ಸಫಲವಾಗಿಲ್ಲ. ಪರಿಸ್ಥಿತಿಯು ಇನ್ನೂ ಬಿಕ್ಕಟ್ಟಾಗಿಯೇ ಇದೆ.

ಕೋಟೆ ಹೈಸ್ಕೂಲಿನ ವಿದ್ಯಾರ್ಥಿಗಳು ಮುಷ್ಕರ ಹೂಡಿದ ಮೇಲೆ ಪರಿಸ್ಥಿತಿಯು ಬಿಗಡಾಯಿಸಿ ನಿರಾಶ್ರಿತ ಮಹಿಳೆಯೊಬ್ಬಳನ್ನು ಪುಂಡರು ಹೊಡೆದರೆಂಬ ಕೂಗು ಎದ್ದುದರಿಂದ ಉದ್ರೇಕಗೊಂಡ ಜನರ ಗುಂಪು ಗಲಭೆಯನ್ನು ಆರಂಭಿಸಿತೆಂದು ಸರ್ಕಾರದ ಪ್ರಕಟಣೆಯು ತಿಳಿಸಿರುತ್ತದೆ. ಅಂತಹ ಅಕ್ರಮಕ್ಕೆ ಬಂದ ವ್ಯಕ್ತಿಯ ಗಾಡಿಯನ್ನು ಹೊಡೆದ ಗಾಯಪಡಿಸಿದ ದಂಡವನ್ನು ಅಪ್ಪಕ್ಕೆಗೆ ಸಾಗಿಸಲಾಯಿತೆಂದು ಹೇಳಲಾಗಿದೆ. ನಿನ್ನೆ ರಾತ್ರಿ ಅಕ್ಕಿಪೇಟೆ, ಮಾಮೂಲ ಪೇಟೆ, ಕೌಂಸ್ಲ ಪೇಟೆ ಮುಂತಾದ ಕಡೆಗಳಲ್ಲಿ ಭೀಕರ ಸನ್ನಿವೇಶವುಂಟಾಗಿತ್ತು. ಕೆಲವು ಪಟ್ಟಿಗಳು ಕಾರಿದುದರಿಂದ ಇದು ವಿಸ್ತರಿಸಿತು. ಪೋಲೀಸಿನವರೂ, ಮಿಲಿಟರಿಯವರೂ ಗಸ್ತು ತಿರುಗುತ್ತಿದ್ದಾರೆ.

ಗೃಹ ಮಂತ್ರಿಗಳಾದ ಶ್ರೀ ಟಿ ಮರಿಯಪ್ಪನವರು ಇತರ ಅಧಿಕಾರಿಗಳೊಡನೆ ಮೇಲ್ಕಂಡ ಪ್ರದೇಶಗಳಲ್ಲಿ ಸಂಚರಿಸಿ ಎಚ್ಚರಿಕೆ ಕ್ರಮಗಳನ್ನು ಕೈಗೊಂಡಿರುತ್ತಾರೆ

ಇದುವರೆಗೆ ವರದಿಯಾಗಿರುವ ಪ್ರಕಾರ ೧೮ ಜನಗಳಿಗೆ ಗಾಯಗಳಾಗಿ ೩ ಜನರು ಮೃಡಿದಿದ್ದಾರೆಂದು ತಿಳಿದುಬಂದಿದೆ

ನಗರದ ಶಾಂತಿಪಾಲನೆಯಲ್ಲಿ ನಿವಾಸಿಗಳು ಸಹಕರಿಸಬೇಕೆಂದು ಸರ್ಕಾರದವರು ಪ್ರಾರ್ಥಿಸಿದ್ದಾರೆ

ವಿಮಾನ ಕಾರ್ಖಾನೆ

ಹಿಂದೂಸ್ಥಾನ ವಿಮಾನ ಕಾರ್ಖಾನೆಯು ಅಡಳಿತ ಮಂಡಲಿಯ ಸಭೆಯು ಭಾರತ ಸರ್ಕಾರದ ಕೈಗಾರಿಕಾ ಸಚಿವರಾದ ಡಾ॥ ಶ್ಯಾಮಪ್ರಸಾದ ಮುಖರ್ಜಿಯವರ ಅಧ್ಯಕ್ಷತೆಯಲ್ಲಿ ನಿನ್ನೆ ನಡೆದು ಭಾರತದ ರಕ್ಷಣಾ ಸ್ವನಿಷ್ಠೆಗೆ ಸಂಬಂಧಪಟ್ಟ ಕಾರ್ಯ ವಿಧಾನ ಮಾಡುಗಳನ್ನು ಪರಿಶೀಲಿಸಲಾಯಿತು.

ಮುಂದಿನ ತಿಂಗಳಿನಿಂದ ಪಡಿತರ ಹೆಚ್ಚುವುದು

ಬಹಿರಂಗ ಸಭೆಯಲ್ಲಿ ಕಾಂಗ್ರೆಸ್ ನಾಯಕರ ಸೂಚನೆ

ಮೈಸೂರು ೨೧

ನಿನ್ನೆ ಸಂಜೆ ಟೌನ್ ಹಾಲ್ ಮೈದಾನದಲ್ಲಿ ಶ್ರೀ ಎಸ್ ಜೆನ್ನಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಯ ಸದಸ್ಯರುಗಳಾದ ಶ್ರೀಗಳು ಟಿ ಸುಬ್ರಹ್ಮಣ್ಯಂ ಮತ್ತು ಎ ಜಿ ರಾಮಚಂದ್ರಣಯರು ಭಾಷಣ ಮಾಡಿ, ಮೈಸೂರು ರಾಜ್ಯಾಂಗ ಸಭೆಯ ವಿಜಾರಣೆಗಳನ್ನು ವಿವರಿಸಿದರು.

ಶ್ರೀ ಟಿ ಸುಬ್ರಹ್ಮಣ್ಯಂರವರು ದೇಶದ ಆಹಾರ ಪರಿಸ್ಥಿತಿಯನ್ನು ವಿವರಿಸಿ, ಈಗ ಕೊಡುತ್ತಿರುವ ೮ ಔನ್ಸ್ ಪಡಿತರವನ್ನು ಮುಂದಿನ ತಿಂಗಳಲ್ಲಿ ಹೆಚ್ಚಿಸಲಾಗುವುದೆಂದೂ ಹಾಗೆಯೇ ಆಹಾರ ವಸ್ತು ಇತರ ಪದಾರ್ಥಗಳನ್ನು ಮಾರ್ಚಿ ಅಂತ್ಯದಲ್ಲಿ ತೆಗೆದು ಹಾಕಲಾಗುವುದಾಗಿ ಪ್ರಧಾನ ಮಂತ್ರಿಗಳು ತಮಗೆ ಭರವಸೆ ಇತ್ತಿದ್ದಾರೆಂದೂ ತಿಳಿಸಿದರು. ಸಕ್ಕರೆ ಬೆಲೆಯನ್ನು ಹೆಚ್ಚಿಸಲು ಹೊರಗಡೆ ಬೆಲೆಯನ್ನು ಹೆಚ್ಚು ಮಾಡಿರುವುದರಿಂದ ಸಂಸ್ಥಾನವಲ್ಲೂ ಹಾಗೆಯೇ ಮಾಡಬಿದ್ದಲ್ಲಿ ಇಲ್ಲಿಂದ ಸಕ್ಕರೆ ಹೆಚ್ಚಾಗಿ ರವಾನೆಯಾಗುವುದರಿಂದ ಇಲ್ಲೂ ಹೆಚ್ಚಿಸಲಾಯಿತೆಂದೂ, ಇನ್ನು ೨ ತಿಂಗಳಿನ ವೊಳಗಾಗಿ ಅದರ ಬೆಲೆಯು ತಾನಾಗಿಯೇ ಇಳಿಯುವುದೆಂದೂ ತಿಳಿಸಿದರು. ರಾಜ್ಯಾಂಗ ರಚನೆಯ ವಿಷಯದಲ್ಲಿ ಅವರು ಮೊತ್ತಮೊದಲು ಪ್ರಜೆಗಳೇ ರಾಜ್ಯದ ನಿಜವಾದ ಒಡೆಯರೆಂದೂ, ಪ್ರಜೆಗಳ ಪ್ರತಿನಿಧಿಗಳು ಗೊತ್ತು ಮಾಡುವ ತಾತ್ಕಾಲಿಕ ರಾಜರು ಪ್ರಜೆಗಳನ್ನು ಪಾಲಿಸಬೇಕೆಂದೂ ತಿಳಿಸಿದರು.

ಅನಂತರ ಸಭಿಕರಿಂದ ಪ್ರಶ್ನೆಗಳ ಸುರಿಮಳೆಗಳಾಗಿ, ಗಲಭೆಗೆ ಸ್ವಾರಂಭವಾಯಿತು ಶ್ರೀ ಸುಬ್ರಹ್ಮಣ್ಯಂರವರು ಕೆಲವು ಪ್ರಶ್ನೆಗಳಿಗೆ ಉತ್ತರ ಕೊಟ್ಟರು

ನರೂ, ಸಚಿವರಾದ ಶ್ರೀ ದಾಸಪ್ಪನವರೂ ಹಾಗಿಗಳಾಗಿದ್ದರು. ಭಾರತ ಸರ್ಕಾರದ ಡಿಸ್ಪೋಸಲ್ಸ್ ಶಾಖೆಯ ಡೈರೆಕ್ಟರ್ ಜನರಲ್ ಅಪ್ಪಟರಾಯರವರನ್ನು ವಿಮಾನ ಕಾರ್ಖಾನೆಯ ಜನರಲ್ ಮ್ಯಾನೇಜರಾಗಿ ನೇಮಿಸಲಾಗಿದೆ.

ಪುಂಡುಗಂದಾಯ ವಿಧಿಸಲಾಗುವುದು

ಯಾವ ಪ್ರದೇಶದಲ್ಲಿ ಕೋಮುವಾರು ಗಲಭೆ ನಡೆಯುವುದೋ ಆ ಕ್ಷೇತ್ರದ ನಿವಾಸಿಗಳ ಮೇಲೆ ಪುಂಡುಗಂದಾಯ ವಿಧಿಸಲಾ[illegible] ಜನ[illegible] ಷ್ಟಕ್ಕೆ ಕೊಟ್ಟಿದ್ದಾರೆ.

ರಾಜ್ಯಾಂಗ ಸಭೆಗೆ ಉಮೇದುವಾರರು

ಮೈಸೂರು ೨೧

ರಾಜ್ಯಾಂಗ ಸಭೆಗೆ ಉಮೇದುವಾರರುಗಳನ್ನು ಚುನಾಯಿಸುವ ಉದ್ದೇಶ, ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಯ ಸದಸ್ಯರುಗಳು ಈ ದಿನ ನಗರ ಮತ್ತು ಜಿಲ್ಲಾ ಕಾಂಗ್ರೆಸ್ ಸಮಿತಿಗಳ ಸದಸ್ಯರೊಂದಿಗೆ ಸಮಾಲೋಚನೆ ನಡೆಸಿದರು. ರಾಜ್ಯಾಂಗ ಸಭೆ ಕಾಂಗ್ರೆಸ್ಸೇತರರನ್ನು ಸಹ ಉಮೇದುವಾರರಾಗಿ ನಿಲ್ಲಿಸಲು ಅವಕಾಶ ಕೊಡಬೇಕು ಕೆಲವರು ಸಲಹೆ ಇತ್ತರೆಂದೂ ಕಾಂಗ್ರೆಸ್ ಉಮೇದುವಾರರುಗಳ ಪಟ್ಟಿಯು ಇಂದು ಸಂಜೆ ಒಪ್ಪಿಸಲಾಯಿತೆಂದೂ ತಿಳಿದು ಬಂದಿದೆ

ಕೋಮುವಾರ ಸೌಹಾರ್ದಕ್ಕೆ ವಿದ್ಯಾರ್ಥಿಗಳ ನೆರವು

ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ಸಿನ ಕಾರ್ಯಕಾರೀ ಮಂಡಲಿಯ ಸಭೆಯು ಶ್ರೀ ಬಿ. ಪದ್ಮನಾಭಯ್ಯರವರ ಅಧ್ಯಕ್ಷತೆಯಲ್ಲಿ ನಡೆಯಿತು. ದೇಶದಲ್ಲಿ ಕೋಮುವಾದ ಸಮಸ್ಯೆಯಾಗಿ ಮಹಾತ್ಮರು ಕೈಗೊಂಡ ಉಪವಾಸವು ಯಶಸ್ವಿಯಾಗಿ ಕೊನೆಗೊಂಡುದಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸಿ, ಕೋಮುವಾರ ಸೌಹಾರ್ದಕ್ಕಾಗಿ ಹಗಲು ವಿದ್ಯಾರ್ಥಿ ಕಾಂಗ್ರೆಸ್ಸು ಪ್ರತಿಜ್ಞೆ ಮಾಡುತ್ತದೆ-ಎಂಬ ನಿರ್ಣಯವನ್ನು ಸ್ವೀಕರಿಸಲಾಯಿತು ಬೆಂಗಳೂರಿನಲ್ಲಿ ಈ ದಿನ ಅಕಸ್ಮಿಕವಾಗಿ ತಲೆದೋರಿದ ಕೆಲವು ಅಹ್ಲಾದವನ್ನು ವ್ಯಕ್ತಪಡಿಸಿ, ಸೌಹಾರ್ದದಿಂದಿರಬೇಕೆಂದು ಕೋರುವ ಕರಾವನ್ನೂ ಸಹ ಸ್ವೀಕರಿಸಲಾಯಿತು

ವಿದ್ಯಾರ್ಥಿ ಕಾಂಗ್ರೆಸ್ಸಿನ ಈ ವರ್ಷದ ನೂತನ ಕಾರ್ಯಕಾರೀ ಮಂಡಲಿಗೆ ಉಮೇದುವಾರರಾಗಿ ನಿಲ್ಲುವವರು ಇದೇ ೨೮ ನೇ ತಾರೀಖಿನೊಳಗಾಗಿ ಉಮೇದುವಾರಿಕೆ ಪತ್ರಗಳನ್ನು ಸಲ್ಲಿಸಬೇಕೆಂದು ಕಾರ್ಯದರ್ಶಿಗಳು ತಿಳಿಸಿದ್ದಾರೆ

ನಿರಾಶ್ರಿತರಿಗೆ ಸಹಾಯ

ಪಾಕಿಸ್ತಾನದಲ್ಲಿರುವ ಪಂಜಾಬಿನ ನಿರಾಶ್ರಿತರಿಗಾಗಿ ವೈಸೂರು ಪವರ್ ಮೆಷಿನ್ ಮತ್ತು ಕೈಮಗ್ಗದ ಮಾಲೀಕರ ಸಂಘವು ೧೦೦ ಗಜ ಬಟ್ಟೆಯನ್ನು ಕೊಡುವುದೆಂದು ತಿಳಿಸಲಾಗಿದೆ

ಪಾಕಿಸ್ತಾನಕ್ಕೆ ಮಹಾತ್ಮರ ಭೇಟಿ

ಪಾಕಿಸ್ತಾನ ಸರ್ಕಾರದವರು ತಮ್ಮನ್ನು ಭೇಟಿ ಮಾಡಲು, ಮಿತ್ರನೆಂದು ನಂಬಿರುವ ದೇಹಸ್ಥಿತಿ ಉತ್ತಮಗೊಂಡ ಮೇಲೆ ಪಾಕಿಸ್ತಾನಕ್ಕೆ ಹೋಗಬೇಕೆಂದು ಮಹಾತ್ಮ ಗಾಂಧಿ ತಿಳಿಸಿರುತ್ತಾರೆ

ಜೈಲ್ ಗೆಫಾರ್ಯಾಸರಿಗೆ ಶಿಕ್ಷೆ

ಮಹಿನ ಗಾಂಧಿಯವರನ್ನು ಸಿದ ಬಾರ್ ಗೆಫಾರ್ಯಾರವರು ರಹದಾರಿ ಪಡೆದುಕೊಳ್ಳದೆ ಹೊಂದಿದ್ದರೆಂಬ ಯ ಮೇಲೆ ನಗರ ನ್ಯಾಯಾಧೀಶರು ಜುಲ್ಮಾನೆ ಶಿಕ್ಷೆಯಲ್ಲಿ ಕೋರ್ಟಿನ ಅವಧಿಗೂ ಶಿಕ್ಷೆಯನ್ನು ವಿಧಿಸಿದರು. ಅವರು ಜುಲ್ಮಾನೆ ನಿರಾಕರಿಸಿದುದರಿಂದ ಕೋರ್ಟಿನ ಅವಧಿ ಮುಕ್ತಾಯವಾಗುವ ವರೆಗೂ ಅವರನ್ನು ಜೈಲಿಗೆ ಹಾಕಲಾಯಿತು.

ಮಹಾತ್ಮರ ಪ್ರಾರ್ಥನಾ ಸಭೆಯಲ್ಲಿ ನಾಡು ಬಾಂಬು

ಒಬ್ಬನ ದಸ್ತಗಿರಿ

ನಿನ್ನೆ ದಿವಸ ಸಂಜೆ ದೆಹಲಿಯಲ್ಲಿ ಮಹಾತ್ಮರು ಪ್ರಾರ್ಥನಾ ಸಭೆ ನಡೆಸುತ್ತಿದ್ದಂತೆಯೇ ಸಭೆಯ ಆವರಣದಲ್ಲಿ ನಾಡು ಬಾಂಬೊಂದು ಸಿಡಿದ ಕೆಂದು ಸರ್ಕಾರಾನ ಬಂದಿದೆ ಈ ಸಂಬಧದಲ್ಲಿ ಸ್ಥಳದಲ್ಲಿಯೇ ಇದ್ದ ಒಬ್ಬನನ್ನು ದಸ್ತಗಿರಿ ಮಾಡಿರುವುದಾಗಿ ವರದಿಯಾಗಿದೆ. ಮಹಾತ್ಮರು ಈ ಘಟನೆ ಬಗ್ಗೆ ಶಾಂತಚಿತ್ತರಾಗಿದ್ದರೆಂದು ಗೊತ್ತಾಗಿದೆ

ದಸ್ತಗಿರಿಯಾದವನ ಬಳಿ ಕುತ್ತೊಂದು ಬಾಂಬು ಸಿಕ್ಕಿತೆಂದೂ ವರದಿಯಾಗಿದೆ ಸಾಲ್ಕು ಜನರು ಒಂದು ಜೀಪ್ ಕಾರಿನಲ್ಲಿ ಪ್ರಾರ್ಥನಾ ಸ್ಥಳಕ್ಕೆ ಬಂದರು ಕಾರನ್ನು ಸ್ವಲ್ಪ ದೂರದಲ್ಲಿ ನಿಲ್ಲಿಸಿ ಅದರಿಂದ ಒಬ್ಬನು ಇಳಿದು ಬಂದು ಮಹಾತ್ಮರು ಕುಳಿತಿದ್ದ ಕಡೆಯ ಹಿಂಭಾಗದಿಂದ ಬಾಂಬನ್ನು ಎಸೆದನು ಅಲ್ಲಿದ್ದ ಒಬ್ಬ ಅಳು ತಂತನ್ನು ಹಿಡಿದನು. ಇತರ ಮೂವರು ಜೀಪಿನಲ್ಲಿ ಕುಳಿತು ಪಲಾಯನ ಮಾಡಿದರು

ಅಪಾದಿತನು ಪೂರ್ವ ಪಂಜಾಬಿನ ಒಬ್ಬ ನಿರಾಶ್ರಿತನೆಂದೂ ಮಹಾತ್ಮರ ಶಾಂತಿ ಚಳುವಳಿಯು ತನಗೆ ಹಿಡಿಸದೆ ಹಾಗು ಆ ಕೃತ್ಯದಲ್ಲಿ ತೊಡಗಿದುದಾಗಿಯೂ ಹೇಳಿದನು. ತಾನು ದೆಹಲಿಯ ಮಸೀದಿಯೊಂದರಲ್ಲಿ ವಾಸಿಸುತ್ತಿದ್ದುದಾಗಿಯೂ ಇದನ್ನು ಪೂರಿ ಸಾಬೀತು ಮಾಡಬೇಕೆಂದು ಹೇಳಿದುದು ತಪ್ಪಗೆ ಪೈರಿ ಸಲಿಲ್ಲವೆಂದೂ ಆತನು ತಿಳಿಸಿದುದಾಗಿ ವರದಿಯಾಗಿದೆ.

ಕಾಶ್ಮೀರ ಸಮಸ್ಯೆ ಪರಿಶೀಲಿಸಲು ಶ್ರೀರಾಮ್ಯ ಸಮಿತಿ

ಕಾಶ್ಮೀರದ ಸಮಸ್ಯೆಯನ್ನು ಪರಿಶೀಲಿಸಲು ಒಂದು ತ್ರಿಸದಸ್ಯ ಸಮಿತಿಯನ್ನು ನೇಮಿಸತಕ್ಕದ್ದೆಂದು ಭದ್ರತಾ ಸಮಿತಿಯಲ್ಲಿ ನಿರ್ಣಯ ಸಲಾಯಿತು ಸದರಿ ಸಮಿತಿಯಲ್ಲಿ ಪಾಕಿಸ್ತಾನದಿಂದ ಒಬ್ಬ ಪ್ರತಿನಿಧಿಯೂ ಭಾರತದಿಂದ ಒಬ್ಬ ಪ್ರತಿನಿಧಿಯೂ ಮತ್ತು ಈ ಎರಡು ರಾಷ್ಟ್ರಗಳು ಒಪ್ಪುವ ಮೂರ್ನೆಯ ಪ್ರತಿನಿಧಿಯೂ ಇರತಕ್ಕದ್ದೆಂದೂ ಸೂಚಿಸಲಾಗಿತ್ತು. ನಿರ್ಣಯವು ಒಕ್ಕಮತೀಯವಾಗಿ ಅಂಗೀಕಾರವಾಯಿತು. ಈ ಸೂಚನೆಯನ್ನು ರಷ್ಯದ ಪ್ರತಿನಿಧಿಯು ವಿರೋಧಿಸಿದ್ದನ್ನು ಭದ್ರತಾ ಸಮಿತಿಯ ಸದಸ್ಯರೇ ಈ ಸಮಿತಿಯಲ್ಲಿ ಸದಸ್ಯರಾಗಿರಬೇಕೆಂಬ ಸೂಚನೆಯನ್ನು ಮೇಲ್ಕಂಡ ಸಮಿತಿಯ ಕಾರ್ಯಕ್ರಮಗಳನ್ನು ಶ್ರೀರಥದ್ದೇ ತನ್ನ ಕಾರ್ಯಕ್ರಮಗಳನ್ನು ನಡೆಸಕಕ್ಕದ್ದೆಂದೂ ತೀರ್ಮಾನಿಸಲಾಯಿತು.

ಅಮೆರಿಕದಲ್ಲಿ ಗಾಂಧಿಜಿಯರ ವರ ಸ್ಮಾರಕ

ವಾಷಿಂಗ್ಟನ್ನಿನಲ್ಲಿ ಗಾಂಧೀಜಿಯವರ ಸ್ಮಾರಕವೊಂದನ್ನು ಸರ್ಕಾರದವರು ನಿರ್ಮಿಸಬೇಕೆಂದು ಅಮೆರಿಕದ ಪ್ರತಿನಿಧಿ ಸಭೆಯಲ್ಲಿಮಿ ಎಮ್ಮಾನ್ಯುಯೆಲ್ ಸೆಲ್ಲರ್ ರವರು ಒಂದು ಮಸೂದೆಯನ್ನು ಮಂಡಿಸಿರುವರೆಂದು ಹೇಳಲಾಗಿದೆ ಈ ಸ್ಮಾರಕದ ವೆಚ್ಚವನ್ನು ಅಮೆರಿಕದ ಸರ್ಕಾರಕ್ಕೆ ವಹಿಸಿದೆ ಇಂಡಿಯಾ ಲೀಗಿನವರೇ ಅದನ್ನು ವಹಿಸಿಕೊಳ್ಳುವರೆಂದು ತಿಳಿಸಲಾಗಿದೆ.

● ಬರ್ಮಾ ಮಂತ್ರಿಗಳಿಗೆ ೧೭೦೦ ರೂ. ಪ್ರಧಾನಿಗೆ ೨೩೦೦ ರೂ ಮತ್ತು ಪಾರ್ಲಿಮೆಂಟ್ ಸದಸ್ಯರಿಗೆ ತಿಂಗಳಿಗೆ ೨೦೦ ರೂ ಸಂಬಳವನ್ನು ನಿರ್ಧರಿಸಲಾಗಿದೆ

ಭದ್ರಾವತಿ ಕಾರ್ಖಾನೆಯ ರಜತ ಮಹೋತ್ಸವ

ಶ್ರೀಮನ್ಮಹಾರಾಜರವರ ಸಂದೇಶ

ಭದ್ರಾವತಿ ೨೦

ಮೊನ್ನೆ ದಿನ ಹಣಕಾಸಿನ ಸಚಿವರಾದ ಶ್ರೀ ಹೆಚ್ ಸಿ ದಾಸಪ್ಪನವರ ಅಧ್ಯಕ್ಷತೆಯಲ್ಲಿ ಭದ್ರಾವತಿ ಕಬ್ಬಿಣದ ಕಾರ್ಖಾನೆಯ ರಜತ ಮಹೋತ್ಸವವು ವೈಭವದಿಂದ ನೆರವೇರಿತು ಶ್ರೀಮನ್ಮಹಾರಾಜರವರು ಈ ಸಮಾರಂಭಕ್ಕಾಗಿ ಒಂದು ಸಂದೇಶವನ್ನು ಕಳುಹಿಸಿದ್ದರು ಈ ಕಾರ್ಖಾನೆ ಇದುವರೆಗೆ ಮಾಡಿರುವ ಅನೇಕ ಉಪಯೋಗವಾದ ಕಾರ್ಯಗಳನ್ನು ಪ್ರಭುಗಳು ಪ್ರಶಂಸಿಸಿ ಆದರ ಭವಿಷ್ಯವು ಭವ್ಯವಾಗಿ ಬೆಳಗಲೆಂದು ಹಾರೈಸಿದರು ಕಾರ್ಖಾನೆಗಾಗಿ ಕೆಲಸ ಮಾಡುವವರೆಲ್ಲರಿಗೂ ಸುಖಸಂತೋಷಗಳು ಲಭಿಸಲೆಂದು ಕೋರಿದ್ದರು

ಮಾಜಿ ದಿವಾನರುಗಳಾದ ಸರ್ ಎಂ ವಿಶ್ವೇಶ್ವರಯ್ಯ, ಸರ್ ಆಲ್ಬರ್ಟ್ ಜ್ಯಾನಡೆ ಮತ್ತು ಪ್ರಧಾನ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರುಗಳೆಂದ ಬಂದ ಶುಭ ಸಂದೇಶಗಳನ್ನು ಓದಲಾಯಿತು

ಅಧ್ಯಕ್ಷರಾದ ಶ್ರೀ ಹೆಚ್ ಸಿ ದಾಸಪ್ಪನವರು ತಮ್ಮ ಭಾಷಣದಲ್ಲಿ ಇದೇ ದಿನ ಮಹಾತ್ಮಾ ಗಾಂಧಿಯವರು ಉಪವಾಸವು ಮುಕ್ತಾಯವಾದುದಕ್ಕೆ ಸಂತೋಷವನ್ನು ವ್ಯಕ್ತಪಡಿಸಿ ಪ್ರಜಾಪ್ರಭುತ್ವವು ನೆಲೆಗೊಳ್ಳಲಿರುವ ಈ ಸಮಯದಲ್ಲಿ ಬಡಜನರ ಹಿತಸಾಧನೆಯ ಕಾರ್ಯಗಳಿಗೆ ಹೆಚ್ಚು ಹೆಚ್ಚಾದ ಪ್ರೋತ್ಸಾಹವು ದೊರೆಯಲೆಂದು ಹಾರೈಸಿದರು ಕಾರ್ಖಾನೆಯ ಕೆಲಸಗಾರರಿಗೆ ಒದಗಿಸಲಾಗುಗ ಸೌಕರ್ಯಗಳನ್ನು ವಿವರಿಸಿದರು ಮತ್ತು ಅವರ ಸಂಬಳ ಸಾರಿಗೆಗಳ ಪುನರ್ವಿಮರ್ಶೆಯ ಬಗ್ಗೆ ಬಂದಿರುವ ಸಲಹೆಗಳನ್ನು ಸರ್ಕಾರದವರು ಪರಿಶೀಲಿಸುತ್ತಿರುವರೆಂದೂ ತಿಳಿಸಿದರು

ಲಲಿತಕಲಾ ಸಂಘದ ಆರಂಭೋತ್ಸವ

ರಾಜಧಾನಿಯ ಸೆಂಟ್ ಫಿಲೋಮಿನ ಕಾಲೇಜಿನ ಲಲಿತ ಕಲಾ ಸಂಘದ ಆರಂಭೋತ್ಸವವು ನಿನ್ನೆ ಸಂಜೆ ಮಹಾರಾಜ ಕಾಲೇಜಿನ ಡಾ॥ ಎಸ್ ನಾರಾಯಣ ಶಾಸ್ತ್ರಿಗಳವರಿಂದ ನೆರವೇರಲ್ಪಟ್ಟಿತು. ಶ್ರೀ ಎಸ್ ಎಸ್. ಸ್ವಾಮಿ ಮತ್ತು ಡಾ॥ ಪುರು ಪೋತ್ತಂದನರುಗಳು ಭಾಷಣ ಮಾಡಿದರು

ಜಿನ್ನಾರವರ ಮೋಟಾರಿನ ಅಮದಿಗೆ ಅಡ್ಡಿ

ಪಾಕಿಸ್ತಾನವು ತರಿಸುವ ಅನೇಕ ಮೆರ್ಸಿಡೀಸ್ ಮೋಟಾರು ಕಾರುಗಳ ರವಾನೆಯನ್ನು ಭಾರತ ಸರ್ಕಾರದ ಅಜ್ಞೆ ಮೇರೆ ದೋಬಾಳುನಲ್ಲಿ ನಿಲ್ಲಿಸಲಾಗಿರೆಯೆಂದು ಪಾಕಿಸ್ತಾನ ಸರ್ಕಾರವು ಭಾರತದ ಮೇಲೆ ದೂರು ಹಾಕಿದೆ. ಪಾಕಿಸ್ತಾನ ಗವರ್ನರ್ ಜನರಲ್ ಮಿ॥ ಜಿನ್ನಾರವರ ಉಪಯೋಗಕ್ಕಾಗಿ ತರಿಸಿರುವ ಅಮೂಲ್ಯವಾದ ಒಂದು ಕಾರು ಸಹ ಆದರಲ್ಲಿ ಇದೆಯೆಂದೂ ಹೇಳಲಾಗಿದೆ.

ಗಾಂಧೀಜಿಯವರಿಗೆ ನಿ ಜಾ ನು ರ ಸಂ ದೇ ಶ

ಮಹಾತ್ಮರ ತಪಸ್ಸು ಪೂರ್ಣ ಕಾಂತಿ ಸೌಹಾರ್ದಗಳನ್ನುಂಟು ಮಾಡುವ ನಂಬಿಕೆಯಿದೆಯೆಂದು ಹೈದರಾಬಾದ್ ನಿಜಾಮರು ಸಂದೇಶ ಕಳುಹಿಸಿದ್ದಾರೆ.

ಗಾಂಧೀಜಿಯವರಿಂತ ಹೆಚ್ಚಿನ ಪ್ರೀತಿ ಪಡೆದವರಾರೂ ವಿಶ್ವದ ಯಾವ ರಾಷ್ಟ್ರದಲ್ಲೂ ಜನಿಸಿಲ್ಲವೆಂದು ಸರ್ ಫಿರೋಜ್ ಖಾನ್ ನೂರವರು ತಿಳಿಸಿದ್ದಾರೆ.

ಹಿಂದಿಯು ಇಂದೂರಿನ ರಾ ಜ ಭಾ ಷೆ

ಹಿಂದಿಯು ಇನ್ನು ಮುಂದೆ ಇಂದೂರು ಸಂಸ್ಥಾನದ ರಾಜ ಭಾಷೆಯಾಗಿರತಕ್ಕದ್ದೆಂದು ಅಲ್ಲಿನ ಪುರಾಣಿಕರು ತಿಳಿಸಿದ್ದಾರೆ

ವುಡ್‌ಲ್ಯಾಂಡ್ಸ್

16-1-48 ರಿಂದ

ಪ್ರತಿ ದಿನ ಮೂರು ಆಟಗಳು

ದಿ ಕ್ರಾತ್

(ಅಮೋಘ ಹಿಂದೀ ಚಿತ್ರ)

ಪಾತ್ರ — ಸ್ನೇಹ ಪ್ರಭಾ

(ಕರ್ನಾಟಕ ಫಿಲ್ಮಂ ರಿಲೀಸ್)

Edited printed and published by A. R. Nagarajan at the Sadhvi press D. Subbaiah Road Mysore.

೨೪೮ ಲಕ್ಷ ನೋಟುಗಳ ನಾ ಶ

ಬ್ಯಾಂಕ್ ಆಫ್ ಇಂಗ್ಲೆಂಡ್ ಸಂಸ್ಥೆಯು ವರು ಒಂದು ವಾರದಲ್ಲಿ ೩೭ ಟನ್ ತೂಕ ವುಳ್ಳ ೨೪೮ ಲಕ್ಷ ನೋಟುಗಳನ್ನು ಕಚ್ಚಿ ರಿಸಿ ಹೊರುವಾಡಿ ನಾಶಪಡಿಸಿದರೆಂದು ಹೇಳಲಾಗಿದೆ ಈ ನೋಟುಗಳು ಅನೇಕ ಬ್ಯಾಂಕುಗಳಿಂದ ವಾಪಸುಬಂದು ಪುನಃ ಚಲಾವಣೆಗೆ ಕೊಡದಿದ್ದವೆಂದು ಹೇಳಲಾಗಿದೆ

ಚಳಿಯಿಂದ ಅಮೆರಿಕದಲ್ಲಿ ೭ ಜನರ ಮರಣ

ಅಮೆರಿಕದ ಮಧ್ಯ ರಾಷ್ಟ್ರಗಳಲ್ಲಿ ಅತ್ಯಂತ ಹೆಚ್ಚಿನ ಚಳಿ ಉಂಟಾಗಿ ೭ ಜನರು ಮಡಿದರೆಂದು ವರದಿಯಾಗಿದೆ

ಅಪರಾಧಿಗಳಿಲ್ಲದೆ ಜೈಲನ್ನು ಮುಚ್ಚಲಾಯಿತು

ಸ್ವೀಡನ್ನಿನ ಹುಂಡ್ ಬೋಸ್ತರ್ ಎಂಬಲ್ಲಿರುವ ಜೈಲನ್ನು ಮುಚ್ಚಲು ಅಲ್ಲಿನ ಅಧಿಕಾರಿಗಳು ನಿರ್ಧರಿಸಿದ್ದಾರೆ ಅನೇಕ ಕಾಲದಿಂದ ಅಲ್ಲಿ ಯಾವ ಅಪರಾಧಿಗಳೂ ಇಡಿಯದೇ ಒಬ್ಬ ಅಪರಾಧಿಯನ್ನೂ ಜೈಲಿಗೆ ಕಳುಹಿಸುವ ಅವಕಾಶವುದಗಿಲ್ಲದುದರಿಂದಲೇ ಮೇಲ್ಕಂಡ ನಿರ್ಧಾರಕ್ಕೆ ಬರಲಾಯಿತೆಂದು ಹೇಳಲಾಗಿದೆ. ಜೈಲಿನ ಸಾಮಾನುಗಳನ್ನೂ ಮತ್ತು ಉಡುಪನ್ನೂ ಮಾರಲಾಗುವುದೆಂದು ತಿಳಿಸಲಾಗಿದೆ

ನಿದ್ರೆ ಬರಿಸುವ ನೂತನ ಪ್ರ ಯೋ ಗ

ಗಾಢ ನಿದ್ರೆ ಬರುವಂತೆ ಮಾಡುವ ನೂತನ ಪ್ರಯೋಗವೊಂದನ್ನು ಲಂಡನ್ನಿನ ವೈದ್ಯರುಗಳು ಕಂಡುಹಿಡಿದಿದ್ದಾರೆ ಈ ಪ್ರಯೋಗದಿಂದ ೧೧ ವರ್ಷ ದೊಡವಾದ ಸಶಕ್ತನಾದ ಕುಡುಗನ ಮನೋಭಾವವನ್ನೇ ಬದಲಾಯಿಸಲಾಯಿತೆಂದು ಹೇಳಲಾಗಿದೆ

॥ ಜೈ ಭಾರತಮಾತ ॥

ಕಂಪು ಬಣ್ಣದ ಮೊಳಕಾಲ್ಮೂರು

ರೇಷ್ಮೆ ವಸ್ತ್ರಗಳು

ಸ್ವದೇಶಿಯಲ್ಲಿರುತ್ತವೆ.

ಜವಳಿ ವರ್ತಕರು ಮೈಸೂರು ಕಾಳಿಮ್ಮನ ಗುಡಿ ಬೀದಿ, ಶಾಮಯ್ಯನ ಛತ್ರದ ಹೋದ್ ನಂ. ೧೭೩ ರಲ್ಲಿ ಇರುವ ಎಂ. ರಂಗಯ್ಯನವರಲ್ಲಿ ಪಡೆಯಬಹುದು.

ಹುಣಸೂರು ತಾಲ್ಲೂಕು ಸಮ್ಮೇಳನ

ಹುಣಸೂರು ತಾಲ್ಲೂಕು ಸಮ್ಮೇಳನವು ಇದೇ ೨೩ ನೇ ತಾಂ ಮಧ್ಯಾಹ್ನ ೧ ಗಂಟೆಗೆ ಅಲ್ಲಿನ ಪೌರಸಭಾಧ್ಯಕ್ಷರಾದ ಶ್ರೀ ಎ ಎ. ಶ್ರೀನಿವಾಸಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಕಛೇರಿಯಲ್ಲಿನಡೆಯುವುದು

ಮಿಡಲ್ ಸ್ಕೂಲಿಗೆ ಸ್ಪೇಷ್ಟ್ ಸ್ಕೌಟ್ ಷೀಲ್ಡು

ನಂಜನಗೂಡು ೧

ಇಲ್ಲಿನ ಕನ್ನಡ ಬಾಲಕರ ಮಿಡಲ್ ಸ್ಕೂಲಿಗೆ ಶ್ರೀ ಸಿ ಆರ್. ರೆಡ್ಡಿಯವರ ಸ್ಮಾರಕ ಜನಿಕ ಸ್ಪೇಷ್ಟ್ ಸ್ಕೌಟ್ ಷೀಲ್ಡು ದೊರೆತಿದೆ ಸಂಸ್ಥಾನದಲ್ಲಿ ಮಿಡಲ್ ಸ್ಕೂಲಿಗೆ ಈ ಬಹುಮಾನವು ದೊರೆತಿರುವುದು ಇದೇ ಪ್ರಥಮ.

ಶ್ರೀ ಕೃಷ್ಣರಾಜೇಂದ್ರ ಮಿಲ್ಸ್ ಲಿಮಿಟೆಡ್

ಮೈಸೂರು

ಟೆಂಡರ್ ನೋಟೀಸು

ಮೈಸೂರು ಶ್ರೀ ಕೃಷ್ಣರಾಜೇಂದ್ರ ಮಿಲ್ಸ್ ಕಟ್ಟಡದ ಆವರಣದಲ್ಲಿರುವ ಸುಮಾರು ೭೯೦೦ ಚದರ ಗಜ ವಿಸ್ತೀರ್ಣದ ಕಟ್ಟಡವನ್ನು ಬಡಾಯಿಸುವ ಬಗ್ಗೆ ಮೊಹರಾದ ಟೆಂಡರುಗಳು ಯಾ ಜನರಲ್ ಮ್ಯಾನೇಜರವರಿಂದ ಕೊಡಲಾಗುವುದು. ಟೆಂಡರುಗಳು 31 ನೇ ತಾರೀಖು ಮಧ್ಯಾಹ್ನ ೩ ಗಂಟೆ ವರೆಗೆ ಸ್ವೀಕರಿಸಲ್ಪಡುವುದು.

ಪ್ರತಿ ಟೆಂಡರಿನೊಡನೆ 750 ರೂಪಾಯಿಗಳನ್ನು ಮುಂಗಡವಾಗಿ ರೇವಣಿ ಇಡಬೇಕು

ಟೆಂಡರುದಾರರು ನಿಯಮಾನುಸಾರವಾಗಿ ಡಿಪಾಸಿಟ್ ಧಾರಣಗಳನ್ನು ಹೆಚ್ಚಿನ ವಿವರಗಳಿಗೆ ಮೇಲಿನ ವಿಳಾಸಕ್ಕೆ ಪತ್ರ ಬರೆಯುದು. ಕಟ್ಟಡದ ನಕ್ಷೆಯನ್ನು ಕಛೇರಿ ದಿವಸಗಳಲ್ಲಿ ಕೆಲಸದ ವೇಳೆಯಲ್ಲಿ ನೋಡಬಹುದು

ಕಟ್ಟಡದ ಕೆಲಸವು ಟೆಂಡರು ಸ್ವೀಕಾರವಾದ 4 ತಿಂಗಳುಗಳೊಳಗಾಗಿ ಪೂರ್ತಿಯಾಗಿ ಮುಗಿಸಲ್ಪಡಬೇಕು.

ಎಂ. ಆರ್. ಶ್ರೀನಿವಾಸಯ್ಯಂಗಾರ್
ಜನರಲ್ ಮ್ಯಾನೇಜರ್

ಪ್ರಭುದೇವಾ ಟಾಕೀಸಿನಲ್ಲಿ

25-1-48 ನೇ ಭಾನುವಾರದಿಂದ

ಅಮೋಘ ಪ್ರಾರಂಭ :: ಪ್ರತಿ ದಿನ ೩ ಆಟಗಳು

ಪಂ ಪಾ ಪಿಕ್ಚರ್ಸ್ ರವರ

* ಚಂ ದ್ರ ಹಾ ಸ *

ಅನುಪಮ ಸಂಗೀತ, ಆಕರ್ಷಕ ನೃತ್ಯ, ಅಭಿನಯಗಳಿಂದ ಕೂಡಿದ ಕನ್ನಡ ಚಿತ್ರ

CHANDRAHASA

ಸಂಪುಟ ೬] ಗುರುವಾರ ೨೨-೧-೪೪ [ಸಂಚಿಕೆ ೧೩೨

ಮಹಾತ್ಮರ ಜನ್ಮ ಸ್ಥಳದಲ್ಲಿ ಕೀರ್ತಿ ಮಂದಿರದ ಸ್ಥಾಪನೆ

ಪೋರ್ಬಂದರಿನಲ್ಲಿ ಕೀರ್ತಿಮಂದಿರ ಸ್ಥಾಪನೆ

ರಾಜಕೋಟೆಯ ಪೋರ್ಬಂದರಿನಲ್ಲಿ ಮಹಾತ್ಮರ ಜನ್ಮಸ್ಥಳದ ಬಳಿ ಒಂದು ಕೀರ್ತಿ ಮಂದಿರವನ್ನು ಕಟ್ಟಲು ಅಲ್ಲಿನ ಸೇಠ್ ನಾಂಜಿ ಭಾಯಿ ಖಾಳಿದಾಸ್ ಎಂಬುವರು ನಿರ್ಧರಿಸಿದ್ದಾರೆ. ಇದಕ್ಕೆ ೩॥ ಲಕ್ಷ ರೂ. ವೆಚ್ಚವಾಗುವುದೆಂದೂ, ಇದರ ಅಸ್ತಿವಾರ ಶಿಲಾ ಸ್ಥಾಪನೆಯನ್ನು ಇದೇ ೩೦ ನೇ ತಾರೀಖು ನಿರೀಶ್ವರಲಾಗುವುದೆಂದೂ ಹೇಳಲಾಗಿದೆ. ಇದರೊಡನೆ ಒಂದು ಕೀರ್ತಿ ಸ್ತಂಭವನ್ನು ನಿರ್ಮಿಸಿ ಅದರಲ್ಲಿ ಮಹಾತ್ಮರ ಸಂದೇಶಗಳನ್ನು ಕೆತ್ತಲಾಗುವುದು

ಕಾಶ್ಮೀರ ಸಮಸ್ಯೆಯ ವಿಶೇಷ ಸಮಿತಿ ಸದಸ್ಯರು

ಕಾಶ್ಮೀರದ ಸಮಸ್ಯೆಯನ್ನು ಪರಿಶೀಲಿಸಲು ನೇಮಕವಾಗಿರುವ ಸಮಿತಿಯಲ್ಲಿ ಕೆನಡ, ಸಿರಿಯ ಮತ್ತು ಬೆಲ್ಜಿಯಂ ರಾಷ್ಟ್ರಗಳ ಪ್ರತಿನಿಧಿಗಳು ಸದಸ್ಯರಾಗಿರ ಬೇಕೆಂದು ಹೇಳಲಾಗಿದೆ ಭಾರತ ಮತ್ತು ಪಾಕಿಸ್ತಾನಗಳ ಪ್ರತಿನಿಧಿಗಳು ಯಾರೆಂಬುದು ಇನ್ನೂ ನಿರ್ಧಾರವಾಗಿಲ್ಲ

ಪಾಕಿಸ್ತಾನಕ್ಕೆ ಮತ್ತೆ ೨೯ ಕೋಟಿ ರೂ ಸಾಲ

ಪ್ರಧಾನಿ ಸುಹ್ರವರ್ದಿಯವರು ಈಗಾಗಲೇ ಪಾಕಿಸ್ತಾನಕ್ಕೆ ೫೧ ಕೋಟಿ ರೂ ಸಾಲವನ್ನು ಕೊಟ್ಟಿರುತ್ತಾರೆ. ಭಾರತ ಸರ್ಕಾರದೊಡನೆ ನಿಕಾಯ ಸರ್ಕಾರದವರು ಸಮಾಲೋಚನೆ ನಡೆಸಿ ಪಾಕಿಸ್ತಾನಕ್ಕೆ ಮತ್ತೆ ೪೦ ಕೋಟಿ ರೂ ಸಾಲ ಕೊಡಲು ಯೋಚಿಸಿರುವುದಾಗಿ ವರದಿಯಾಗಿದೆ

ಬಾಂಬಿನ ಪ್ರಕರಣದ ಬಗ್ಗೆ ಮಹಾತ್ಮರ ಹೇಳಿಕೆ

ನಿನ್ನೆಯ ದಿವಸ ಮಹಾತ್ಮರು ಪ್ರಾರ್ಥನಾ ಸಭೆಯಲ್ಲಿ ಭಾಷಣ ಮಾಡಿ ಮೊನ್ನೆ ನಡೆದ ಬಾಂಬಿನ ಪ್ರಕರಣವನ್ನು ಪ್ರಸ್ತಾಪಿಸಿ ಬಾಂಬಿನೆದವನನ್ನ ಬಗ್ಗೆ ಕರುಣೆ ತೋರಿಸಬೇಕೆಂದೂ, ಆತನು ಹಲವಾರು ಪ್ರೇರೇಪಣೆಗೆ ಒಳಗಾಗಿ ಈ ಕೃತ್ಯವನ್ನೆಸಗಿದನೆಂದೂ, ಆತನಿಗೆ ಪ್ರಾಣೋದಯವಾಗುವಂತೆಯೂ ಭಗವಂತನಲ್ಲಿ ಪ್ರಾರ್ಥಿಸುವುದಾಗಿಯೂ ತಿಳಿಸಿದರು

ನೇತಾಜಿ ಜಯಂತಿ

ರಾಜಧಾನಿಯ ನೇತಾಜಿ ಸಂಘವು ನಾಳೆ ಬೆಳಿಗ್ಗೆ ೮ ಗಂಟೆಗೆ ನೇತಾಜಿ ಸುಭಾಷರ ಜಯಂತಿಯನ್ನು ಸುಭಾಷಾಯನಕೆರೆ [illegible] ಶ್ರೀ ಅಗಂ [illegible] ಸ್ಮರಣೆ ಮಾಡಲಿದೆ

ಸೆನೆಟ್ ಸಭೆ

ಮೈಸೂರು ೨೨

ಮೈಸೂರು ಸೆನೆಟ್ ಸಭೆಯ ಮುಂದು ವರಿದ ಅಧಿವೇಶನವು ಈ ದಿನ ಮಧ್ಯಾಹ್ನ ೧೫ ಗಂಟೆಗೆ ಮೈಸೂ ಜಾನ್ಸ್ ಲರವರ ಅಧ್ಯಕ್ಷತೆ ಕೆಯಲ್ಲಿ ಆರಂಭವಾಯಿತು. ಸೆನೆಟ್ ಸ ಭೆಯು ಸದಸ್ಯರಾಗಿದ್ದ ಖಾ ಬಹದ್ದೂರ್ ಮಹಮದ್ ಅಬ್ದುಸ್ಸಾಖಾ, ಮಿಗಿಗುಲಾಂ ಮಹಮದ್ ಕಲಾಮಿಮತ್ತು ಡಾ॥ ಎಂ. ಹೆಚ್ ಕೃಷ್ಣರವರ ನಿಧನದ ಬಗ್ಗೆ ಸಂತಾಪ ಸೂಚನೆ ವ ನಿರ್ಣಯಗಳಾದುವು

ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ಮೈಸೂರು ಸೆನೆಟ್ ಸಭೆಯ ಪ್ರಥಮ ಪ್ರಾಸಂಗ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವ ಬಗ್ಗೆ ಅವರನ್ನು ಅಭಿನಂದಿಸುವ ನಿರ್ಣಯವೂ ಅಂಗೀಕರಿಸಲ್ಪಟ್ಟಿತು

ಇತ್ತೀಚೆಗೆ ಅಸಿಸ್ಟೆಂಟ್ ಪ್ರೊಫೆಸರುಗಳ ನೇಮಕದ ಬಗ್ಗೆ ಪತ್ರಿಕೆಗಳಲ್ಲಿ ಬಂದಿರುವ ಉಗ್ರ ಟೀಕೆಯ ವಿಷಯ ವಾಗಿ ಹಲವು ಸದಸ್ಯರು ವೈಸ್‌ಚಾನ್ಸೆಲರವರನ್ನು ವಿವರಣೆ ಕೊಡಬೇಕೆಂದು ಕೇಳಿದರು ಇವರುಗಳ ನೇಮಕದ ಬಗ್ಗೆ ಸೀನಿಯಾಂಟ್ಸ್, ದಕ್ಷತೆಗಳನ್ನು ಗಮನಿಸದೆ ಕೋಮುವಾರು ಆಧಾರದ ಮೇಲೆ ನೇಮಿಸಿರುವುದರ ಬಗ್ಗೆ ದೀರ್ಘ ಚರ್ಚೆ ನಡೆಯಿತು ಅಧ್ಯಕ್ಷರು ಈ ವಿಷಯವಾಗಿ ಒಂದು ಹೇಳಿಕೆ ಕೊಡಲು ಪ್ರಾಮಿಸ್ ಮಾಡಿರುವುದಾಗಿ ಹೇಳಿದರು

ದಕ್ಷಿಣ ಆಫ್ರಿಕಾ ಭಾರತೀಯರ ಸತ್ಯಾಗ್ರಹ

ದಕ್ಷಿಣ ಆಫ್ರಿಕಾ ಭಾರತೀಯರು ಅಲ್ಲಿ ಜಾರಿಯಲ್ಲಿರುವ ಭಾರತೀಯ ವಿರುದ್ಧ ಶಾಸನವನ್ನು ಬಲ್ಲುಫಿಸಿ ಟ್ರಾನ್ಸ್‌ವಾಲ್ ಗಡಿಯನ್ನು ನಾಳೆದ್ದು ದಾಟಲು ನಿರ್ಧರಿಸಿ ಸತ್ಯಾಗ್ರಹವನ್ನು ಆರಂಭಿಸಲಿದ್ದಾರೆ ಇತರ ಕಡೆಗಳಲ್ಲೂ ಸತ್ಯ ಇದೇ ರೀತಿ ಸಾಮೂಹಿಕ ಸತ್ಯಾಗ್ರಹವು ಇಸ್ಪರಲ್ಲೇ ಆರಂಭವಾಗಲಿದೆ

ಅಸ್ಸಾಂ ಶಾಸನ ಸಭೆಯಲ್ಲಿ ಭಾರಿ ಅಸೆಂಬ್ಲಿಟಿನೆ

ಅಸ್ಸಾಮಿನ ಶಾಸನ ಸಭೆ ಅವರಣದಲ್ಲಿ ಶೀಖರಿನ ಇಡಲಾಗಿದ್ದ ಪೆಟ್ರೋಲಿಗೆ ನಿನ್ನೆ ದೊರೆ ತಗಲಿ ಭಾರಿ ಅಸೆಂಬ್ಲಿಟಿನೆ ಉಂಟಾಯಿತೆಂದು ವರದಿಯಾಗಿದೆ ಅಸೆಂಬ್ಲಿಟಿನೆಯ ಶಬ್ದವು ಸಭೆಗೆ ಮಂಡಳವನ್ನು ಭೇದಿಸುವಂತಿತ್ತೆಂದೂ, ಈ ಘಟನೆಗೆ ಕಾರಣ ಗಳನ್ನು ಇನ್ನೂ ಗೊತ್ತಿಲ್ಲವೆಂದೂ ತಿಳಿದಿದೆ

ಮಹಿಳೆಯರ ಸಭೆ

ಮೈಸೂರು ೨೨

ನಾಳೆ ಸಂಜೆ ಆರು ಗಂಟೆಗೆ ಡಿ ಸುಬ್ಬಮ್ಮ ರಸ್ತೆಯಲ್ಲಿರುವ ಸಾರ್ವಜನಿಕ ಕಛೇರಿಯ ಪಕ್ಕದಲ್ಲಿನ ಮಹಿಳೆಯರ ಸಭೆಯನ್ನು ವಿಶೇಷವಾಗಿ ಸಾರ್ವಜನಿಕ ಸಂಗೀತ ಮತ್ತು ಭಾಷಣಗಳಾಗುವುದು ಮಹಿಳೆಯರೆಲ್ಲರೂ ಭಾಗವಹಿಸಬೇಕಾಗಿ ಕಾರ್ಯದರ್ಶಿಯವರು ಕೋರಿದ್ದಾರೆ.

ಹರಿಕಥೆ

ರಾಜಧಾನಿಯ ದೇವೀರಮ್ಮಣ್ಣಿ ಅಗ್ರಹಾರದಲ್ಲಿರುವ ಶ್ರೀರಾಮ ಸೇವಾ ಸಂಘದ ಈ ದಿನ ರಾತ್ರಿ ೯ ಗಂಟೆಗೆ ವಿ॥ ನಾರಾಯಣಸ್ವಾಮಿ ಗವುಕೆಯವರಿಂದ ಹರಿಕಥೆಯು ನಡೆಯುವುದು.

ನಿಧನ

ಭಾರತ ಸರ್ಕಾರದ ರೈಲ್ವೆ ಟೀಫ್ ಆಡಿಟರ ಶ್ರೀ ಸಿ. ಸುಂದರರಾಮ ರಾಯರ ಪತ್ನಿಯವರಾದ ಶ್ರೀಮತಿ ಪಾರ್ವತಮ್ಮನವರು ತಮ್ಮ ಸ್ವಂತ ಸ್ಥಳವಾದ ಮೊನ್ನೆ ದಿನ ಬೆಂಗಳೂರಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ

ಫುಟ್‌ಬಾಲ್ ಪಂದ್ಯ

ನಿನ್ನೆ ನಡೆದ ದಸರಾ ಫುಟ್‌ಬಾಲ್ ಪಂದ್ಯದಲ್ಲಿ ಮೈಸೂರು ಆರ್ಮಿಸ್ ಟೀಮಿನವರು ಮೈಸೂರು ಮುಸ್ಲಿಂ ಟೀಮಿನವರಿಗೂ ಗೋಲಿನಿಂದ ಪಂದ್ಯವು ಡ್ರಾ ಆಯಿತು

ವಿವಿಧ ವಿನೋದಾವಳಿ

ಮೈಸೂರು ಆಕಾಶವಾಣಿಯ ರಿಕ್ಕಿಯೇ ಕ್ಲಬ್ಬಿನವರು ಇದೇ ತಿಂಗಳು ೩೪ ನೇ ತಾರೀಖು ೬ ಗಂಟೆಯಿಂದ ೮ ಗಂ ಕೈ ಟ್ರೋಕಾಡಿರೊ ನಲ್ಲಿ ಸಾರ್ವಜನಿಕ ಬಡ ಹುಡುಗರ ಉಚಿತ ಆಟ ಪಟ ವಿಯೆ ಏರ್ಪಡಿಸಿರುವ ವಿನೋದಾವಳಿಯ ಸ್ಪೆಷಲ್ ಆಫೀಸರಾಗಿ ಗೃಹ ಸಚಿವರಾದ ಶ್ರೀ ಟಿ ಮರಿಸ್ವಾಮಿಯವರು ಅಧ್ಯಕ್ಷತೆ ವಹಿಸುವರು ಸಾರ್ವಜನಿಕರ ಪ್ರೋತ್ಸಾಹವನ್ನು ಕೋರಲಾಗಿದೆ

ಈ ಸಂದರ್ಭದಲ್ಲಿ ಈ ಬೆಳಿಗ್ಗೆ ೪ ಗಂಟೆಯಿಂದ ೧೦ ಗಂಟೆಯವರೆಗೆ ನಂಬರ್‌ಗಳ ಮೂಲಕ ರೂ ೧೦ ಕ್ಕೆ ಟಿಕೆಟ್‌ಗಳ ಒಂದು ಪುಸ್ತಕವು ಕಛೇರಿಯಲ್ಲಿ ಮಾರಲ್ಪಡುತ್ತಿದೆ ಇದನ್ನು ಕೊಂಡವರು ಸಮಸ್ತ ಆಕಾಶವಾಣಿ ಆಫೀಸಿಗಾಗಲಿ ಪತ್ರಿಕೆಯ ಪೊಲೀಸು ಸ್ಟೇಷನ್ನಿಗಾಗಲಿ ತಿಳಿಸಬೇಕಾಗಿ ಪ್ರಾರ್ಥನೆ. ಅಲ್ಲದೆ ಬಹುಮಾನಗಳನ್ನು ಟಿಕೆಟ್ಟುಗಳನ್ನು ಯಾ ಕೊಳ್ಳಬಾರದೆಂದು ವಿನಂತಿ

ಸಾಲ್ಮತರಿಗೆ ನೆಹರೂರವರ ನೆರವು

ಪಾಪಿ ಪಂಡಿತ ನೆಹರೂರವರು ತಮ್ಮ ಕೆದುಳ್ಳಿ ನಿವಾಸ್ತಿತರ ಒಂದು ಸಂಘಕ್ಕೆ ವಸತಿಯನ್ನು ಕಲ್ಪಿಸಿಕೊಡಲು ನಿರ್ಧರಿಸಿರುವರೆಂದು ಗೊತ್ತಾಗಿದೆ. ಈ ಸಂಘವನ್ನು ಇತರ ಸರ್ಕಾರಿ ಅಧಿಕಾರಿಗಳು ಅನುಸರಿಸಬಹುದೆಂದು ಹೇಳಲಾಗಿದೆ

ತೈಮೂರ್ತಿ ಜಲಾಶಯ

ಡ್ಯಾಸ್ ನಗರದ ನೀರು ಸರಬರಾಜಿನ ವಿಷಯವಾಗಿದ್ದ ಪೂರ್ತಿ ಜಲಾಶಯವೆಂದು ತೈಮೂರ್ತಿ ಜಲಾಶಯವೆಂದು ಕರಣ ಮಾಡಲು ಮುನ್ಸಾಸ್ ಪೌರಸಭೆ ನಿರ್ಧರಿಸಿರುವುದು ಈ ಜಲಾಶಯ ನಿರ್ಮಾಣಕ್ಕಾಗಿ ಶ್ರೀ ಸ್ಮಿತ್ ಎಂಬವರು ಶ್ರಮಿಸಿದ್ದರು

ಬೆಂಗಳೂರಿನಲ್ಲಿ ಶಾಂತಿ ; ೧೫೪ ನೇ ಕಲಂ ಪ್ರಯೋಗ

೧೫೦ ಮಂದಿಯ ದಸ್ತಗಿರಿ

ಸ್ವಂ ಸು.ಪ್ರೋ.] ಬೆಂಗಳೂರು ೨೨

ಈಗ ನಗರದಲ್ಲಿ ಶಾಂತ ಪರಿಸ್ಥಿತಿ ಇರುವುದರಿಂದ ನೆನ್ನೆ ರಾತ್ರಿಯಿಂದ ಯಾವ ಘಟನೆಗೂ ನಡೆದಿಲ್ಲ ಪೊಲೀಸಿನವರ ಅನುಸ್ವಾರಿ ಒಲವಾಗಿರುವುದರಿಂದ ಕರ್ಫೂ ಆಜ್ಞೆಯನ್ನು ಕತ್ತು ಹಿಟ್ಟಾಗಿ ಹಾರಿ ಮಾಡಲಾಯಿತು

ಮುಂದಿನ ವಿಚಾರಕ್ಕೆ ಕಾರ್ಯಕ್ರಮದ ಅಂಗವಾಗಿ ಇಂದಿನಿಂದ ಗಲಭೆ ಪ್ರದೇಶಗಳಲ್ಲಿ ಇನ್ನು ಎರಡು ತಿಂಗಳ ಕಾಲ ಪ್ರತಿದಿನವೂ ಸಂಜೆ ಆರು ಗಂಟೆಯಿಂದ ಬೆಳಿಗ್ಗೆ ಆರು ಗಂಟೆ ವರೆಗೆ ಸಭೆ, ಮೆರವಣಿಗೆ ಮತ್ತು ಗುಂಪುಗಳನ್ನು ನಿರೋಧಿಸಿ ೧೪೪ ನೇ ಕಲಮಿನ ಪ್ರಕಾರ ಪ್ರತಿಬಂಧಕಾಜ್ಞೆಯನ್ನು ಹೊರಡಿಸಲಾಗಿದೆ.

ಇದುವರೆಗೆ ಪೊಲೀಸಿನವರು ಸುಮಾರು ೧೫೦ ಜನರನ್ನು ಬಂಧನದಲ್ಲಿಟ್ಟಿರುವುದಾಗಿ ತಿಳಿದುಬಂದಿದೆ

ಪೊಲೀಸರು ಎರಡು ಕೋಮುಗಳಿಗೂ ಸೇರಿದ ಸುಮಾರು ೪೦ ಮನೆಗಳನ್ನೂ, ಮಸೀದಿಗಳು, ಗುಡಿಗಳು, ಮುಸ್ಲಿಂ ಹಾಲ್ ಮತ್ತು ನಗರದ ಮುಸ್ಲಿಂರೀಗ್ ಅಧ್ಯಕ್ಷರಿಗೆ ಸೇರಿದ ವೈಯೂರು ಅಗರಬತ್ತಿ ಕಂಪೆನಿಯನ್ನೂ ಶೋಧಿಸಿದರು ಆದರೆ ಅಲ್ಲಿ ಆಕ್ಷೇಪಣೆಕರವಾದ ವಸ್ತುಗಳಾವುವೂ ದೊರೆಯಲಿಲ್ಲ.

ಬಟ್ಟೆ ಹಕ್ಕೋಟಿ ರದ್ದು

ಭಾರತ ಸರ್ಕಾರದವರು ಮಾಡಿರುವಂತೆಯೇ ಸಂಸ್ಥಾನದಲ್ಲಿಯೂ ಬಟ್ಟೆ ಹಕ್ಕೋಟಿಯನ್ನು ರದ್ದು ಮಾಡಲು ಸರ್ಕಾರದವರು ನಿರ್ಧಾರಕ್ಕೆ ಬಂದಿರುವುದಾಗಿ ಹೇಳಲಾಗಿದೆ ಸದ್ಯದಲ್ಲಿಯೇ ಈ ಬಗ್ಗೆ ಆಜ್ಞೆ ಹೊರಡಿಸುವ ನಿರೀಕ್ಷಣೆ ಇದೆ.

§ ನೈನ್ಯದ ಅಧಿಕಾರಿ ವರ್ಗಕ್ಕೆ ಕೇಡೆಟ್ಟಗಳನ್ನು ಆಜ್ಞಾಯಿಸಲು ಸರ್ಕಾರದವರು ಲೆಫ್ಟಿನೆಂಟ್ ಕರ್ನಲ್ ಬಸವರಾಜ ಅರಸುನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿರುತ್ತಾರೆ

× ನಿರಾಶ್ರಿತರಿಗಾಗಿ ಸರ್ಕಾರದವರು ಸಂಗ್ರಹಿಸಿರುವ ನಿಧಿಗೆ ಇದುವರೆಗೆ ಒಟ್ಟಾಗಿ ರೂ. ಗಳು ವಸೂಲಾಗಿವೆ.

‡ ಸಿವಿಲ್ ಸಪ್ಲೈಸ್ ಕಂಟ್ರೋಲರಾದ ಶ್ರೀ ಎಂ ಕೆ ಅಪ್ಪಾಜಪ್ಪನವರನ್ನು ಬೆಂಗಳೂರು ಜಿಲ್ಲಾಧಿಕಾರಿಗಳನ್ನಾಗಿಯೂ, ಅಸಿಸ್ಟೆಂಟ್ ಕಂಟ್ರೋಲರರಾದ ಶ್ರೀ ಕೆ. ರಂಗಪ್ಪನವರನ್ನು ದಾವಣಗೆರೆ ಪೌರಸಭೆಯ ಕಮಿಷನರನ್ನಾಗಿಯೂ ನೇಮಿಸಲಾಗಿದೆ

• ಮೈಸೂರು ರಾಜ್ಯಾಂಗ ರಚನಾ ಸಭೆಯು ಚೀನಾವಣೆಯಲ್ಲಿ ಕಮ್ಯೂನಿಸ್ಟರು ಭಾಗವಹಿಸುವರೆಂದು ಗೊತ್ತಾಗಿದೆ.

ಕಾಂಗ್ರೆಸ್ ಸದಸ್ಯತೆಗೆ

ಮೈಸೂರು ೨೨

ನಗರದಲ್ಲಿ ಕಾಂಗ್ರೆಸ್ ಸದಸ್ಯರುಗಳನ್ನು ಸೇರಿಸಲು ಈ ತಿಂಗಳು ೩೧ ನೇ ತಾರೀಖು ನೆಹರೂರವರ ದಿನ. ಸದಸ್ಯರನ್ನು ಸೇರಿಸುತ್ತಿರುವ ಮುಖ್ಯನೀಯರುಗಳು ಮುಂದಿನ ತಿಂಗಳು ೩೧ ನೇ ತಾರೀಖಿನೊಳಗಾಗಿ ಸದಸ್ಯತನದ ಪುಸ್ತಗಳನ್ನು ಹಾಗೂ ಮತ್ತು ಮೊಹಲ್ಲಾ ವಾರು ಪಟ್ಟಿಯ ಮೂರು ಪ್ರತಿಗಳನ್ನೂ ಕಾಂಗ್ರೆಸ್ ಆಫೀಸಿಗೆ ತಲುಪಿಸಬೇಕೆಂದು ಕಾಂಗ್ರೆಸ್ ಸಭೆ ಸಮಿತಿ ಪ್ರಕಟಿಸಿರುತ್ತಾರೆ

ಸಂಪುಟ ೬ | ಶುಕ್ರವಾರ ೨೩-೧-೪೪ | ಸಂಚಿಕೆ ೧೩೩

ಪಾಕೀಸ್ತಾನವನ್ನು ಬಡಾಯಿಸಲು ಪಿತೂರಿ

ದೆಹಲಿ, ಬೊಂಬಾಯಿಗಳನ್ನು ಪಾಕೀಸ್ತಾನಕ್ಕೆ ಸೇರಿಸಲು ಸಂಚು

ಇತ್ತೀಚೆಗೆ ಹೊಸದಾಗಿ ರಚಿತವಾದ ಇಂಡೊ-ಪಾಕೀಸ್ತಾನ-ಇಸ್ಲಾಂ ಲೀಗ್ ಎಂಬ ಸಂಸ್ಥೆಯು ಲಾಹೋರಿನಲ್ಲಿ ತನ್ನ ಕೇಂದ್ರ ಕಚೇರಿಯಿಂದ ಭಾರತೀಯ ಮುಸ್ಲಿಮರಿಗೆ ಒಂದು ಗುಪ್ತ ಮನವಿಯನ್ನು ಕಳುಹಿಸಿ ಅವರೆಲ್ಲರೂ ಈ ನೂತನ ಸಂಸ್ಥೆಗೆ ಸದಸ್ಯರಾಗಬೇಕೆಂದು ಕೋರಿದೆ. ಅಲ್ಲದೆ ದೆಹಲಿ, ಅಜ್ಮೀರ್, ಸಂಯುಕ್ತ ಪ್ರಾಂತ್ಯ, ಬಿಹಾರ್, ಬೊಂಬಾಯಿ ಮತ್ತು ಬೆರಾರ್ ಮುಂತಾದ ಪ್ರಾಂತ್ಯಗಳಿಗೆ ಸೇರಿದ ಹಲವು ಭಾಗಗಳನ್ನು ಪಾಕೀಸ್ತಾನಕ್ಕೆ ಸೇರಿಸಿ ಆ ರಾಷ್ಟ್ರವನ್ನು ಬಡಾಯಿಸಬೇಕೆಂದೂ ಪ್ರಾರ್ಥಿಸಿದೆ.

೫೦ ರಿಂದಲೇ ಆದನ್ನು ಜಾರಿಗೆ ತರುವುದಾಗಿ ವಿಶ್ವವಿದ್ಯಾಲಯವು ಬದ್ಧವಾಗುವುದು ನ್ಯಾಯವಾದುದಲ್ಲವೆಂದು ತಿಳಿಸಿದರು

ಶ್ರೀ ಎಂ ಪಿ ಎಲ್ ಶಾಸ್ತ್ರಿಗಳು ಉತ್ತರ ವಿಶ್ವ ಜನನು ಯಾವ ಭಾಷೆಯನ್ನು ಆಡ ವರೊ ಅದು ವಿಶ್ವವಿದ್ಯಾಲಯದ ದೋಧಕ ಭಾಷೆಯಾಗಿರಬೇಕು; ಮಾತೃಭಾಷೆ ದ್ವಾ ಶಿಕ್ಷಣ ಕೊಟ್ಟ ಹೊರತು, ವಿದ್ಯಾರ್ಥಿಗಳು ದೇಶಸೇವೆ ಮಾಡಲು ಅರ್ಹರಾಗುವುದಿಲ್ಲ, ಅಖಿಲ ಭಾರತದ ವ್ಯವಹಾರಿತ ಭಾಷೆಯು ಯಾವುದೇ ಆಗಲಿ, ಆಯಾ ಪ್ರಾಂತ್ಯಗಳ ಮತ್ತು ಸಂಸ್ಥಾನಗಳ ಶಿಕ್ಷಣವು ಅವುಗಳ ಮಾತೃಭಾಷೆಯಿಂದಲೇ ನಡೆಯಬೇಕೆಂದು ಅವರು ತಿಳಿಸಿದರು. ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು

ಚುನಾಯಿತ ಸ್ಥಾನಪತಿ

ಸೆನೆಟ್ ಸಭೆಯಿಂದ ಚುನಾಯಿತರಾದ ಪ್ರಾಸಂಗಿ ವೈಸ್‌ಛಾನ್ಸ್‌ಲರು ನೇಮಕವಾಗಬೇಕೆಂಬ ಶ್ರೀ ಟಿ ಎಸ್ ರಾಜಗೋಪಾಲಯ್ಯಂಗಾರ್ಯರ ನಿರ್ಣಯವೂ ಸರ್ವಾನುಮತದಿಂದ ಅಂಗೀಕೃತವಾಯಿತು, ಮೈಸೂರು ವಿಶ್ವವಿದ್ಯಾನಿಲಯವು ತಾತ್ಕಾಲಿಕ ವಿದ್ಯಾಲಯಗಳಿಗೆ ಸ್ವಾತಂತ್ರ್ಯ ಸಂಸ್ಥೆಯಾಗಿರದೆ ಸರ್ಕಾರದ ಒಂದು ಶಾಖೆಯಾಗಿರುವುದೆಂದು ಶ್ರೀ ಟಿ ಎಸ್ ರಾಜಗೋಪಾಲಯ್ಯಂಗಾರ್ಯರು ತಿಳಿಸಿ, ಇಂತಹ ಉನ್ನತ ಸಂಸ್ಥೆಗೆ ಚುನಾಯಿತ ಪ್ರಾಸಂಗಿ ಸ್ಥಾನಪತಿಗಳಿಂದಿರಬೇಕಾದದು ಅತ್ಯಗತ್ಯವೆಂದು ಹೇಳಿದರು. ಶ್ರೀಗಳಾದ ಎಸ್ ಶ್ರೀನಿವಾಸಮೂರ್ತಿ, ಎಂ. ಪಿ ಎಲ್ ಶಾಸ್ತ್ರಿ, ಶ್ರೀಮತಿ ಕಮಲಾಬಾಯಿ ಮೊದಲಾದವರು ಅದನ್ನು ಸಮರ್ಥಿಸಿದರು ಶ್ರೀ ಎಫ್ ಸಿ ದೇವದಾಜೀ ಅವರು ಆದನ್ನು ಎಲ್ ಸಿ ಎಲ್ ಶಾಸ್ತ್ರಿ ಅವರು

ಉಪಾಧ್ಯಾಯರ ಕಾಲೇಜಿನಲ್ಲಿ ಈ ಪೂರ್ತಿ ಕೋರ್ಸನ್ನು ತೆರೆಯುವುದರಿಂದ ಹೆಚ್ಚಿಗೆ ಹಣವು ವೆಚ್ಚವಾಗುವುದಿಲ್ಲವೆಂದೂ, ದೇಶದ ವಿದ್ಯಾಭ್ಯಾಸ ಕ್ರಮದ ಮೂರ್ಖರಿಗೆ ಇದು ಹೆಚ್ಚು ಪ್ರಯೋಜನಕಾರಿಯಾಗುವುದೆಂದೂ ಡಾ|| ಸಿದ್ದಲಿಂಗಯ್ಯನವರು ಪಾದಿಸಿದರು

ಸೈನಿಯರ್ ಇಂಟರಿನ ಆರ್ಟ್ಸ್ ಮತ್ತು ಸೈನ್ಸ್ ತರಗತಿಗಳಲ್ಲಿ ೧೯೪೪-೪೦ ರಿಂದ ಕನ್ನಡವನ್ನು ಶಿಕ್ಷಣದ ಮಾಧ್ಯಮವನ್ನಾಗಿ ಮಾಡಬೇಕೆಂದು ಶ್ರೀ ಎಂ ಪಿ ಲ ಶ್ರೀ ನರಸಿಂಹ ಶಾಸ್ತ್ರಿಗಳು ಒಂದು ನಿರ್ಣಯವನ್ನು ಮುಂಡಿಸಿ, ಕನ್ನಡ ದೇಶದ ವಿಶ್ವವಿದ್ಯಾನಿಲಯದಲ್ಲಿ ಪರಧಾನೆಗೆ ಪ್ರಾಮುಖ್ಯತೆ ಕೊಟ್ಟು, ಮಾತೃ ಭಾಷೆಯನ್ನು ಹಿಂದಕ್ಕೆ ತಳ್ಳಿ ಜಾರಿರುವುದು ವಿಷಾದಕರವೆಂದು ತಿಳಿಸಿದರು ೩೦ ವರ್ಷಗಳ ಹಿಂದೆ ಹುಟ್ಟಿದ ಮೈಸೂರು ವಿಶ್ವವಿದ್ಯಾಲಯವು ಕನ್ನಡ ವಿದ್ಯಾಲಯ ವಾಗಬೇಕೆಂದು ದಿವಂಗತ ಮಹಾ ಪ್ರಭುಗಳು ಆಶಿಸಿದುರು ಇಲ್ಲಿಯವರೆಗೂ ನೆರವೇರಿದಿರುವುದು ತುಂಬಾ ವಿಷಾದಕರವೆಂದೂ, ಈಗಿನ ಪರಿಭಾಷೆಯು ವಿದ್ಯಾಭ್ಯಾಸದಿಂದ ಸಮಾಜವು ನಿರ್ಜೀವವಾಗಿ, ವಿದ್ಯಾರ್ಥಿಗಳ ಬುದ್ಧಿ ಶಕ್ತಿ ಮತ್ತು ಆತ್ಮ ವಿಶ್ವಾಸವು ಕುಂದಿ ಹೋಗುತ್ತಿದೆಯೆಂದೂ, ಅದನ್ನು ಕೂಡಲೇ ಪರಿಪಡಿಸಲು ಕನ್ನಡವು ಶಿಕ್ಷಣದ ಮಾಧ್ಯಮವಾಗಬೇಕೆಂದು ಅವರು ತಿಳಿಸಿದರು.

ಶ್ರೀ ಬಿ ವಿ ಶಿವಲಿಂಗಪ್ಪನವರು ಅದನ್ನು ಸಮರ್ಥಿಸಿದರು

ಸಭೆಯು ಈ ದಿನಕ್ಕೆ ಮುಂದುವರಿಯಿತು

ಈ ದಿನ ಶ್ರೀಗಳಾದ ಎಸ್ ಶ್ರೀನಿವಾಸಮೂರ್ತಿ, ಹೆಚ್ ಶ್ರೀಕಂಠಯ್ಯ, ಟಿ ಎಸ್ ರಾಜಗೋಪಾಲಯ್ಯಂಗಾರ್, ಟಿ ಮಾದೇಗೌಡ, ವಿ ಲಿಂಗಪ್ಪಯ್ಯ ಮೊದಲಾದವರು ನಿರ್ಣಯವನ್ನು ಸಮರ್ಥಿಸಿ, ಮಾತೃಭಾಷೆ ಪ್ರಜಾಭಿಪ್ರಾಯಕ್ಕೆ ಮನ್ನಣೆ ಕೊಟ್ಟು, ಮಾತೃ ಭಾಷೆಯಾದ ಕನ್ನಡವನ್ನು ಶಿಕ್ಷಣ ಮಾಧ್ಯಮವನ್ನಾಗಿ ಮಾಡಬೇಕೆಂದು ತಿಳಿಸಿದರು ೧೯೪೪-೪೦ ರಲ್ಲಿ ಇದು ಜಾರಿಗೆ ಬರುವುದರಿಂದ, ೧೮ ತಿಂಗಳ ಕಾಲಾವಕಾಶದಲ್ಲಿ ಬೇಕಾದ ಪಠ್ಯ ಪುಸ್ತಕಗಳನ್ನು ತಯಾರಿಸಲು ಸಾಧ್ಯವೆಂದು ಅವರು ಹೇಳಿದರು.

ಶ್ರೀ ಎಫ್. ಸಿ ದೇವದಾಜೀ ಅವರಿಸಿದರು ಆದನ್ನು ಎಲ್ ಸಿ ಎಲ್ ಶಾಸ್ತ್ರಿ, ಶ್ರೀಮತಿ ಕಮಲಾಬಾಯಿ ಮೊದಲಾದವರು ಅದನ್ನು ಸಮರ್ಥಿಸಿದರು ಶ್ರೀ ಎಫ್ ಸಿ ದೇವದಾಜೀ ಅವರು ಆದನ್ನು ಎಲ್ ಸಿ ಎಲ್ ಶಾಸ್ತ್ರಿ ಅವರು

ಕಲಾಯಿ ಮಾಡುವವನ ಬಳಿ ತೋಟಾ ಸಿಕ್ಕಿತು

ಸ್ವಂ ಸು ಪೋ] ಬೆಂಗಳೂರು ೨೩

ನಿನ್ನೆ ಮಧ್ಯಾಹ್ನ ನಗರದ ಕರಿಯಪ್ಪ ರಸ್ತೆಯ ಮನೆಯೊಂದರಲ್ಲಿ ಕಲಾಯಿ ಮಾಡುತ್ತಿದ್ದವನ ಬೀಲದಿಂದ ಅನ್ಕೌಟೆನ್ ಯುಂಟಾಯಿತು ಇದನ್ನು ಕಂಡು ಜನರು ಗುಂಪು ಸೇರಿತು. ಪೋಲೀಸರಿಗೆ ಅವನ ಬಳಿ ಒಂದು ಬಂದೂಕದ ತೋಟಾ ಸಿಕ್ಕಿತೆಂದೂ, ಅದು ಅವನಿಗೆ ಹೇಗೆ ದೊರೆಯಿತೆಂಬುದರ ಬಗ್ಗೆ ಉತ್ತರ ಕೊಡಲಿಲ್ಲವೆಂದೂ ಗೊತ್ತಾಗಿದೆ

ನೆನ್ನೆ ರಾತ್ರಿ ಕುಂಬಾರಪೇಟೆಯ ಅಂಗಡಿಯೊಂದಕ್ಕೆ ಬೆಂಕಿ ತಗಲಿ ಅದು ಪಕ್ಕದ ಬಿದ್ದ ಒಂದು ದರ್ಜಿ ಅಂಗಡಿಗೂ ಹರಡಿತೆಂದು ಪದಿಯಾಗಿದೆ ಕೂಡಲೇ ಅದನ್ನು ತಹಬಂದಿ ಕೂಡಲಾಯಿತು.

ಶ್ರೀಶಾಖ ಸಚಿವರೂ ಮತ್ತು ಆರೋಗ್ಯ ಸಚಿವರೂ ಅಕ್ಕಿಕ್ಕಿಗೆ ಭೇಟಿ ಕೊಟ್ಟು ಗಲಭೆಗಳಾಗಿ ನೊಂದವರ ಯೋಗ ಕ್ಷೇಮ ಗಳನ್ನು ವಿಚಾರಿಸಿದರು

ಗ್ವಾಲಿಯರ್‌ನಲ್ಲಿ ದಿವಾನರಿಲ್ಲದ ಸರ್ಕಾರ

ಗ್ವಾಲಿಯರ್ ಸಂಸ್ಥಾನದಲ್ಲಿ ಶಾಸನ ಸಭೆಗಳ ಚುನಾಯಿತ ಪ್ರತಿನಿಧಿಗಳ ಬಂಬೆಕಯನ್ನು ಪಡೆದ ೯ ಮಂದಿ ಮಂತ್ರಿಗಳ ನೂತನ ತಾತ್ಕಾಲಿಕ ಸರ್ಕಾರವನ್ನು ಏರ್ಪಡಿಸಲು ಆಲ್ಲಿನ ಮಹಾರಾಜರು ಒಪ್ಪಿರುತ್ತಾರೆ. ರಾಜರಿಂದ ನಾಮಕರಣ ಮಾಡಲ್ಪಟ್ಟ ಇಬ್ಬರು ಮಂತ್ರಿಗಳೂ ಆದರಲ್ಲಿ ಇರುವರು ಆಲ್ಲಿನ ಶಾಸನ ಸಭೆಯ ಕಾಂಗ್ರೆಸ್ ನಾಯಕರಿಗೆ ಮಂತ್ರಿಮಂಡಲವನ್ನು ರಚಿಸಲು ಮಹಾರಾಜರು ಆಹ್ವಾನ ಕೊಟ್ಟಿದ್ದಾರೆ ಈ ಮಂತ್ರಿಮಂಡಲದಲ್ಲಿ ದಿವಾನರು ಇರುವುದಿಲ್ಲವೆಂದೂ ಮುಂದಿನ ಸೋಮವಾರ ನೂತನ ಸರ್ಕಾರವನ್ನು ರಚಿಸಲಾಗುವುದೆಂದೂ ಹೇಳಲಾಗಿದೆ

ಡಾ|| ಪಿಳ್ಳೆ ಸಾಹೇಬರಿಂದ ಗೌರ್ನರ್ ಪದವಿ ನಿರಾಕರಣೆ

ಗಡಿನಾಡು ಪ್ರಾಂತ್ಯದ ನಾಜಿ ಕಾಂಗ್ರೆಸ್ ಪ್ರಧಾನಿ ಡಾ|| ಪಿಳ್ಳೆ ಸಾಹೇಬರು ಅಲ್ಲಿನ ಗವರ್ನರ್ ಪದ್ಯವನ್ನು ಸ್ವೀಕರಿಸಬೇಕೆಂದು ಪಾಕೀಸ್ತಾನ ಪ್ರಧಾನಿ ಲಿಯಾಕತ್ ಅಲಿಯವರು ಆಹ್ವಾನವಿತ್ತರೆಂದೂ ಆದರೆ ಅವರು ಅದನ್ನು ನಿರಾಕರಿಸಿದರೆಂದೂ ವರದಿಯಾಗಿದೆ. ಡಾ|| ಪಿಳ್ಳೆ ಸಾಹೇಬರು ತಮ್ಮ ರೆಡ್ ಶರ್ಟ್ಸ್ ದಳದವರ ಹತುವಟಿಕೆಗಳನ್ನು ಬಿಟ್ಟು ಯಾವ ಪರಕ್ಕೂ ಇಲ್ಲದೆ ಮುಸ್ಲಿಂ ಲೀಗಿಗೆ ಸೇರಬೇಕೆಂದೂ ಮಿಲಿಟರಿ ಅಧಿಕಾರಿಗಳು ಹೊಡೆಯಿದ್ದರೆಂದೂ, ಇದಕ್ಕೆ ಉತ್ತರವಾಗಿ ಡಾ|| ಪಿಳ್ಳೆ ಸಾಹೇಬರು ತಾವು ಅಧಿಕಾರ ಲಾಲಸೆಯಿಂದ ಕ್ಷಣಕ್ಕೊಂದು ಬಣ್ಣವನ್ನು ಬದಲಾಯಿಸಲು ಸಿದ್ಧರಿಲ್ಲವೆಂದು ತಿಳಿಸಿದುದಾಗಿಯೂ ಗೊತ್ತಾಗಿದೆ

ಕಾಶ್ಮೀರ ನಿಧಿಗೆ ಜವಹರರ ಕಾಣಿಕೆ

ಕಾಶ್ಮೀರದ ಪಂಡಿತ ನಿಧಿಗೆ ಪಂಡಿತ ಜವಹರಲಾಲ್ ನೆಹರುರವರ ೧೫,೦೦೦ ರೂ ಗಳನ್ನು ಕೊಟ್ಟಿದ್ದಾರೆ

ಪ್ರದೋಷ ಸಂಗೀತ

ಬಿದರಹಳ್ಳಿ ಕೃಷ್ಣಪ್ಪನವರ ಪ್ರಸನ್ನ ಸೀತಾರಾಮ ಮಂದಿರದಲ್ಲಿ ಈ ದಿನ ಸಂಜೆ ೬.೩೦ ಘಂಟೆಗೆ ಶ್ರೀಮತಿ ಬಿ ರಂಗಾಜಮ್ಮ ಇವರಿಂದ ವೀಣೆಯ ಸಂಗೀತವನ್ನೇರ್ಪಡಿಸಲಾಗಿದೆ.

ಫೋನ್ ನಂ. 392 ॥ ವಂದೇ ಮಾತರಂ ॥ ಇಂತಿಸ್ವಕ್ಷರಕ್ಕೆ 3 ಕಾಸು

ಸಂಪುಟ ೬ | ಶುಕ್ರವಾರ ೨೩-೧-೪೮ | ಸಂಚಿಕೆ ೧೫೬

ಪಾಕೀಸ್ತಾನವನ್ನು ಬದಾಯಿಸಲು ಪಿತೂರಿ

ದೆಹಲಿ, ಬೊಂಬಾಯಿಗಳಲ್ಲಿ ಪಾಕೀಸ್ತಾನಕ್ಕೆ ಸೇರಿಸಲು ಸಂಚು

ಇತ್ತೀಚೆಗೆ ಹೊಸದಾಗಿ ರಚಿತವಾದ ಇಂಡೊ-ಪಾಕೀಸ್ತಾನ-ಇಸ್ಲಾಂ ಲೀಗ್ ಎಂಬ ಸಂಸ್ಥೆಯು ಲಾಹೋರಿನ ತನ್ನ ಕೇಂದ್ರ ಕಛೇರಿಯಿಂದ ಭಾರತೀಯ ಮುಸ್ಲಿಮರಿಗೆ ಒಂದು ಗುಪ್ತ ಮನವಿಯನ್ನು ಕಳುಹಿಸಿ ಅವರೆಲ್ಲರೂ ಈ ನೂತನ ಸಂಸ್ಥೆಗೆ ಸದಸ್ಯರಾಗಬೇಕೆಂದು ಕೋರಿದೆ. ಅಲ್ಲದೆ ದೆಹಲಿ, ಅಜ್ಮೀರ್, ಸಂಯುಕ್ತ ಪ್ರಾಂತ್ಯ, ಬಿಹಾರ್, ಬೊಂಬಾಯಿ ಮತ್ತು ಬೆರಾರ್ ಮುಂತಾದ ಪ್ರಾಂತ್ಯಗಳಿಗೆ ಸೇರಿದ ಹಲವು ಭಾಗಗಳನ್ನು ಪಾಕೀಸ್ತಾನಕ್ಕೆ ಸೇರಿಸಿ ಆ ರಾಷ್ಟ್ರವನ್ನು ಬದಾಯಿಸಬೇಕೆಂದೂ ಪ್ರಾರ್ಥಿಸಿದೆ.

ಈ ವಿಷಯವನ್ನು ಪರಿಶೀಲಿಸುವುದಾಗಿ ಸರ್ಕಾರವು ಭರವಸೆ ಕೊಟ್ಟ ಮೇಲೆ, ಸೆಕ್ಷನ್ ಅಲ್ಲಿಗೆ ಮುಕ್ತಾಯವಾಯಿತು. ಸ್ವಲ್ಪ ವಿದ್ಯಾಲಯದ ಉಪಾಧ್ಯಾಯರುಗಳ ಶಿಕ್ಷಣದ ಕಾಲೇಜಿನಲ್ಲಿ ಮುಂದಿನ ವರ್ಷದ ಎಂ ಇ ಡಿ ಪದವಿಯ ಶಿಕ್ಷಣವನ್ನು ಬೆಂಗಳೂರಿಗೆ ತರಬೇಕೆಂದು ಡಾ॥ ಸಿದ್ದಲಿಂಗಯ್ಯನವರ ನಿರ್ಣಯವು ಬಹುಮತದಿಂದ ನಿರಾಕೃತವಾಯಿತು. ಶ್ರೀ ಟಿ ಪುಟ್ಟಣ್ಣಯ್ಯ ಅವರು ಇದನ್ನು ವಿರೋಧಿಸಿ, ಈಗಿನ್ ವಿದ್ಯಾಲಯದ ವಿದ್ಯಾಭ್ಯಾಸದಿಂದ ದೇಶಕ್ಕೆ ಪ್ರಯೋಜನವೂ ಉಂಟಾಗುತ್ತಿದೆ ಎಂದೂ, ಬಡಗೂರೇಗೌಡನ ಹಣ ಹೆಚ್ಚು ವೆಚ್ಚವಾಗುತ್ತಿದೆಯೆಂದೂ ತಿಳಿಸಿದರು. ಇಂತಹ ಜೊಸ ಶಿಕ್ಷಣಕ್ಕೆ ಹೆಚ್ಚು ಖರ್ಚ ಮಾಡುವುದನ್ನು ನಿಲ್ಲಿಸಿ ಸೇವೆಯ ಅನಕ್ಷರತೆಯನ್ನು ನಿರ್ಮೂಲ ಮಾಡಲು ಹಣ ವೆಚ್ಚ ಮಾಡಬೇಕೆಂದು ತಿಳಿಸಿದರು. ಶ್ರೀಮತಿ ಕಮಲಾ ಬಿಯಂಗಾರ್ ಸಹ ಇದನ್ನು ವಿರೋಧಿಸಿ ಈಗಿನ ಪದ್ಧತಿ ಸರ್ಕಾರದವರು ಇಂದಿನ ಶಿಕ್ಷಣದ ಕ್ರಮವನ್ನೇ ಮಾರ್ಪಾಡು ಮಾಡಿ ಯೋಜನೆಯನ್ನು ರೂಪಿಸಿದಾಗ, ಇಂತಹ ಖರ್ಚಿನ ಅಗತ್ಯವಿಲ್ಲವೆಂದು ತಿಳಿಸಿದರು.

ಉಪಾಧ್ಯಾಯರ ಕಾಲೇಜಿನಲ್ಲಿ ಈ ಪದವಿ ತರಗತಿಗಳನ್ನು ತೆರೆಯುವುದರಿಂದ ಹೆಚ್ಚಿಗೆ ಹಣವು ವೆಚ್ಚವಾಗುವುದಿಲ್ಲವೆಂದೂ, ದೇಶದ ವಿದ್ಯಾಭ್ಯಾಸ ಕ್ರಮದ ಮೂಲೆಗೆ ಇದು ಹೆಚ್ಚು ಪ್ರಯೋಜನಕಾರಿಯಾಗುವುದೆಂದೂ ಡಾ॥ ಸಿದ್ದಲಿಂಗಯ್ಯನವರು ಪ್ರತಿಪಾದಿಸಿದರು.

ಯೂನಿಯರ್ ಇಂಟರನ ಆಟ್ಸ್ ಮತ್ತು ಸೈನ್ಸ್ ತರಗತಿಗಳಲ್ಲಿ ೧೯೪೪-೪೦ ರಿಂದ ಕನ್ನಡದನ್ನು ಶಿಕ್ಷಣದ ಮಾಧ್ಯಮವನ್ನಾಗಿ ಮಾಡಬೇಕೆಂದು ಶ್ರೀ ಎಂ ಪಿ ಲಿಪ್ಪೈ ನರಸಿಂಹ ಶಾಸ್ತ್ರಿಗಳು ಒಂದು ನಿರ್ಣಯವನ್ನು ಮಂಡಿಸಿ, ಕನ್ನಡ ದೇಶದ ವಿಶ್ವವಿದ್ಯಾನಿಲಯದಲ್ಲಿ ಪರಭಾಷೆಗೆ ಪ್ರಾಮುಖ್ಯತೆ ಕೊಟ್ಟು, ಮಾತೃ ಭಾಷೆಯನ್ನು ಹಿಂದಕ್ಕೆ ತಳ್ಳಿ ಹಾಕಿರುವುದು ವಿಷಾದಕರವೆಂದು ತಿಳಿಸಿದರು. ೩೦ ವರ್ಷಗಳ ಹಿಂದೆ ಹುಟ್ಟಿದ ವೈಸ್‌ಚಾನ್ಸ್‌ಲರು ತಿಳಿಸಿದರು ಸರ್ವಾನುಮತದಿಂದ ಕನ್ನಡ ವಿದ್ಯಾಲಯ ಬಾಗಬೇಕೆಂದು ದಿನಂಗತ ಮಹಾ ಪ್ರಭುಗಳು ಆಶಿಸಿರುದು ಇಲ್ಲಿಯವರೆಗೂ ನೆರವೇ ದಿನುವುದು ತುಂಬಾ ವಿಷಾದಕರವೆಂದೂ, ಈಗಿನ ಭಾಷೆಯು ವಿದ್ಯಾಭ್ಯಾಸದಿಂದ ಸಮಾಜವು ನಿರ್ಜೀವವಾಗಿ, ವಿದ್ಯಾರ್ಥಿಗಳ ಬುದ್ಧಿ ಶಕ್ತಿ ಮತ್ತು ಆತ್ಮ ವಿಶ್ವಾಸವು ಕುಂದಿ ಹೋಗುತ್ತಿದೆಯೆಂದೂ, ಆದನ್ನು ಕೂಡಲೇ ಸರಿಪಡಿಸಲು ಕನ್ನಡವು ಶಿಕ್ಷಣದ ಮಾಧ್ಯಮವಾಗಬೇಕೆಂದು ಅವರು ತಿಳಿಸಿದರು.

ಶ್ರೀ ಬಿ ವಿ ಶಿವಲಿಂಗಪ್ಪನವರು ಅದನ್ನು ಸಮರ್ಥಿಸಿದರು

ಸಭೆಯು ಈ ದಿನಕ್ಕೆ ಮುಂದುವರಿಯಿತು

ಈ ದಿನ ಶ್ರೀಗಳಾದ ಎ ಶ್ರೀನಿವಾಸ ಮೂರ್ತಿ, ಹೆಚ್ ಶ್ರೀಕಂಠಯ್ಯ, ಟಿ ಎಸ್ ರಾಜಗೋಪಾಲಯ್ಯಂಗಾರ್, ಟಿ ಮಾದೇಗೌಡ, ವಿ ಲಿಂಗಪ್ಪಯ್ಯ ಮೊದಲಾದವರು ನಿರ್ಣಯವನ್ನು ಸಮರ್ಥಿಸಿ, ಮಾತನಾಡಿ ಪ್ರಜಾಭಿಪ್ರಾಯಕ್ಕೆ ಮನ್ನಣೆ ಕೊಟ್ಟು, ಮಾತೃ ಭಾಷೆಯಾದ ಕನ್ನಡವನ್ನು ಶಿಕ್ಷಣ ಮಾಧ್ಯಮವನ್ನಾಗಿ ಮಾಡಬೇಕೆಂದು ತಿಳಿಸಿದರು ೧೯೪೮-೪೦ ರಲ್ಲಿ ಇದು ಜಾರಿಗೆ ಬರುವುದರಿಂದ, ೧೮ ತಿಂಗಳ ಕಾಲಾವಕಾಶದಲ್ಲಿ ಬೇಕಾದ ಪಠ್ಯ ಪುಸ್ತಕಗಳನ್ನು ತಯಾರಿಸಲು ಸಾಧ್ಯವೆಂದು ಅವರು ಹೇಳಿದರು.

ಶ್ರೀ ಎಫ್. ಸಿ ದೇವೇಗೌಡರು ಅರಸಿನಕೆರೆ ಅವರು ವಿರೋಧಿಸಿ, ಆಸ್ಪತ್ರಾವಾದ ಪಠ್ಯ ಪುಸ್ತಕಗಳನ್ನು ಪ್ರಕಟಿಸುವುದರಿಂದ, ೧೯೪೮-೪೦ ರಿಂದಲೇ ಅದನ್ನು ಜಾರಿಗೆ ತರುವುದಾಗಿ ವಿಶ್ವವಿದ್ಯಾಲಯವು ಬದ್ಧವಾಗುವುದು ನ್ಯಾಯವಾದುದಲ್ಲವೆಂದು ತಿಳಿಸಿದರು.

ಶ್ರೀ ಎಂ ಪಿ ಎಲ್ ಶಾಸ್ತ್ರಿಗಳು ಉತ್ತರವಿತ್ತು ಜನರು ಯಾವ ಭಾಷೆಯನ್ನು ಆಡಬೇಕೆಂಬುದು ಅದು ವಿಶ್ವವಿದ್ಯಾಲಯದ ಬೋಧಕ ಭಾಷೆಯಾಗಿರಬೇಕೆಂಬ; ಮಾತೃಭಾಷೆಯನ್ನು ಶಿಕ್ಷಣ ಕೊಟ್ಟು ತೊರತ್ತು ವಿದ್ಯಾರ್ಥಿಗಳು ದೇಶಸೇವೆ ಮಾಡಲು ಅರ್ಹರಾಗುವುದಿಲ್ಲ; ಅವಿಲ ಭಾರತದ ವ್ಯವಹಾರದ ಭಾಷೆಯು ಯಾವುದೇ ಆಗಲಿ, ಆಯಾ ಪ್ರಾಂತ್ಯಗಳ ಮತ್ತು ಸಂಸ್ಥಾನಗಳ ಶಿಕ್ಷಣವು ಅವುಗಳ ಮಾತೃಭಾಷೆಯಿಂದಲೇ ನಡೆಯಬೇಕೆಂದು ಅವರು ತಿಳಿಸಿದರು. ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು

ಚುನಾಯಿತ ಸ್ಥಾನಪತಿ

ಸೆನೆಟ್ ಸಭೆಯಿಂದ ಚುನಾಯಿತರಾದ ಪಾರಸೀ ವೈಸ್‌ಚಾನ್ಸ್‌ಲರು ನೇಮಕದಾರ ಬೇಕೆಂಬ ಶ್ರೀ ಟಿ ಎಸ್ ರಾಜಗೋಪಾಲಯ್ಯಂಗಾರ್ಯರ ನಿರ್ಣಯವೂ ಸರ್ವಾನುಮತದಿಂದ ಅಂಗೀಕೃತವಾಯಿತು, ಮೈಸೂರು ವಿಶ್ವವಿದ್ಯಾನಿಲಯವು ಇತರ ವಿದ್ಯಾಲಯಗಳಂತೆ ಸ್ವಾತಂತ್ರ್ಯ ಸಂಸ್ಥೆಯಾಗಿರದೆ ಸರ್ಕಾರದ ಒಂದು ಶಾಖೆಯಾಗಿರುವುದೆಂದು ಶ್ರೀ ಟಿ ಎಸ್ ರಾಜಗೋಪಾಲಯ್ಯಂಗಾರ್ಯರು ತಿಳಿಸಿ, ಇಂತಹ ಉನ್ನತ ಸಂಸ್ಥೆಗೆ ಚುನಾಯಿತ ಪಾರಸೀ ಸ್ಥಾನಪತಿಗಳಿರಬೇಕಾದದ್ದು ಅತ್ಯಗತ್ಯವೆಂದು ಹೇಳಿದರು. ಶ್ರೀಗಳಾದ ಎ ಶ್ರೀನಿವಾಸಮೂರ್ತಿ, ಎಂ. ಪಿ ಎಲ್ ಶಾಸ್ತ್ರಿ, ಶ್ರೀಮತಿ ಕಮಲಾಬಾಯಿ ಮೊದಲಾದವರು ಅದನ್ನು ಸಮರ್ಥಿಸಿದರು. ಶ್ರೀ ಎಫ್ ಸಿ ದೇವೇಗೌಡರು ಆದನ್ನು ವಿರೋಧಿಸಿದರು

ನಿಜವಿದ್ಯಾಲಯದಲ್ಲಿ ಕನ್ನಡ ಮಾಧ್ಯಮವಿರಬೇಕು

ಚುನಾಯಿತ ಸ್ಥಾನಪತಿಗಳು ಬೇಕು

ಸೆನೆಟ್ ಸಭೆಯ ನಿರ್ಧಾರ

ಮೈಸೂರು ೨೩

ವಿಶ್ವವಿದ್ಯಾಲಯದ ಮುಂದುವರಿದ ಸೆನೆಟ್ ಸಭೆಯು ನಿನ್ನೆ ದಿನ ನಡೆಯಿತು.

ಅಸಿಸ್ಟೆಂಟ್ ಪ್ರೊಫೆಸರುಗಳ ನೇಮಕದ ಬಗ್ಗೆ ಪತ್ರಿಕೆಗಳಲ್ಲಿ ಬಂದಿರುವ ಹಲವಾರು ಟೀಕೆ ಮತ್ತು ಟೀಕೆಗಳ ವಿಷಯವನ್ನು ಟಿ ಎಸ್ ರಾಜಗೋಪಾಲಯ್ಯಂಗಾರ್ಯರು ಪ್ರಸ್ತಾಪಿಸಿ, ಅವುಗಳ ನಿಜಸ್ಥಿತಿಯನ್ನು ತಿಳಿಯಬೇಕೆಂದು ಕೋರಿದರು

ಅಸಿಸ್ಟೆಂಟ್ ಪ್ರೊಫೆಸರುಗಳ ನೇಮಕದ ಬಗ್ಗೆ ಇನ್ನಿ ಪೂರ್ಣ ನಿರ್ಧಾರಕ್ಕೆ ಬಂದಿಲ್ಲವೆಂದೂ ಆ ವಿಷಯವೂ ಗುಪ್ತವಾಗಿದೆಯೆಂದೂ ಪತ್ರಿಕೆಯಲ್ಲಿ ಪ್ರಕಟವಾಗಿರುವ ಸುದ್ದಿಗಳಲ್ಲಿ ಬಗ್ಗೆ ತಾವು ಏನನ್ನೂ ಹೇಳಲು ಸಾಧ್ಯವಿಲ್ಲವೆಂದೂ ಸ್ಥಾನಪತಿಗಳು ತಿಳಿಸಿದರು

ಶ್ರೀ ಎ ವೆಂಕಟೇಶಯ್ಯನವರು ಈ ವಿಷಯದಲ್ಲಿ ಮಾತನಾಡಿ, ವಿಶ್ವವಿದ್ಯಾನಿಲಯದ ಆಯ ಸಮಿತಿಯವರು ದಕ್ಷತೆ ಮತ್ತು ಸೇನಿಯಾರಿಟಿಗಳನ್ನು ಅನುಸರಿಸಿ, ಹಲವು ಸಲಹೆಗಳನ್ನು ವಿಶ್ವವಿದ್ಯಾನಿಲಯ ಕೌನ್ಸಿಲ್ಲಿನವರು ತಿರಸ್ಕರಿಸಿ ಕೋಮನ್ನು ಆರು ಭಾವನೆ ಮೇಲೆ ನೇಮಕ ಮಾಡಿರುವುದನ್ನು ತಿಳಿಸಿ, ಹೆಸರುಗಳ ಪಟ್ಟಿಯನ್ನು ಓದಲು ಸ್ವಾರಂಭಿಸಿದರು.

ವಿಶ್ವವಿದ್ಯಾಲಯದಿಂದ ಅಧಿಕೃತವಾದ ಯಾವ ಆದೇಶವೂ ಹೊರಬಿದ್ದಿಲ್ಲದುದರಿಂದ, ಹೆಸರುಗಳನ್ನು ಗಮನಕ್ಕೆ ತೆಗೆದುಕೊಳ್ಳಲಾಗುವುದಿಲ್ಲವೆಂದು ವೈಸ್‌ಚಾನ್ಸ್‌ಲರು ತಿಳಿಸಿದರು

ಸರ್ವಾನುಮತದಿಂದ ಈ ಬಗ್ಗೆ ಉಂಟಾಗಿರುವ ಕಳವಳವನ್ನು ನಿವಾರಿಸಲು ಸ್ಥಾನಪತಿಗಳು ಒಂದು ವಿವರಣೆಯನ್ನು ಕೊಡಬೇಕೆಂದು ತೀರ್ಮಾನಿಸಿದರು

ಈ ವಿಷಯವನ್ನು ಪರಿಶೀಲಿಸುವುದಾಗಿ ಸರ್ಕಾರವು ಭರವಸೆ ಕೊಟ್ಟ ಮೇಲೆ, ಸೆಕ್ಷನ್ ಅಲ್ಲಿಗೆ ಮುಕ್ತಾಯವಾಯಿತು. ವಿಶ್ವವಿದ್ಯಾಲಯದ ಉಪಾಧ್ಯಾಯರುಗಳ ಶಿಕ್ಷಣದ ಕಾಲೇಜಿನಲ್ಲಿ ಮುಂದಿನ ವರ್ಷದ ಎಂ ಇ ಡಿ ಪದವಿಯ ಶಿಕ್ಷಣವನ್ನು ಬೆಂಗಳೂರಿಗೆ ತರಬೇಕೆಂದು ಡಾ॥ ಸಿದ್ದಲಿಂಗಯ್ಯನವರ ನಿರ್ಣಯವು ಬಹುಮತದಿಂದ ನಿರಾಕೃತವಾಯಿತು. ಶ್ರೀ ಟಿ ಪುಟ್ಟಣ್ಣಯ್ಯ ಅವರು ಇದನ್ನು ವಿರೋಧಿಸಿ, ಈಗಿನ್ ವಿದ್ಯಾಲಯದ ವಿದ್ಯಾಭ್ಯಾಸದಿಂದ ದೇಶಕ್ಕೆ ಪ್ರಯೋಜನವೂ ಉಂಟಾಗುತ್ತಿದೆ ಎಂದೂ, ಬಡಗೂರೇಗೌಡನ ಹಣ ಹೆಚ್ಚು ವೆಚ್ಚವಾಗುತ್ತಿದೆಯೆಂದೂ ತಿಳಿಸಿದರು. ಇಂತಹ ಜೊಸ ಶಿಕ್ಷಣಕ್ಕೆ ಹೆಚ್ಚು ಖರ್ಚ ಮಾಡುವುದನ್ನು ನಿಲ್ಲಿಸಿ ಸೇವೆಯ ಅನಕ್ಷರತೆಯನ್ನು ನಿರ್ಮೂಲ ಮಾಡಲು ಹಣ ವೆಚ್ಚ ಮಾಡಬೇಕೆಂದು ತಿಳಿಸಿದರು. ಶ್ರೀಮತಿ ಕಮಲಾ ಬಿಯಂಗಾರ್ ಸಹ ಇದನ್ನು ವಿರೋಧಿಸಿ ಈಗಿನ ಪದ್ಧತಿ ಸರ್ಕಾರದವರು ಇಂದಿನ ಶಿಕ್ಷಣದ ಕ್ರಮವನ್ನೇ ಮಾರ್ಪಾಡು ಮಾಡಿ ಯೋಜನೆಯನ್ನು ರೂಪಿಸಿದಾಗ, ಇಂತಹ ಖರ್ಚಿನ ಅಗತ್ಯವಿಲ್ಲವೆಂದು ತಿಳಿಸಿದರು.

ಕಲಾಯಿ ಮಾಡುವನನ ಬಳಿ ತೋಟಾ ಸಿಕ್ಕಿತು

ಸ್ವಂ ಸು ಫೋ] ಬೆಂಗಳೂರು ೨೩

ನಿನ್ನೆ ಮಧ್ಯಾಹ್ನ ನಗರದ ಕರಡಿಕರ ರಸ್ತೆಯ ಮನೆಯೊಂದರಲ್ಲಿ ಕಲಾಯಿ ಮಾಡುತ್ತಿದ್ದವನ ಚೀಲದಿಂದ ಆಸ್ಫೋಟನೆಯುಂಟಾಯಿತು ಇದನ್ನು ಕಂಡು ಜನರ ಗುಂಪು ಸೇರಿತು. ಸ್ಥಳೀಕರಿಗೆ ಅವನ ಬಳಿ ಬಂದೂಕದ ತೋಟಾ ಸಿಕ್ಕಿತೆಂದೂ, ಅದು ಅವನಿಗೆ ಹೇಗೆ ದೊರೆಯಿತೆಂಬುದರ ಬಗ್ಗೆ ಉತ್ತರ ಕೊಡಲಿಲ್ಲವೆಂದೂ ಗೊತ್ತಾಗಿದೆ

ನೆನ್ನೆ ರಾತ್ರಿ ಕುಂಬಾರಪೇಟೆಯ ಅಂಗಡಿಯೊಂದಕ್ಕೆ ಬೆಂಕಿ ಹಗರಿ ಅದು ಪಕ್ಕದಲ್ಲಿದ್ದ ಒಂದು ದರ್ಜಿ ಅಂಗಡಿಗೂ ಹರಡಿತೆಂದು ವರದಿಯಾಗಿದೆ. ಕೂಡಲೇ ಅದನ್ನು ಶಮನ ಮಾಡಲಾಯಿತು.

ಶ್ರೀಶಾಪ ಸಚಿವರೂ ಮತ್ತು ಆರೋಗ್ಯ ಸಚಿವರೂ ಆಸ್ಪತ್ರೆಗೆ ಭೇಟಿ ಕೊಟ್ಟು ಗಲಭೆಗಳಾಗಿ ನೋಂದವರ ಯೋಗ ಕ್ಷೇಮುಗಳನ್ನು ವಿಚಾರಿಸಿದರು.

ಗ್ವಾಲಿಯರ್‌ನಲ್ಲಿ ದಿವಾನರಿಲ್ಲದ ಸರ್ಕಾರ

ಗ್ವಾಲಿಯರ್ ಸಂಸ್ಥಾನದಲ್ಲಿ ಶಾಸನ ಸಭೆಗಳ ಚುನಾಯಿತ ಪ್ರತಿನಿಧಿಗಳ ನಂಬಿಕೆಯನ್ನು ಪಡೆದ ೯ ಮಂದಿ ಮಂತ್ರಿಗಳ ನೂತನ ತಾತ್ಕಾಲಿಕ ಸರ್ಕಾರವನ್ನು ನಿರ್ಮಿಸಲು ಅಲ್ಲಿನ ಮಹಾರಾಜರು ಒಪ್ಪಿರುತ್ತಾರೆ. ರಾಜರಿಂದ ನಾಮಕರಣ ಮಾಡಲ್ಪಟ್ಟ ಇಬ್ಬರು ಮಂತ್ರಿಗಳೂ ಆದರಲ್ಲಿ ಇರುವರು ಅಲ್ಲಿನ ಕಾನೂನ ಸಭೆಯ ಕಾಂಗ್ರೆಸ್ ನಾಯಕರಿಗೆ ಮಂತ್ರಿಮಂಡಲವನ್ನು ರಚಿಸಲು ಮಹಾರಾಜರು ಆಹ್ವಾನ ಕೊಟ್ಟಿದ್ದಾರೆ ಈ ಮಂತ್ರಿಮಂಡಲದಲ್ಲಿ ದಿವಾನರು ಇರುವುದಿಲ್ಲವೆಂದೂ ಮೂಲಿನ ಸೋನ ವಾರ ನೂತನ ಸರ್ಕಾರವನ್ನು ರಚಿಸಲಾಗುವುದೆಂದೂ ಹೇಳಲಾಗಿದೆ

ಡಾ॥ ಖಾ ಸಾಹೇಬರಿಂದ ಗೌರ್ನರ್ ಪದವಿ ನಿರಾಕರಣೆ

ಗಡಿನಾಡು ಕಾಶ್ಮೀರದ ಮಾಜಿ ಕಾಂಗ್ರೆಸ್ ಪ್ರಧಾನಿ ಡಾ॥ ಖಾನ್ ಸಾಹೇಬರು ಅಲ್ಲಿನ ಗವರ್ನರ್ ಪದವಿಯನ್ನು ಸ್ವೀಕರಿಸಬೇಕೆಂದು ಪಾಕೀಸ್ತಾನ ಪ್ರಧಾನ ಲಿಯಾಕತ್ ಅಲಿಯವರು ಅಹ್ವಾನವಿತ್ತರೆಂದೂ ಅದರೆ ಅವರು ಅದನ್ನು ನಿರಾಕರಿಸಿದರೆಂದೂ ವರದಿಯಾಗಿದೆ. ಡಾ॥ ಖಾನ್ ಸಾಹೇಬರು ಸರ್ವೆಂಟ್ ಆಫ್ ಪೀಪಲ್ಸ್ ಪಕ್ಷದವರ ಚಳುವಳಿಗಳನ್ನು ಬಿಟ್ಟು ಯಾವ ಪರಕ್ಷ ಇಲ್ಲದೆ ಮುಸ್ಲಿಂ ಲೀಗಿಗೆ ಸೇರಬೇಕೆಂದೂ ಮಿಲಿಟರಿ ಅಧಿಕಾರಿಗಳು ಸೂಚಿಸಿದ್ದರೆಂದೂ, ಇದಕ್ಕೆ ಉತ್ತರವಾಗಿ ಡಾ॥ ಖಾನ್ ಸಾಹೇಬರು ತಾವು ಅಧಿಕಾರ ಲಾಲಸೆಯಿಂದ ಕೆಳಕ್ಕೊಂದು ಬಿದ್ದವನ್ನು ಬದಲಾಯಿಸಲು ಸಿದ್ಧರಿಲ್ಲವೆಂದು ತಿಳಿಸಿದುದಾಗಿಯೂ ಗೊತ್ತಾಗಿದೆ.

ಕಾಶ್ಮೀರ ನಿಧಿಗೆ ಜವಹರರ ಕಾಣಿಕೆ

ಕಾಶ್ಮೀರದ ಪರಿಹಾರ ನಿಧಿಗೆ ಪಂಡಿತ ಜವಹರಲಾಲ್ ನೆಹರುರವರ ೧೧,೦೦೦ ರೂ ಗಳನ್ನು ಕೊಟ್ಟಿದ್ದಾರೆ

ಪ್ರದೋಷ ಸಂಗೀತ

ಬಿದಿರೂರು ಕೃಷ್ಣಪ್ಪನವರು ಪ್ರಸನ್ನ ಸೀತಾರಾಮ ಮಂದಿರದಲ್ಲಿ ಈ ದಿನ ಸಂಜೆ ೬.೩೦ ಗಂಟೆಗೆ ಶ್ರೀಮತಿ ಸರೋಜಿನಿ ದೇವಿಯವರ ಸಂಗೀತವನ್ನೇರ್ಪಡಿಸಿರುವರಾಗಿದೆ.

ನೇತಾಜಿ ಜಯಂತಿ

ಮೈಸೂರು ೨೩

ಈ ದಿನ ಬೆಳಿಗ್ಗೆ ನೇತಾಜಿ ಸಂಘದವರು ಸುಬ್ರಾಯನ ಕೆರೆಯಲ್ಲಿ ನೇತಾಜಿ ಸುಭಾಷ್ ಚಂದ್ರಬೋಸರ ೫೨ ನೇ ಜಯಂತಿಯನ್ನು ಆಚರಿಸಿದರು. ಸಂಘದ ಸದಸ್ಯರುಗಳ ಕವಾತುಗಳಾದ ಮೇಲೆ ಶ್ರೀ ಆಗರಂ ರಂಗಯ್ಯನವರು ರಾಷ್ಟ್ರ ಧ್ವಜಾರೋಹಣ ಮಾಡಿ ಬೋಸರ ವಿಚಾರವಾಗಿ ಮಾತನಾಡಿ ನಮ್ಮ ದೇಶದ ತರುಣರಿಲ್ಲರೂ ಅವರಂತೆ ದೇಶಾಭಿಮಾನಿಗಳಾಗಿ ರಾಷ್ಟ್ರ ಧುರಂಧರನಾಗಬೇಕೆಂದು ಹೇಳಿದರು. ಏ ಎ ಸದಸ್ಯರಾದ ಶ್ರೀ ಅಂಕೇಗೌಡಯ್ಯನವರು ಬೋಸರ ಆದರ್ಶಗಳನ್ನು ವಿವರಿಸಿದರು

ಇಟ್ಟಿಗೆಗೂಡು ಯುವಕ ಸಂಘದವರೂ ಜಯಂತಿಯನ್ನು ಆಚರಿಸಿ ಧ್ವಜಾರೋಹಣ ಮತ್ತು ಶ್ರೀ ವಿಶ್ವನಾಥರವರಿಂದ ಭಾಷಣಗಳನ್ನು ನಡೆಸಿದರು,

ಬಳಿಯಿಂದ ೫೬ ಮಂದಿ ಮರಣ

ಅಮೆರಿಕದಲ್ಲಿ ಈಸ್ಟರ್ ಬಳಿಯ ಗಾಳಿಯು ಸಂಭವಿಸಿ, ೫೬ ಜನರು ಸತ್ತಿದೆರೆಂದು ಕೇಳಲಾಗಿದೆ.

ಭಾರಿಯ ಪಣಗುಗಳು

ಗಂಟೆಗೆ ಸುಂ ವೈಲಿ ಸಂಚಾರ ವೇಗ ಮತ್ತು ೧೦೦ ಮಂದಿ ಸ್ವಯಾಣಿಕರನ್ನು ಒಯ್ಯುವ ಅತ್ಯಂತ ದೊಡ್ಡ ಹಾರುವ ಹಡಗುಗಳು ಬ್ರಿಟನ್ನಿನಲ್ಲಿ ತಯಾರಿಸಲಾಗುತ್ತಿದೆಯೆಂದು ವರದಿಯಾಗಿದೆ

ವುಡ್‌ಲ್ಯಾಂಡ್ಸ್

23-1-48 ರಿಂದ

ಅಮೋಘ ಎರಡನೇ ವಾರ

ದಿ ಕ್ರಾತ್

(ಅಮೋಘ ಹಿಂದೀ ಚಿತ್ರ)

ಪಾತ್ರ — ಸ್ನೇಹ ಪ್ರಭಾ

(ಕರ್ನಾಟಕ ಫಿಲ್ಮಂ ರಿಲೀಸ್)

Morning Shows from 23-1-48 for 4 days

Scouts to the Rescue

ಫ್ರಾನ್ಸಿನಲ್ಲಿ ಕಮ್ಯೂನಿಸ್ಟರ ಬಳಸಂಚು

ಫ್ರಾನ್ಸಿನ ಒಂದು ಪ್ರದೇಶದಲ್ಲಿ ಗುಪ್ತವಾಗಿ ಶಸ್ತ್ರಗಳ ಶೇಖರಣೆಯನ್ನು ಕಮ್ಯೂನಿಸ್ಟರು ಮಾಡುತ್ತಿರುವರು ಮುಂದೆ ಫ್ರಾನ್ಸಿನಲ್ಲಿ ದಂಗೆ ನಡೆಸಲು ಇದು ಒಳಸಂಚೆಂದು ಹೇಳಲಾಗಿದೆ. ಮಧ್ಯ ಫ್ರಾನ್ಸಿನ ಹಳ್ಳಿಯೊಂದನ್ನು ಆವರು ವಶಪಡಿಸಿಕೊಳ್ಳುವ ಪ್ರಯತ್ನದ ಬಗ್ಗೆ ಅಲ್ಲಿನ ಪೊಲೀಸರು ತನಿಖೆ ನಡೆಸುತ್ತಿದ್ದಾರೆಂದು ವರದಿಯಾಗಿದೆ

ವಿಮಾನ ನಿಲ್ದಾಣದ ಅಭಿವೃದ್ಧಿಗೆ ೨ ಕೋಟಿ ರೂ.

ದೆಹಲಿ, ಬೊಂಬಾಯಿ, ಕಲ್ಕತ್ತ, ಅಲಹಾಬಾದ್, ನಾಗಪುರ, ಅಹಮದಾಬಾದ್, ಭುವನೇಶ್ವರ ಮತ್ತು ವಿಶಾಖ ಪಟ್ಟಣಗಳಲ್ಲಿರುವ ವಿಮಾನ ನಿಲ್ದಾಣಗಳನ್ನು ಅಭಿವೃದ್ಧಿ ಪಡಿಸಲು ಭಾರತ ಸರ್ಕಾರದವರು ೨ ಕೋಟಿ ರೂ. ಗಳನ್ನು ಮಂಜೂರು ಮಾಡಿದ್ದಾರೆ.

ಜ್ಞಾನಶಕ್ತಿಗೆ ಚಿಕಿತ್ಸೆ

ಜ್ಞಾನಶಕ್ತಿಯನ್ನು ಕಳೆದುಕೊಂಡ ೩೨ ವರ್ಷದವನೊಬ್ಬನು ಇಂಗ್ಲೆಂಡಿನ ನ್ಯೂರ್ಯಲ್ ಆಸ್ಪತ್ರೆಗೆ ಭೇಟಿ ಕೊಟ್ಟಾಗ, ಅವನಿಗೆ 'ಟ್ರೈಪ್ ಡ್ರಗ್' ಎಂಬ ಔಷಧಿಯನ್ನು ಕೊಟ್ಟಿದ್ದರಿಂದ, ಅವನಿಗೆ ಜ್ಞಾನಶಕ್ತಿಯು ಬಂದು ನೌಕರಿಯಿಂದ ತಾನು, ವಿಸರ್ಜಿಸಲ್ಪಟ್ಟವನೆಂದು ಆಗ ತಾನೇ ಅರಿತುಕೊಂಡನೆಂದು ವರದಿಯಾಗಿದೆ.

Edited printed and published by A. R. Nagaraja at the Sadhvi Press D. Subbaiah Road Mysore.

"ಸಂಯುಕ್ತ ಭಾರತ"

ಬೆಂಗಳೂರಿನ "ಫೆತರಲ್ ಇಂಡಿಯ ಅಂಡ್ ಇಂಡಿಯಾ ಸ್ಟೇಟ್ಸ್" ಎಂಬ ಆಂಗ್ಲ ವಾರ ಪತ್ರಿಕೆಯ ಸಂಪಾದಕರಾದ ಶ್ರೀ ಹೆಚ್. ಶ್ರೀಕಂಠಯ್ಯನವರು ಇದೇ ಮಾಹೆ ೨೬ ನೇ ಸೋಮವಾರದಿಂದ "ಸಂಯುಕ್ತ ಭಾರತ" ಎಂಬ ಕನ್ನಡ ವಾರಪತ್ರಿಕೆಯನ್ನು ಮತ್ತು ವಾರ ಪತ್ರಿಕೆಗಳನ್ನು ಪ್ರಕಟಿಸಲಿದ್ದಾರೆ. ಆದರ ದೈನಂದಿನ ಪತ್ರಿಕೆಯ ವಾರ್ಷಿಕ ಚಂದವು ೪೮ ರೂ ದನಂಗೆ ೧೦ ರೂ; ಪರಸ್ಥಳದವರಿಗೆ ೧೫ ರೂ. ಕನ್ನಡಿಗರಿಲ್ಲರೂ ಇದಕ್ಕೆ ಸಹಕಾರ, ಬೆಂಬಲ ನೀಡಬೇಕೆಂದು ಆವರು ಪ್ರಾರ್ಥಿಸಿರುತ್ತಾರೆ

ಇಂಗ್ಲೆಂಡಿನಲ್ಲಿ ವ್ಯವಸಾಯದ ಪ್ರಚಾರ

ಬ್ರಿಟನ್ನಿನಲ್ಲಿ ವ್ಯವಸಾಯಕ್ಕೆ ಹೆಚ್ಚು ಪ್ರೋತ್ಸಾಹ ಕೊಡಲು, "ಜಮಾನಿಗೆ ಹಿಂತಿರುಗಿ" ಎಂಬ ಪ್ರಚಾರವನ್ನು ಬ್ರಿಟಿಷ್ ಸರ್ಕಾರದವರು ಕೈಗೊಂಡಿದ್ದಾರೆ. ೧ ಲಕ್ಷ ಕೆಲಸಗಾರರು ಮುಂದಿನ ವ್ಯವಸಾಯ ಸೈನ್ಯದ ಪಡೆ ಮತ್ತು ರಜದಲ್ಲಿ ಕೆಲಸಮಾಡುವ ಸ್ವಯಂಸೇವಕರುಗಳು-ಇವರುಗಳನ್ನು ತರಬೇತು ಮಾಡುವುದೇ ಮೇಲ್ಕಂಡ ಪ್ರಚಾರದ ಮುಖ್ಯ ಧ್ಯೇಯವೆಂದು ಹೇಳಲಾಗಿದೆ

ಚಾಮುಂಡೇಶ್ವರೀ ಟಾಕೀಸು

ಪಾಳಕ ಆರ್ಯ ಪ್ರೊಡಕ್ಷನ್ಸ್‌ರವರ

★ ಜುಗ್ನು ★

[ಹಿಂದೀ ಸಾಮಾಜಿಕ ಚಿತ್ರ]

೨೨-೧-೪೮ ರಿಂದ ಯಶಸ್ವಿಯಾದ ೪ ನೇ ವಾರ

ಮೈಸೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್, ಲಿ., ಮೈಸೂರು.

ಈ ಬ್ಯಾಂಕಿನಲ್ಲಿ ಠೇವಣಿ ಸಾಲಿಯಾನ ರೂ. ೨-೧೨-೦ ಬಡ್ಡಿ ದರದ ಮೇಲೆ ಒಂದು ವರ್ಷ ವಾಯಿದೆಯ ಫಿಕ್ಸೆಡ್ ಡಿವಾಜಿಟ್ಟುಗಳನ್ನು ತೆಗೆದುಕೊಳ್ಳಲಾಗುತ್ತೆ.

ಬಿ. ವಿ. ನಂಜುಂಡಯ್ಯ.
ಆ ಸೆಕ್ರೆಟರಿ.

ಜಾ॥ ೧೧—೧—೪೮.

ಉಪಾಧ್ಯಾಯರ ಸಂ

ನಂಜನಗೂಡು

ಇಲ್ಲಿನ ಕಸಬಾ ರೇಂಜ್ ಪ್ರಾಥಮಿಕ ಮತ್ತು ಉರ್ದೂ ಉಪಾಧ್ಯಾಯರ ಸಂಘದ ಸಭೆಯು ಮುಂದಿನ ತಿಂಗಳ ೫ ನೇ ತಾರೀಖು ನಡೆಯುವುದು. ಸದ್ಯ ವಯಸ್ಕರ ಶಿಕ್ಷಣದ ಕಾರ್ಯದರ್ಶಿಗಳು ಮತ್ತು ಸ್ಕೌಟ್ ಸಂಚಾಲಕರೂ ಭಾಷಣ ಮಾಡುವರು

ಶ್ರೀ ಶಂಕರೇಶ್ವರಾದ್ವೈತ ಸಭೆ

ಮೇಲ್ಕಂಡ ಸಭೆಯು ಆ ಶ್ರಯದಲ್ಲಿ ೨೬-೧-೪೮ ನೇ ಸೋಮವಾರ ಸಂಜೆ ೫॥ ಘಂಟೆಗೆ ಶ್ರೀ ಶಂಕರ ವಿದ್ಯಾಶಾಲೆ ಶ್ರೀ ಶಂಕರನಾರಾಯಣ ಶಾಸ್ತ್ರಿಗಳವರು ಸನಾತನ ಧರ್ಮ ರಕ್ಷಣೆ" ಎಂಬ ವಿಷಯವಾಗಿ ಉಪನ್ಯಾಸ ಮಾಡುವರೆಂದು ರೂ ದಯಮಾಡಿಸಬೇಕಾಗಿ ಕೋರಿದೆ

ಉಚಿತ ವಾಚನಾಲಯ

ರಾಜಧಾನಿಯ ಸೆಂಟ್ ಫಿಲೊಮಿನ ಚರ್ಚಿನ ಸಮೀಪದಲ್ಲಿ ವಿದ್ಯಾರ್ಥಿಗಳ ಫೋಲಿಂ ಕೆಲಸಗಾರರ ಉಚಿತ ವಾಚನಾಲಯದ ಆರಂಭೋತ್ಸವನ್ನು ಪ್ರಸಿದ್ಧ ಸದಸ್ಯರಾದ ಶ್ರೀ ಬಿ. ನಾರಾಯಣಸ್ವಾಮಿಯವರು ಕಳೆದ ಭಾನುವಾರ ನೆರವೇರಿಸಿದರು

ಶ್ರೀ ನಾರಾಯಣಸ್ವಾಮಿಯವರು ಭಾಷಣ ಮಾಡಿ, ಸಮಾಜ ಸೇವೆಯಲ್ಲಿ ಫೋಲಿಂ ಜನಾಂಗದವರ ಕರ್ತವ್ಯವಿವರಿಸಿ, ಕೋಮುವಾರು ಭೇದವಿಲ್ಲದೆ ಎಲ್ಲರು ಸೇವೆ ಸಲ್ಲಿಸಬೇಕೆಂದು ತಿಳಿಸಿದರು ಫಾ॥ ಥಾಮಸ್ ಮತ್ತು ಮಿ॥ ಸ್ಟಿರವರುಗಳು ಭಾಷಣ ಮಾಡಿದರು

ಅಪೇರಾ ಟಾಕೀಸ್

22-1-48 ರಿಂದ ಅಮೋಘ 2 ನೇ

ಜಂಗಲ್ ಬುಕ್

(ಟೆಕ್ನಿ ಕಲರ್)

ಪಾತ್ರ — ಮೈಸೂರು ಸಾಮ್ರಾಜ್ಞಿ

Morning shows from 23-1-48 for 4 days

My Darling Clementine

With:- Henry Fonda & Linda Darnel

ಪ್ರಭುದೇವಾ ಟಾಕೀಸಿನಲ್ಲಿ

25-1-48 ನೇ ಭಾನುವಾರದಿಂದ

ಅಮೋಘ ಪ್ರಾರಂಭ :: ಪ್ರತಿ ದಿನ ೩ ಆಟಗಳು

ಪಂಪಾ ಪಿಕ್ಚರ್ಸ್‌ರವರ

★ ಚಂದ್ರಹಾಸ ★

ಅನುಪಮ ಸಂಗೀತ, ಆಕರ್ಷಕ ನೃತ್ಯ, ಅಭಿನಯಗಳಿಂದ ಕೂಡಿದ ಕನ್ನಡ ಚಿತ್ರ

CHANDRAHASA

ಸಂಪುಟ ೬] ಶನಿವಾರ ೨೪-೧-೪೮ [ಸಂಚಿಕೆ ೧೨೪

ಕಾಥೆಯವಾಡದ ಸಂಯುಕ್ತ ಸಂಸ್ಥಾನ

ವಿಶ್ವವಿದ್ಯಾಲಯದಲ್ಲಿ ಮೇಧಾವಿಗಳಿಗೆ ಸ್ಥಾನ

ಸೆನೆಟ್ ಸಭೆಯಲ್ಲಿ ನಿರ್ಣಯವು ಬಿದ್ದುಹೋಯಿತು

ಮೈಸೂರು ೨೪

ಒಕ್ಕವಿದ್ಯಾನಿಲಯಕ್ಕೆ ವಿದ್ಯಾರ್ಥಿಗಳ ಸೇರಿಸಿಕೊಳ್ಳುವ ಸಂದರ್ಭದಲ್ಲೂ ಮಿಶ್ರ ಅಧ್ಯಾಪಕರನ್ನು ನೇಮಕ ಮಾಡಿಕೊಳ್ಳುವಾಗಲೂ, ಮೇಧಾವಿಗಳಿಗೇ ಅವಕಾಶ ಕೊಡಬೇಕು, ಎಂಬ ವಿಷಯವಾಗಿ ಎರ್ಪಾಡಾಗಬೇಕೆಂದು ಶ್ರೀ ಎ ಶ್ರೀನಿವಾಸಮೂರ್ತಿಯವರು ಇಂದು ನಿರ್ಣಯವನ್ನು ಸೆನೆಟ್ ಸಭೆಯ ಮುಂದಿಟ್ಟು ವಿನಂತಿಸಿದರು

ಶ್ರೀಗಳಾದ ನೇರಳೆ ಮೂರ್ತಯ್ಯ, ನಾರಾಯಣಮೂರ್ತಿ, ಶಿವಲಿಂಗಪ್ಪ, ಟಿ ಮೂರ್ತಿ ಮೊದಲಾದವರು ಅದನ್ನು ವಿರೋಧಿಸಿ, ಇದರಿಂದ ರೈತಾಪಿ ಜನಗಳ ಮಕ್ಕಳ ವಿದ್ಯಾಭ್ಯಾಸಕ್ಕೂ ಮತ್ತು ಪ್ರಗತಿಗೂ ಧಕ್ಕೆ ಬರುವುದೆಂದು ತಿಳಿಸಿದರು

ಇಂದಿನ ಸ್ಪಾತಂತ್ರ್ಯ ಯುಗದಲ್ಲಿ ಮೇಧಾವಿಗಳ ಸಂಖ್ಯೆ ದೇಶದ ಪ್ರಗತಿಗೆ ಲಕ್ಷೋಪಲಕ್ಷ ಬೇಕಾಗಿರುವಾಗ, ಸಭೆಯ ಮುಂದೆ ಬರುವ ಈ ಸೂಚನೆ ದೇಶದ್ರೋಹಕರ ಅಭಿಪ್ರಾಯಕ್ಕೆ ಸಂಪೂರ್ಣ ಮನ್ನಣೆ ಕೊಡುವುದಾಗಿದೆಯೆಂದು ಶ್ರೀ ಎ ವೆಂಕಟೇಶಯ್ಯನವರು ತಿಳಿಸಿ, ನಿರ್ಣಯವನ್ನು ಸಮರ್ಥಿಸಿದರು

ನಿರ್ಣಯವನ್ನು ಓಟಿಗೆ ಹಾಕಿದಾಗ, ೨ ಮಂದಿ ಪರವಾಗಿಯೂ, ೯ ಮಂದಿ ವಿರೋಧಿಸಿಯೂ ಓಟು ಮಾಡಿದ್ದಾರೆಂದು ಅಧ್ಯಕ್ಷರು ಹೇಳಿದೊಡನೆಯೇ, ಶ್ರೀ ಎಫ್. ದೇವರಾಜೇ ಅರಸಿನವರು ತಮ್ಮ ಕೈ ಎತ್ತಿ, ತಾವು ನಿರ್ಣಯವನ್ನು ವಿರೋಧಿಸುವುದಾಗಿ ತಿಳಿಸಿದರು. ಈ ಸದ ಕಾಲಾತೀತವಾದ ವರ್ತನೆಯನ್ನು ಹಲವು ಸದಸ್ಯರು ಪ್ರತಿಭಟಿಸಿದರು ಮುಂದಾವ ರೀತಿ ನಿರ್ಣಯವನ್ನು ತೀರ್ಮಾನಿಸಬೇಕೆಂಬ ವಿಷಯವಾಗಿ ಸಭೆಯಲ್ಲಿ ಸ್ವಲ್ಪ ಗೊಂದಲವಾಯಿತು ಈ ಮಧ್ಯೆ ಶ್ರೀ ದೇವರಾಜೇ ಅರಸಿನವರು ಎದ್ದು ಸಭೆಯಿಂದ ಹೊರಟುಹೋಗುವುದಾಗಿಯೂ, ಅದರಿಂದ ಸಭೆಯಲ್ಲಿ ಕೋರಂ ಇಲ್ಲದೆ ಹೋಗುವುದೆಂದೂ ಹೇಳಿದರು. ಅಧ್ಯಕ್ಷರು ಅವರನ್ನು ಸಮಾಧಾನ ಪಡಿಸಿದರು, ಪುನಃ ನಿರ್ಣಯವನ್ನು ಓಟಿಗೆ ಹಾಕಲಾಯಿತು ೧೦ ಮಂದಿ ಪರವಾಗಿ ೫ ಮಂದಿ ವಿರೋಧವಾಗಿಯೂ, ೫ ಮಂದಿ ತಟಸ್ಥರಾಗಿಯೂ ಓಟು ಮಾಡಿದ್ದರಿಂದ, ನಿರ್ಣಯವು ಬಿದ್ದು ಹೋಯಿತು

ಇದಾನಂತರ ಸಭೆಯಲ್ಲಿ ಕೋರಂ ಇಲ್ಲದುದರ ಕಾರ್ಯಕ್ರಮಗಳು ಅಲ್ಲಿಗೇ ನಿಲ್ಲಿಸಲ್ಪಟ್ಟವು

ವಿದ್ಯಾರ್ಥಿ ನಿಲಯವನ್ನು ಮುಚ್ಚಲಾಯಿತೇ?

ಕುವೆಂಪುನಗರ ವಿದ್ಯಾರ್ಥಿ ನಿಲಯವನ್ನು ಸೇವಾವಾದದಿಂದ ಹಟಾತ್ತಾಗಿ ಮುಚ್ಚಿರುವ ಕಾರಣವಾ ಇಲ್ಲದೆ ಮುಚ್ಚಿಬಿಟ್ಟಿರುವುದೂ ಇದರಿಂದ ನೂರಾರು ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದೆಂದೂ ಹಲವು ವಿದ್ಯಾರ್ಥಿಗಳು ತಿಳಿದಿರುತ್ತಾರೆ

ಕರ್ನಾಟಕಾದ ಮಂಡಲಿ ಮೈಸೂರು ಶಾಖೆಯ ಸಂಪಲಿಯ ಅಧ್ಯಕ್ಷರಾಗಿದ್ದ ಶ್ರೀ ಕಾಂಡುಂಗ ಸುಬ್ಬ ರಾವ್ ಅವರು ನಾಳೆ ಸಂಜೆ ೬½ಗಂಟೆಗೆ ಶ್ರೀ ವೆಂಕಟೇಶ್ವರ ಶಾಸ್ತ್ರಿಗಳವರಿಂದ ರಾಮಾಯಣದ ಮೇಲೆ ಉಪನ್ಯಾಸವನ್ನು ಏರ್ಪಡಿಸಿರುವುದಾಗಿ ತಿಳಿದುಬಂದಿದೆ.

ಬಟ್ಟೆ ಹತ್ತೋಟಿ ವಜಾ

ಸ್ವಂ.ಸು.ವೋ.] ಬೆಂಗಳೂರು ೨೪

ಮೈಸೂರು ಸಂಸ್ಥಾನದಾದ್ಯಂತವೂ ನಿನ್ನೆಯಿಂದ ಮಿಲ್ ಬಟ್ಟೆಯ ಮೇಲಿನ ಲೈಸೆನ್ಸಿಂಗ್ ಮತ್ತು ರೇಷನಿಂಗ್ ಹತೋಟಿಗಳನ್ನು ರದ್ದು ಪಡಿಸಲಾಗಿದೆಯೆಂದು ಸರ್ಕಾರಿ ಪ್ರಕಟಣೆಯು ತಿಳಿಸಿರುತ್ತದೆ

ರೈಲ್ವೆ ನೌಕರರ ಬಗ್ಗೆ ಉದಾರವಾಗಿ ವರ್ತಿಸಲಾಗಿದೆ

ಗೃಹ ಸಚಿವರಾದ ಶ್ರೀ ಟಿ. ಪ್ರಕಾಶಪ್ಪನವರು ನಿನ್ನೆ ಸಂಜೆ ಪತ್ರಿಕಾ ಸಮ್ಮೇಳನವೊಂದನ್ನು ನಡೆಸಿ ಬೆಂಗಳೂರಿನಲ್ಲಿ ನಡೆದ ಗಲಭೆಗಳ ಬಗ್ಗೆಯೂ, ರೈಲ್ವೆ ನೌಕರರ ಸಂಬಳದ ಬಗ್ಗೆಯೂ ಪ್ರಸ್ತಾಪಿಸಿದರು ಇತ್ತೀಚೆಗೆ ಕೋಮುವಾರು ಸೌಹಾರ್ದ ಸ್ಥಾಪನೆಗಾಗಿ ಮುಖ್ಯಮಂತ್ರಿಯು ಉಪವಾಸ ಕೈಗೊಂಡು ಅದನ್ನು ಮುಕ್ತಾಯಗೊಳಿಸಿರುವಾಗ ನವ್ಯ ಸಂಸ್ಥಾನದಲ್ಲಿ ವಿಶೇಷ ಗಲಭೆ ಆರಂಭವಾಗಿರುವುದಕ್ಕಾಗಿ ವಿಷಾದ ಸೂಚಿಸಿದರು. ರಾಷ್ಟ್ರೀಯ ಸೇವಕ ದಳದವರು ಬಹಿರಂಗವಾಗಿ ಕವಾತು ಮೆರವಣಿಗೆ ಕಾರ್ಯಕ್ರಮಗಳನ್ನು ನಡೆಸುತ್ತಿರುವುದು ಉದ್ರೇಕಕ್ಕೆ ಎಡೆಗೊಟ್ಟಿರಬಹುದೆಂದು ಸಚಿವರು ಅಭಿಪ್ರಾಯಪಟ್ಟರು.

ರೈಲ್ವೆ ನೌಕರರ ಸಂಬಳದ ಬಗ್ಗೆ ಸಂಬಳ ಸಮಿತಿಯವರು ಶಿಫಾರ್ಸು ಮಾಡಿರುವುದು ವಿಶೇಷವಾಗಿ ಮುಂದೆ ಹೋಗಿ ಉದಾರತೆಯಿಂದ ವರ್ತಿಸಿರುವರೆಂದೂ, ರೈಲ್ವೆ ಹಣಕಾಸಿನ ಪರಿಸ್ಥಿತಿಯನ್ನು ಅಂತೆ ಅಂಶಗಳೊಡನೆ ವಿವರಿಸಿ ಸಂಸ್ಥಾನದ ರೈಲ್ವೆ ನೌಕರರಿಗೆ ಹೊರಗಿನವರಿಗಿಂತ ಯಾವ ಭಾಗದಲ್ಲೂ ಅನ್ಯಾಯ ಮಾಡಿಲ್ಲವೆಂದೂ, ಮೈಸೂರು ರೈಲ್ವೆಗಳಲ್ಲಿ ಆದಾಯಕ್ಕೆಂತ ವೆಚ್ಚವೇ ಹೆಚ್ಚಾಗಿರುವುದೆಂದೂ ತಿಳಿಸಿದರು

ದಕ್ಕೆ ನರೇಂದ್ರರಿಗೆ ನಿಜಾಮರ ಎಚ್ಚರಿಕೆ

ದಕ್ಕೆ ಸಂಸ್ಥಾನಗಳು ಬೊಂಬಾಯಿ ಸ್ಥಾಂತ್ಯಕ್ಕೆ ಸೇರುವುದರಿಂದ ಕೈದರಂಬಾಬಿ ಸೋಡನೆ ಸೌಹಾರ್ದತೆಯನ್ನು ತೊರೆದಂತಾಗುವುದರಿಂದ ಆ ರಾಜರುಗಳ ಬಗ್ಗೆ ಇದ್ದ ಸೋದರಭಾವವನ್ನು ತಾವು ತೃಜಿಸಬೇಕಾಗುವುದೆಂದೂ ನಿಜಾಮ ಸ್ವಾತಂತ್ರ್ಯರು ಸರ್ದಾರ್ ಪಟೇಲರಿಗೆ ಎಚ್ಚರಿಸಿರುವುದಾಗಿ ತಿಳಿದುಬಂದಿದೆ.

ಪ್ರಭುಗಳವರ ಪ್ರವಾಸ ಕಾರ್ಯಕ್ರಮ

ಸ್ವಂ ಸು.ವೋ.] ದೆಂಗಳೂರು ೨೪

ಪ್ರಭುಗಳವರು ಈ ತಿಂಗಳು ೨೯ ನೇ ತಾ॥ ರಾತ್ರಿ ಮೈಸೂರಿನಿಂದ ವಿಶೇಷ ರೈಲಿನಲ್ಲಿ ದೆಂಗಳೂರಿಗೆ ಪ್ರಯಾಣ ಮಾಡಿ, ತುಮಕೂರು, ಹಾಸನ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಒಟ್ಟು ನಾಲ್ಕು ದಿವಸಗಳ ಪ್ರವಾಸ ಮಾಡಲಿರುವರು.

೩೦ ನೇ ತಾ॥ ದೆಂಗಳೂರಿನಲ್ಲಿ ಕ್ಷಯ ರೋಗದ ಆಸ್ಪತ್ರೆ ಮತ್ತು ಆಯುರ್ವೇದ ಆಸ್ಪತ್ರೆಗಳ ಆರಂಭೋತ್ಸವವನ್ನೂ, ತುಮಕೂರಿನಲ್ಲಿ ಮುಸಫರಖಾನೆ, ಆಸ್ಪತ್ರೆ, ಪ್ರೌಢಶಾಲೆ ಅನಾಥಾಲಯ ಮತ್ತು ಕೈಗಾರಿಕಾ ಶಿಕ್ಷಣ ಶಾಲೆಗಳ ಆರಂಭೋತ್ಸವವನ್ನೂ ನೆರವೇರಿಸಲಿದ್ದಾರೆ. ೩೧ ನೇ ತಾ॥ ಹಾಸನ, ಸಕಲೇಶಪುರ, ಹಾಗೂ ಪೈಗೆ ಭೇಟಿ ಕೊಡುವರು ಫೆ॥ ೧ ನೇ ತಾ॥ ಜೋಗ ವಿದ್ಯುಚ್ಛಕ್ತಿ ಸರಬರಾಜಿನ "ಸ್ವಿಚ್‌ಆನ್" ಸಮಾರಂಭವನ್ನು ನೆರವೇರಿಸಿ, ೨ ನೇ ತಾ॥ ರಾಜಧಾನಿಗೆ ಆಗಮಿಸುವರು

ಕಾಶ್ಮೀರದಲ್ಲಿ ಪಾಕೀಸ್ತಾನ್ ಸೈನ್ಯ

ಕಾಶ್ಮೀರಕ್ಕೆ ಸೇರಿದ ನೌಶೇರಕ್ಕೆ ಆಗ್ನೇಯ ಭಾಗದಲ್ಲಿ ಅಧುನಿಕ ಶಸ್ತ್ರಾಸ್ತ್ರಗಳಿಂದ ಕೂಡಿದ ಪಾಕೀಸ್ತಾನದ ಸೈನ್ಯ ಪಡೆಯೊಂದು ಠಾಣಿಕೊಂಡಿದೆಯೆಂದೂ, ಅದರ ದಳಪತಿಯು ಜೂರೋಪಿನವನೆಂದೂ ವದಂತಿಯಾಗಿದೆ.

೩೦೦ ಸಂಸ್ಥಾನಗಳ ಹೊಸ ಪ್ರಾಂತ್ಯ

ಕಳೆದ ೧೫೦ ವರ್ಷಗಳಿಂದ ಆಗದೇ ಇದ್ದ ಅದ್ಭುತ ಕಾರ್ಯವನ್ನು ಸರ್ದಾರ್ ಪಟೇಲರು ಸಾಧಿಸಿ ಕಾಥೆಯ ನಾಡಿದ ೩೦೦ ಸಣ್ಣ ಪುಟ್ಟ ಸಂಸ್ಥಾನಗಳು ಒಂದುಗೂಡಿ ಕಾಥೇವಾಡ ಸಂಯುಕ್ತ ಸಂಸ್ಥಾನವೆಂಬ ಹೊಸ ಪ್ರಾಂತ್ಯವನ್ನು ರಚಿಸಲು ಒಪ್ಪಿರುವುದಾಗಿ ವದಂತಿಯಾಗಿದೆ. ಅಲ್ಲಿನ ರಾಜರುಗಳು ಸಾಂಕೇತಿಕ ಪ್ರಭುಗಳಾಗಿರಲು ಒಪ್ಪಿ ಹೊಸ ಪ್ರಾಂತ್ಯಕ್ಕೆ ಜವಾಬ್ದಾರಿ ಸರ್ಕಾರ ಸ್ಥಾಪನೆಯ ಗುರಿಯಿಂದ ರಾಜ್ಯಾಂಗವನ್ನು ರಚಿಸಲು ಸಮ್ಮತಿಸಿರುವರೆಂದು ತಿಳಿದುಬಂದಿದೆ.

ನವನಗರದ ರಾಜವಾದ ಜಾಂ ಸಾಹೇಬ ಜಾಮ್ ನೇತೃತ್ವದಲ್ಲಿ ೪ ಜನ ರಾಜರು, [illegible]

ಮುಂದು.

ಗವರ್ನರ್ ಜನರಲ್‌ರ ಆಗಮನ

ಮೈಸೂರು ೨೪

ಭಾರತದ ಗವರ್ನರ್ ಜನರಲ್ ಲಾರ್ಡ್ ಮೌಂಟ್ ಬೇಟ್‌ರವರು ಫೆಬ್ರವರಿ ೧೯ ನೇ ತಾ॥ ಮಧ್ಯಾಹ್ನ ೩-೧೫ ಗಂಟೆಗೆ ರಾಜಧಾನಿಗೆ ಆಗಮಿಸಿ, ಎರಡು ದಿನಗಳದ್ದು, ೬ ನೇ ತಾ॥ ಕೊಯಮತ್ತೂರಿಗೆ ತೆರಳುವರೆಂದು ಗೊತ್ತಾಗಿದೆ.

ಶಾಲಾ ವಾರ್ಷಿಕೋತ್ಸವ

ಮೈಸೂರು ಮಹಾಜನ ಹೈಸ್ಕೂಲಿನ ವಾರ್ಷಿಕೋತ್ಸವವು ನಾಳೆ ಸಂಜೆ ೬ ಗಂಟೆಗೆ ಅಧಿಕೃತ ಸಚಿವರಾದ ಶ್ರೀ ಹೆಚ್ ಸಿ. ದಾಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವುದು ಇದೇ ೩೧ ನೇ ತಾ॥ ಸಂಜೆ ೬ ಗಂಟೆಗೆ ಅದರ ಪೂರ್ವಸಕರ ದಿನೋತ್ಸವವು ಕಾರ್ಯಕಾರಿ ಅಧ್ಯಕ್ಷರಾದ ಶ್ರೀ ಎ ಎಸ್. ಹಿರಣ್ಣಯ್ಯನವರ ಅಧ್ಯಕ್ಷತೆಯಲ್ಲಿ ಜರುಗುವುದು

ಆಹಾರದ ಹತೋಟಿ ಬಗ್ಗೆ ಜನಾಭಿಪ್ರಾಯ

ಮೈಸೂರು ದೇಶದಲ್ಲಿ ಆಹಾರದ ಹತೋಟಿಯನ್ನು ರದ್ದು ಮಾಡಬೇಕೇ ಅಥವಾ ಮುಂದುವರಿಸಬೇಕೇ-ಎಂಬ ಬಗ್ಗೆ ಜನಾಭಿಪ್ರಾಯವನ್ನು ತಿಳಿದುಕೊಳ್ಳಲು ಮಹಾಸಮಿತಿ ಸಂಗ್ರಹ ಎಂಬ ಸಂಸ್ಥೆಯವರು ಏರ್ಪಾಡುಗಳನ್ನು ಮಾಡಿರುತ್ತಾರೆ. ಇದರ ವಿವರಗಳನ್ನು ನಾಳೆ ಕೊಡಲಾಗುವುದು.

ಸಾರ್ವಜನಿಕ ವಿದ್ಯಾರ್ಥಿ ನಿಲಯ

ರಾಜಧಾನಿಯ ಜಾಮುಂಡಿಪುರದಲ್ಲಿರುವ ಸಾರ್ವಜನಿಕ ವಿದ್ಯಾರ್ಥಿ ನಿಲಯದ ಆರಂಭೋತ್ಸವವನ್ನು ಹಜಾರಾನಿಧಿ ಸಚಿವರಾದ ಶ್ರೀ ಹೆಚ್ ಸಿ. ದಾಸಪ್ಪನವರು ನಾಳೆ ಬೆಳಿಗ್ಗೆ ೮ ಗಂಟೆಗೆ ನೆರವೇರಿಸುವರು.

ಚೀಣಾಕ್ಕೆ ಅಮೆರಿಕದ ಸಾಲ

ಚೀಣಾಕ್ಕೆ ೩೩೫ ಕೋಟಿ ರೂಗಳ ಸಾಲವನ್ನು ಅಮೆರಿಕವು ಕೊಡಲು ನಿರ್ಧರಿಸಿದೆಯೆಂದು ರಷ್ಯದ ವಾರ್ತಾ ಏಜೆನ್ಸಿಯು ತಿಳಿಸಿರುತ್ತದೆ.

ಮಾಲವೀಯ ಹಿಂದೂ ಕಾಲೇಜು

ಪಾಟ್ನಾದ ವೈಕುಂಠಪುರ ಎಂಬಲ್ಲಿ ದಿವಂಗತ ಪಂಡಿತ ಮದನಮೋಹನ ಮಾಲವೀಯರ ಸ್ಮಾರಕವಾಗಿ ಒಂದು ದೊಡ್ಡ ಕಾಲೇಜನ್ನು ಸ್ಥಾಪಿಸಿ ಅದಕ್ಕೆ ಮಾಲವೀಯ ಹಿಂದೂ ಕಾಲೇಜ್ ಎಂಬ ಹೆಸರನ್ನಿಡಲಾಗುವುದೆಂದು ಹೇಳಲಾಗಿದೆ. ಈ ಬಗ್ಗೆ ನಿಧಿಯನ್ನೆತ್ತಲು ಅಲ್ಲಿ ಒಂದು ಸಮಿತಿಯನ್ನೇರ್ಪಡಿಸಲಾಗಿದೆ

ಸ್ವಾತಂತ್ರ್ಯ ಸ್ಮಾರಕ ದಿನಾಚರಣೆ

ಮೈಸೂರು ೨೪

ನಗರ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಇದೇ ೩೧ ನೇ ತಾ॥ ಸೋಮವಾರ ಬೆಳಿಗ್ಗೆ ೮ ಗಂಟೆಗೆ ಮೈದಾನದಲ್ಲಿ ಭಾರತ ಸ್ವಾತಂತ್ರ್ಯಸ್ಮಾರಕ ದಿನಾಚರಣೆಯು ನಡೆಯುವುದು. ದಿಳಿಗ್ಗೆ ೯ ಗಂಟೆಗೆ ಧ್ವಜಾರೋಹಣವಾಗಿ, ಸಂಜೆ ೬ ಗಂಟೆಗೆ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿದೆ.

ವಿದ್ಯಾರ್ಥಿ ಕಾಂಗ್ರೆಸ್ಸಿನವರು [illegible] ಕಾಲೇಜಿನ [illegible] ಗಂಟೆಗೆ ಧ್ವಜಾರೋಹಣವನ್ನು ನೆರವೇರಿಸುವರು

ದೇವಸ್ಥಾನದ ಮುಂದೆ ಹರಿಜನರ ಉಪವಾಸ

ಅಹಮದಾಬಾದಿನ ಶ್ರೀ ನಾರಾಯಣ ಸ್ವಾಮಿ ದೇವಸ್ಥಾನವನ್ನು ಹರಿಜನರ ಪ್ರವೇಶಕ್ಕೆ ತೆರೆಯಲಿಲ್ಲವೆಂದು ಅಲ್ಲಿನ ಅನೇಕ ಗಿರಣಿ ಕೆಲಸಗಾರರು ಮುಷ್ಕರ ಹೂಡಿದ್ದಾರೆ ಮತ್ತು ೪೦ ಜನ ಹರಿಜನರು ದೇವಸ್ಥಾನದ ಮುಂದೆ ಉಪವಾಸ ಹೂಡಿದ್ದಾರೆ

ರೋಗಿಗಳಿಗೆ ಪ್ರತ್ಯೇಕ ಕಾರಾಗೃಹ

ಬಹುದಿನ ಪೈಲಿನಲ್ಲಿರುವ ಕುಷ್ಠರೋಗ ಮುಂತಾದ ಅಂಟು ಜಾಡ್ಯಗಳನ್ನು ಹೊಂದಿರುವ ಪೈದಿಗಳಿಗಾಗಿ ಪ್ರತ್ಯೇಕ ಬಂದೀಖಾನೆಗಳನ್ನು ನಿರ್ಮಾಣಮಾಡಲಿರುವರೆಂದೂ ಇದರಿಂದ ಇತರ ಪೈದಿಗಳಿಗೆ ರೋಗ ಭಯ ತಪ್ಪುವುದೆಂದೂ ಹೇಳಲಾಗಿದೆ

ಪ್ರಕಟಣೆ

ಶ್ರೀ ಸುಬ್ಬಯ್ಯ ಅಸೋಸಿಯೇಟ್ಸ್ ಮೈಸೂರು ಬುಕ್ ವರ್ಲ್ಡ್ ಎಂಬ ಆಂಗ್ಲಮಯ ಹೆಸರನ್ನು "ಮೂರ್ತಿ ಪ್ರಿಂಟಿಂಗ್ ಕೋ" ಎಂದು ಬದಲಾಯಿಸಿದೆ.

ನೇತಾಜಿ ಜಯಂತಿ

ಕೃಷ್ಣರಾಜನಗರ ೩೩ ವಿದ್ಯಾರ್ಥಿ ಕಾಂಗ್ರೆಸ್ಸಿನ ಅಶ್ರಯದಲ್ಲಿ ನೆನ್ನೆ ನೇತಾಜಿ ಜಯಂತಿಯನ್ನು ವೈಭವದಿಂದ ಆಚರಿಸಲಾಯಿತು ಶ್ರೀಗಳಾದ ವೈ ಶ್ರೀನಿವಾಸರಾವ್, ಬಾಲಗಣಪತಿ ಭಟ್ಟ, ರಾಮಾಚಾರ್ ಮತ್ತು ವೆಂಕಟೇಶ ಭಟ್ಟ್ಯನವರು ಬಾಷಣ ದೋಸರ ಗುಣಗಾನ ಮಾಡಿದರು

* ಪ್ಲೇಗ್ ನಿವಾರಕ ವಿದುವಾರಗಳ ಕಾಲ ಸಂತೆ ಸಿನಿಮಾ ಮತ್ತು ನಾಟಕಗಳು ನಡೆಯದಂತೆ ಪ್ರತಿಬಂಧಕಾಜ್ಞೆಯನ್ನು ಹಾಕಲಾಗಿದೆ

ಭಾನುವಾರದ ಬದಲು ಶುಕ್ರವಾರ ರಜಾ

ಪೂರ್ವ ಬಂಗಾಳದ ಎಲ್ಲಾ ವಿದ್ಯಾ ಇಲಾಖೆಗಳಲ್ಲೂ ಈಗ ಒಂದು ವಾರದಲ್ಲಿ ಕೊಡುತ್ತಿರುವ ಶನಿವಾರ ಒಪ್ಪತ್ತು ಮತ್ತು ಭಾನುವಾರ ಪೂರ್ತಿ ರಜೆಗಳನ್ನು ಇನ್ನು ಮುಂದೆ ಗುರುವಾರ ಮಧ್ಯಾಹ್ನ ಮತ್ತು ಶುಕ್ರವಾರ ಪೂರ್ತಿ ಕೊಡಲಾಗುವುದೆಂದು ಅಲ್ಲಿನ ಸರ್ಕಾರಿ ಆಜ್ಞೆಯೊಂದು ತಿಳಿಸಿದೆ

ಪ್ರಾಂತೀಯ ಗವರ್ನರುಗಳ ಸಮ್ಮೇಳನ

ಬರುವ ಫೆಬ್ರವರಿ ೨ ಮತ್ತು ೩ ನೇ ತಾರೀಖುಗಳಲ್ಲಿ ದೆಹಲಿಯಲ್ಲಿ ಭಾರತ ಪ್ರಾಂತೀಯ ಗವರ್ನರುಗಳ ಸಮ್ಮೇಳನವು ನಡೆಯಲಿದೆ ಗವರ್ನರ್ ಜನರಲ್ಲಾದ ಲಾರ್ಡ್ ಲೂಯಿ ಮೌಂಟ್ ಬ್ಯಾಟನ್ನರು ಅಧ್ಯಕ್ಷತೆ ವಹಿಸುವರು. ಪ್ರಧಾನ ಕಂಡಕ ನೆಹರೂರವರೇ ಮೊದಲಾದ ಸಚಿವರುಗಳು ಭಾಷಣ ಮಾಡಲಿರುವರು.

ಅಪೇರಾ ಟಾಕೀಸ್

22-1-48 ರಿಂದ ಅಮೋಘ 2 ನೇ ವಾರ

ಜಂಗಲ್ ಬುಕ್

(ಟೆಕ್ನಿ ಕಲರ್)

ಪಾತ್ರ — ಮೈಸೂರು ಸಾಬು

Morning shows from 23-1-48 for 4 days

My Darling Clementine

With:- Henry Fonda & Linda Darnel

ವುಡ್‌ಲ್ಯಾಂಡ್

23-1-48 ರಿಂದ

ಅಮೋಘ ಎರಡನೇ ವಾರ

ದಿ ರಾತ್ರಿ

(ಅಮೋಘ ಹಿಂದೀ ಚಿತ್ರ)

ಪಾತ್ರ — ಸ್ನೇಹ ಪ್ರಧಾ

(ಕರ್ನಾಟಕ ಫಿಲ್ಮ್ಸ್ ರಿಲೀಸ್

Morning Shows from 23-1-48 for 4 da

Scouts to the Rescue

ವಿಶ್ವಕರ್ನಾಟಕ ವಿಜೇ

ಮಹಾಜನಶ್ರೀ ವಿನಂತಿ

ಇದೇ ಮಾಹೆ ನೇ ತಾರೀಖಿನ

"ವಿಶ್ವಕರ್ನಾಟಕ"

ದಿನ ಪತ್ರಿಕೆಯ ರಾಜಧಾನಿ ವಿಜ

ಯನ್ನು ನನಗೆ ಕೊಡಲಾಗಿದೆ

ಮಹಾಜನರು ಪ್ರೋತ್ಸಾಹಿಸಬೇಕ

ವಿನಂತಿ

ಬಿ ಆರ್. ಸ್ವಾಮಿ, ವಿಜೆಂಟ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್,

ಮೈಸೂರು

Edited printed and published by A. R. Nagarajan at the Sadhvi Press D. Subbaiah Road Mysore.

23-1-48 ರಿಂದ ಅಮೋಘ ೨೨ ನೇ ವಾರ

ಪ್ರತಿ ದಿನ ೨ ಆಟಗಳು

★ ಮಹಾತ್ಮಾ ಕಬೀರ್ ★

(ಕನ್ನಡ)

ರಾಜಕಮಲ್ ಟಾಕೀಸಿನಲ್ಲಿ

From 23-1-48 for 4 days daily at 10.30 a. m.

Hit Parade of 1943

Featuring — JOHN CARROLL, SUSAN HAYWARD

GAIL PICVRTK, EVE ARDEN

ಬಳ್ಳಿಯ ಸೈಟು ಹರಾಜು

ಮಾರ್ಕೆಟ್ಟು, ಆಸ್ಪತ್ರೆ, ರೈಲ್ವೆ ಸ್ಟೇಷನ್ ಮತ್ತು ಅಸ್ ಸ್ಟ್ಯಾಂಡುಗಳಿಗೆ ಕೇವಲ ಸಮೀಪದಲ್ಲೇ ಇರುವ ಕಾರ್ಪೋರೇಷನ್ ಸೈಟು. ಸುತ್ತಲೂ ಕಾಂಪೌಂಡು ಇಗುತ್ತಿ.

ಇಳತಿ- ಚಾಮರಾಜ ಆರಿ, ರೋಡು- ವೆಸ್ಟ್ ರೋಡು, ಪೊಹಲ್ಲಾ- ಮಂಡಿ, ಮೈಸೂರು

೨೨-೨ ಭಾನುವಾರ ಬೆಳಿಗ್ಗೆ ಬಹಿರಂಗ ಹರಾಜಾಗುತ್ತದೆ.

— ವಿವರಗಳಿಗೆ —

ಎಂ ಎಸ್. ನಂಜಪ್ಪ, ಸಿ ಎಂ ಆಂಡ್ ಸನ್ಸ್, ಸಯ್ಯಾಜಿರಾವ್ ರೋಡ್, ಮೈಸೂರು, ಇವರಲ್ಲಿ ವಿಚಾರಿಸಿ.

ನಾಗರಿಕ ನಡವಳಿಕೆಗೆ ಅಚ್ಚುಮೆಚ್ಚಾದ ಜವಳಿ

ಮೈಸೂರು ಸಿಲ್ಕ್

ಬಹು ಕಾಲ ಬಾಳಿಕೆ ಬರುತ್ತದೆ

ಗ್ಯಾರ್ಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ, ಮೈಸೂರು.

ಪ್ರಭುದೇವಾ ಟಾಕೀಸಿನಲ್ಲಿ

25-1-48 ನೇ ಭಾನುವಾರದಿಂದ

ಅಮೋಘ ಪ್ರಾರಂಭ : : ಪ್ರತಿ ದಿನ ೩ ಆಟಗಳು

ಪಂಪಾ ಪಿಕ್ಚರ್ಸ್ ರವರ

★ ಚಂದ್ರಹಾಸ ★

—: ಮುಖ್ಯ ಪಾತ್ರಧಾರರು :—

ಮಿಸ್ ತಲೋತ್ತಮಾ, ವಿ.ವಿ ಪಾರ್ಥಸಾರಥಿ, ಕರ್ನಾಟಕ, ಹೆಚ್ ಸಿದ್ದರಾಮಪ್ಪ, ಜಿ ಕೆ ಬಾಲಕೃಷ್ಣರಾವ್ ಮುಂತಾದವರು

ಶ್ರೀ ೨೫-೧ ೪೮ ನೇ ಭಾನುವಾರ ಮಧ್ಯಾಹ್ನ ಒಂದು ಘಂಟೆಯಿಂದ ಬುಕಿಂಗ್ ಆಫೀಸನ್ನು ತೆರೆಯಲಾಗುವುದು.

WEEKLY EDITION ಪಾಕಿಸ್ತಾನ 6 ಕಾಸು

ಸಂಪುಟ ೧೨] ಭಾನುವಾರ ೨೫-೧-೪೮ [ಸಂಚಿಕೆ ೨೬

ನಿರಾಶ್ರಿತರ ವಸತಿಗಾಗಿ ದೆಹಲಿ ಅರಮನೆಗಳು

ಸ್ವಾತಂತ್ರ್ಯ ಸ್ಮಾರಕ ದಿನಾಚರಣೆ

ಮೈಸೂರು ೨೫

ನಗರ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಇದೇ ೩೦ ನೇ ತಾರೀಖು ಸೋಮವಾರ ಟೌನ್‌ಹಾಲ್ ಮೈದಾನದಲ್ಲಿ ಧಾರವಾಡ ಸ್ವಾತಂತ್ರ್ಯ ಸ್ಮಾರಕ ದಿನಾಚರಣೆಯನ್ನು ನಡೆಯುವುದು ಬೆಳಿಗ್ಗೆ ೯ ಗಂಟೆಗೆ ಧ್ವಜಾರೋಹಣವನ್ನೂ, ಸಂಜೆ ೭ ಗಂಟೆಗೆ ಬಹಿರಂಗ ಸಭೆಯನ್ನೂ ಏರ್ಪಡಿಸಲಾಗಿದೆ

ವಿಶ್ವವಿದ್ಯಾನಿಲಯದ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಸ್ವಾತಂತ್ರ್ಯ ಸ್ಮಾರಕ ದಿನಾಚರಣೆಯನ್ನು ಆಚರಿಸಲಾಗುವುದು.ಶ್ರೀ ಪಾಲಹಳ್ಳಿ ಸೀತಾರಾಮಯ್ಯ ನವರು ಅಧ್ಯಕ್ಷತೆ ವಹಿಸುವರು

ಹೊಟೇಲ್ ಕೆಲಸಗಾರರ ಸಂಘ

ಈ ದಿನ ರಾತ್ರಿ ೮-೩೦ ಗಂಟೆಗೆ ಸಯ್ಯಾಜಿರಾವ್ ರಸ್ತೆಯಲ್ಲಿರುವ ಕಾಂಗ್ರೆಸ್ ಕಛೇರಿಯಲ್ಲಿ ಸಂಘದ ಸಭೆಯು ನಡೆಯುತ್ತದೆ ಕೆಲಸಗಾರರ ಕುಂದುಕೊರತೆಗಳನ್ನು ಪರಿಶೀಲಿಸಿ ಮುಂದಿನ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ

ಕನ್ನಕುಬ್ಜ ಬ್ರಾಹ್ಮಣ ಸಭೆ

ಮೈಸೂರು ಜಿಲ್ಲೆಯ ಕನ್ನಕುಬ್ಜ ಬ್ರಾಹ್ಮಣ ಸಮಾಜದ ಎರಡನೇ ವಾರ್ಷಿಕ ಸಭೆಯು ಕಳೆದ ಭಾನುವಾರ ಶ್ರೀ ಮುಕುಂದ ರಾಂ ತಿವಾರಿಯವರಅಧ್ಯಕ್ಷತೆಯಲ್ಲಿ ನಡೆದು ಈಗಿರುವ ಕಾರ್ಯನಿರ್ವಾಹಕ ಸಮಿತಿಗೆ ೭ವರ್ಷ ದಿಷಾನ್ನು ಚುನಾಯಿಸಲಾಯಿತು. ಸಮಾಜದ ಮೂಲಧನಕ್ಕಾಗಿ ಸಹಾಯ ಮಾಡಿದುದಿನ್ನು ಸ್ವೀಕರಿಸಲಾಯಿತು

ಈ ದೃಷ್ಟಿಯಿಂದ ಆಹಾರದ ಮೇಲಿನ ಹೋಟೆಲ್ ಹೋಗದೇಕೋ ಬೇಡವೋ ಎಂಬ ವಿಷಯದಲ್ಲಿ ಮೈಸೂರು ನಗರದ ಪ್ರಜೆಗಳ ಅಭಿಪ್ರಾಯವನ್ನು ಕೇಖರಿಸಲು ಹೊರಟಿದ್ದೇವೆ ಅಭಿಪ್ರಾಯ ಕೇಖರಣೆ ಆದ ಮೇಲೆ ಅದನ್ನು ಜನತೆಯ ಮತ್ತು ಸರ್ಕಾರದ ಮುಂದಿಡಲಾಗುವುದು.

ಅಭಿಪ್ರಾಯ ಕೊಡಲು ಜನ ಸಾಮಾನ್ಯರಿಗೆ ಅನುಕೂಲವಾಗಲೆಂಬ ದೃಷ್ಟಿಯಿಂದ ಈ ಹೋಟೆಲ್ ಇದ್ದರೆ ಅಥವಾ ಹೋದರೆ ಸಂಭವಿಸುವ ಪರಿಣಾಮಗಳ ಕೆಲವಂಶಗಳನ್ನು ಸೂಚಿಸಿ ಅಚ್ಚಾದ ನಮೂನೆಗಳನ್ನು ಮೊಹಲ್ಲಾಗಳಲ್ಲಿ ಉಚಿತವಾಗಿ ಇಡಲಾಗುವುದು.

ಸಂಚಾಲಕ,
ಮಹಾಮಹ ಸಂಗ್ರಹ ಸಮಿತಿ,
ಮೈಸೂರು

ನಿರಾಶ್ರಿತರ ವಾಸಕ್ಕೆ ದೆಹಲಿ ಅರಮನೆಗಳು

ಪಶ್ಚಿಮ ಪಂಜಾಬು ಮತ್ತು ಗಡಿನಾಡು ಪ್ರಾಂತ್ಯಗಳಿಂದ ದೆಹಲಿಗೆ ಬಂದಿರುವ ನಿರಾಶ್ರಿತರಿಗೆ ವಸತಿ ಸೌಕರ್ಯಗಳನ್ನು ಕಲ್ಪಿಸುವ ಬಗ್ಗೆ ಅಲ್ಲಿ ಖಾಲಿ ಇರುವ ಹಲವು ನರೇಂದ್ರರ ಅರಮನೆಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲು ದೆಹಲಿ ಜಿಲ್ಲಾಧಿಕಾರಿಗಳು ನಿರ್ಧರಿಸಿರುವುದಾಗಿ ಗೊತ್ತಾಗಿದೆ ರಾಜರು ವಾಸವಾಗಿರುವ ಇತರ ಅರಮನೆಗಳನ್ನೂ ಸಹ ಖಾಲಿ ಇರುವ ಜಾಗಗಳನ್ನು ನಿರಾಶ್ರಿತರಿಗಾಗಿ ಬಿಟ್ಟು ಕೊಡುವಂತೆ ಪ್ರಾರ್ಥಿಸಲಾಗುವುದೆಂದೂ ಹೇಳಲಾಗಿದೆ

ಪಶ್ಚಿಮ ಯೂರೋಪ್ ದೇಶಗಳ ಒಕ್ಕೂಟ

ಬ್ರಿಟನ್, ಫ್ರಾನ್ಸ್, ಹಾಲೆಂಡ್, ಬೆಲ್ಜಿಯಂ ಮತ್ತು ಲಕ್ಸೆಂಬರ್ಗ್ ರಾಷ್ಟ್ರಗಳನ್ನೆಲ್ಲಾ ಒಟ್ಟುಗೂಡಿಸಿ ಪಶ್ಚಿಮ ಯೂರೋಪಿನ ಯೂನಿಯನ್ ಒಂದನ್ನು ರಚಿಸಲು ಮಾತುಕತೆಗಳು ಪ್ರಾರಂಭವಾಗಿದೆ ಎಂದು ಬ್ರಿಟನ್ನಿನ ವಿದೇಶಾಂಗ ಸಚಿವರಾದ ಮಿ: ಬೆವಿನ್ನರು ಪಾರ್ಲಿಮೆಂಟ್ ಸಭೆಯಲ್ಲಿ ತಿಳಿಸಿರುತ್ತಾರೆ. ಈ ಸಂಯುಕ್ತ ರಾಷ್ಟ್ರಗಳ ಪರಸ್ಪರ ಸಹಕಾರದ ಪ್ರಭಾವವು ಯೂರೋಪ್ ಸ್ವಾತಂತ್ರ್ಯ, ಆರ್ಥಿಕ ಮತ್ತು ಇತರ ಪ್ರಾತ್ಯೇ ದೇಶದಲ್ಲೆಲ್ಲಾ ಹರಡುವುದೆಂದು ಅವರು ಹೇಳಿರುತ್ತಾರೆ.

ಪಶ್ಚಿಮ ಯೂರೋಪಿನಲ್ಲಿರುವ ಈ ಸಮ್ಮೇಳನ ನಿಸ್ಸೀರ ಮೇಲೆ ಹೋಟೆ ಇತ್ತುಕೊಳ್ಳಲು ರಷ್ಯವು ನಡೆಸುತ್ತಿರುವ ಕಾರ್ಯಕ್ರಮವನ್ನು ಮಿಃ ಬೆವಿನ್ನರು ಖಂಡಿಸಿ ಅಂತರ ರಾಷ್ಟ್ರೀಯ ವ್ಯವಹಾರಗಳಲ್ಲಿ ಅಗ್ನಿ ಯೊಡನೆ ಕ್ರೀಡಿಸುವುದು ಅಪಾಯವೆಂದು ತಿಳಿಸಿರುತ್ತಾರೆ

ಸುಧಾಪರ ದಿನಾಚರಣೆ

ರಾಜಧಾನಿಯ ದೇಶಿಯ ವಿದ್ಯಾಶಾಲೆಯನ್ನು ಮೊನ್ನೆ ದಿನ ಶ್ರೀ ಚಂದ್ರಶೇಖರರವರ ಅಧ್ಯಕ್ಷತೆಯಲ್ಲಿ ಶ್ರೀ ಸುಧಾಪರ ಹಂದ್ರಬೋಸರ ದಿನಾಚರಣೆಯನ್ನು ನೆರವೇರಿಸಿದರು ಬೆಂಗಳೂರಿನ ಶ್ರೀ ರಮಾನಂದ ರವರು ಧಾರಣ ಮಾಡಿದರು ಈ ಸಂದರ್ಭದಲ್ಲಿ ಗಾಂಧೀಜಿಯವರು ಉಪವಾಸವನ್ನು ಮುಕ್ತಾಯಗೊಳಿಸಿದುದಕ್ಕೆ ಸಂತೋಷವನ್ನು ವ್ಯಕ್ತಪಡಿಸಿ ಕೋಮುವಾರು ಸೌಹಾರ್ದತೆಗಾಗಿ ಸತತ ದುಡಿಯಲು ಪತಿಜ್ಞೆ ಮಾಡಿದ ನಿರ್ಣಯವನ್ನು ಮಾಡಲಾಯಿತು.

ಆಹಾರದ ಹೋಟೆ ವಿಷಯದಲ್ಲಿ ಜನಾಭಿಪ್ರಾಯ

ಮಹಾಮಹ ಸಂಗ್ರಹ ಸಮಿತಿಯ ಕಾರ್ಯಕ್ರಮ

ಮೈಸೂರು ದೇಶದಲ್ಲಿ ಆಹಾರದ ಅಧಿಕ ಇದೆ. ಹೊರಗಡೆಯಿಂದ ಧಾನ್ಯದ ಸರಬರಾಜು ಆಗದಿದ್ದರೆ ದೇಶದಲ್ಲಿ ಆಗುವ ಆಹಾರೋತ್ಪತ್ತಿ ಇಲ್ಲಿನ ಜನರಿಗೆ ಸಾಕಾಗದೆ ಬರುತ್ತದೆ ಈ ಅಭಾವದ ಮೊದಲಿನಂತೆ ಆಗುತ್ತಿಲ್ಲ. ಜನರಿಗೆ ಸಾಕಾದಷ್ಟು ಧಾನ್ಯವಿಲ್ಲ ಇದರಿಂದ ಇದ್ದ ಧಾನ್ಯವನ್ನು ಜನರಲ್ಲಿ ಹಂಚಲು ಪಡಿತರ ಪದ್ಧತಿ ಜಾರಿಯಲ್ಲಿದೆ. ಹೋಟೆ ಅಜ್ಜಿ ಪಾಂಶುಲಿದೆ.

ಪಡಿತರ ಪದ್ಧತಿ ಮತ್ತು ಹೋಟೆಯು ಸರಿಯಾಗಿ ಸರ್ಕಾರದ ಧಾನ್ಯ ಸಂಗ್ರಹಣ ಪದ್ಧತಿ ಸುಗಮವಾಗಿ ನಡೆಯಲು ಹಲವು ಅಡಚಣೆಗಳಿವೆ. ಪ್ರಭಾವಶಾಲಿಯಾದವರು ಮತ್ತು ದುಡ್ಡಿದ್ದವರು ಹೇಗೋ ಅಕ್ಕಿ ತೆಗೆದುಕೊಳ್ಳುತ್ತಾರೆ. ಇದರಿಂದ ಕಳ್ಳ ವ್ಯಾಪಾರ ಹೆಚ್ಚುವುದು. ಸಮಾಜದಲ್ಲಿ ಅನಾಚಾರ ಹೆಚ್ಚುವೆ ಸಂಬಂಧಪಟ್ಟ ಧಿಕಾರಿಗಳನೇಕರು ಲಂಚಕೋರರಿದ್ದಾರೆ ಹಾಗೆ ಹೊಟ್ಟೆ ತುಂಬುವಷ್ಟು ಆಹಾರ ದೊರಯುತ್ತಿಲ್ಲ.

ಈ ಅನಿಸ್ಸವೆಲ್ಲ ಪಡಿತರ ಪದ್ಧತಿ ಹತೋಟೆ ಅಜ್ಜಿಯಿಂದ ಬಂದಿದೆ. ಅದು ಹೋದರೇ. ಆಹಾರ ಧಾನ್ಯದ ಮೇಲಿರುವ ಹೋಟೆಯನ್ನೆಲ್ಲ ತೆಗೆಯಿರಿ. ಅನುಕೂಲವಾಗುತ್ತದೆ-ಎಂದು ಹಲವರು ಸರ್ಕಾರದವರನ್ನು ಕೇಳುತ್ತಿದ್ದಾರೆ.

ಆಹಾರ ಧಾನ್ಯದ ಮೇಲಿನ ಹತೋಟೆ ತೆಗೆದರೇ ; ಪಡಿತರ ಪದ್ಧತಿ ಸುಗಮವಾಗಿ ನಡೆಯಲಿ ; ಅದರಿಂದ ಅಪ್ಪಷ್ಟಾಗುವ ಧಾನ್ಯ ಸಿಗುತ್ತದೆ-ಎಂದು ಕೆಲವರು ಹೇಳುತ್ತಿದ್ದಾರೆ

ಈ ಸಂದರ್ಭದಲ್ಲಿ ಮೈಸೂರು ನಗರದ ಜನರು ಸೌಜನ್ಯದ ವಿಲ್ಲೆಯನ್ನು ವಿಾಂಬಬೇಡ ಸರಕಾರವನ್ನು ನಂಬಿಸುತ್ತಿರೆ ಸಮಾನ್ಯನಿಗೆ ಇದು ಪರದೋರನಾ ಇವೊಡನೆ ತನ್ನ ಧ್ವನಿ ಸೇರಿಸಿ ಅಲ್ಲಲ್ಲಿ ಗೊಂದಲವುಂಟಾಗುತ್ತದೆ. ಕೆಲವುಂಟರು ಜನ ಸಮಾನ್ಯರನ್ನು ತಪ್ಪಾದಿಗೆದು ಗೊಂದಲವೆಬ್ಬಿಸಲು ಈ ಅಭಾವದ ಅಧ್ಯಾಯದ ಅಕ್ಕಿಯು ಪಡೆದಿದ್ದಾ ಮತ್ತೆ ಕೆಲವು ಕಳ್ಳ ವ್ಯಾಪಾರಿಗಳು ಸಿಕ್ಕಿ ಹೋದರೆ ಯಾವ ಆತಂಕವೂ ತಮಗೆ ತಮ್ಮ ವ್ಯಾಪಾರವನ್ನು ನಡೆಸಬಹುದೆಂದುಕೊಂಡಲ್ಲೆ ನೆರವಾಗಿದ್ದಾರೆ-ಎಂದು ಕೆಲವರು ಅಭಿಪ್ರಾಯ ಪಡುತ್ತಾರೆ.

ಈ ಅಭಿಪ್ರಾಯವು ಬೇರೆ ಬೇರೆಯಾಗಿ ಜನರು ಕಣ್ಣು ಮುಚ್ಚಿಕೊಂಡು ಹೋಗಿಗೆ ನಮಗೆ ಕೊಡದೆ ಯಾರು ಕೊಡುತ್ತಾರೋ ಅದಕ್ಕೆಲ್ಲ ತಮ್ಮ ಸೇರಿಸುವುದು ಸಂಯಲ್ಲ. ತಮಗೆ ಬೇಕಾದ್ದನ್ನು ಆಗು ಹೋಗುಗಳನ್ನು ಯೋಚಿಸಿ ಒಂದು ನಿರ್ಧಾರಕ್ಕೆ ಬರಬೇಕು. ತಮ್ಮ ನಿರ್ಧಾರವನ್ನು ಬಲಪಡಿಸಿ ಸಾಗುವ ರೀತಿಯಲ್ಲಿ ಜನತೆಯು ತಮ್ಮ ಸರ್ಕಾರದ ಮುಂದೆ ಇಡಬೇಕು.

ಸಿಕ್ಕಿ ಬಂದಂತೆ ಹೊಟ್ಟೆ ಬಿಡಿಸುವುದರಿಂದ ತನುಗೂ ಯಾವ ವೈಕಕ್ಕೂ ಒಳ್ಳೆಯದಲ್ಲ

ರೈಲ್ವೆ ನೌಕರರ ಅಸಮಾಧಾ

ಸರ್ಕಾರದ ಅಜ್ಞೆಯ ಪುನರ್ವಿಮರ್ಶೆಗ

ಪ್ರಾರ್ಥನೆ

ಸ್ವಂ.ಸು.ಪ್ರೇ.] ಬೆಂಗಳೂರು

ಕಳೆದ ೧೬ ನೇ ತಾರೀ ಸರ್ಕಾರದವರ ರೈಲ್ವೆ ನೌಕರರ ವೇತನಗಳ ವಿಚಾರವಾಗಿ ಹೊರಡಿಸಿರುವ ಆಜ್ಞೆಯಿಂದ ತಮಗೆ ಆಗಿರುವ ಅಶ್ರದ್ಧೆಯನ್ನು ಸೂಚಿಸಲು ಸಂಸ್ಥಾನದ ರೈಲ್ವೆ ಕೆಲಸಗಾರರ ಪ್ರತಿನಿಧಿಗಳು ನಿನ್ನೆ ಶ್ರೀ ಶಿವಲಿಂಗಂರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಿದರು. ಸಂಸ್ಥಾನದ ಅನೇಕ ಕಡೆಗಳಿಂದ ಪ್ರತಿನಿಧಿಗಳು ಬಂದಿದ್ದರು. ಸರ್ಕಾರದವರ ಹೊಸ ಆಜ್ಞೆಯಿಂದ ತಮ್ಮ ಬೇಡಿಕೆಗಳು ಈಡೇರುವುದಿಲ್ಲವೆಂದು ಹೇಳಿ ಹಲವರು ಭಾಷಣ ಮಾಡಿದರು ಸದರೀ ಆಜ್ಞೆಯಲ್ಲಿರುವ ಸಂಬಂಧ ಪ್ರಸ್ತಾಪಗಳನ್ನು ನಿರಾಕರಿಸಬೇಕೆಂದೂ ಸಹ ಸೂಚಿಸಿದರು. ಈ ವಿಷಯವನ್ನು ಪರಿಶೀಲಿಸಿ ಸರ್ಕಾರಕ್ಕೆ ತಿಳಿಸುವುದನ್ನು ಮಾಡಲು ರಚಿಸಲಾಗಿದ್ದ ವಿಶೇಷ ಸಮಿತಿಯಲ್ಲಿ ಉಭಯಪಕ್ಷದವರಿಗೂ ಅಂಗೀಕಾರವಾಗುವ ರೀತಿಯಲ್ಲಿ ಕೊಟ್ಟಿದ್ದ ಸಲಹೆಗಳನ್ನು ಸರ್ಕಾರದವರು ಜಾರಿಗೆ ತರದೇಕೆ ಎಂದು ಪ್ರಶ್ನಿಸಿದರು. ಅನಂತರ ಈ ಕೆಳಗಿನ ಕಂಡ ನಿರ್ಣಯಗಳು ಅಂಗೀಕರಿಸಲ್ಪಟ್ಟವು.

ಕೆಲಸಗಾರರ ಸಂಬಳ ಸಾರಿಗೆಗಳ ವಿಚಾರವನ್ನು ಸರ್ಕಾರದವರು ಪುನಃ ವಿಮರ್ಶಿಸಬೇಕು, ಈಗ ಹೊರಡಿಸಿರುವ ಆಜ್ಞೆಯನ್ನು ಬದಲಾಯಿಸಬೇಕು, ಸಂಬಳದ ಪ್ರಮಾಣವನ್ನು ಹೆಚ್ಚಿಸಬೇಕು.

ಈ ತಿಂಗಳು ೨೯ ನೇ ತಾರೀ ನೊಳಗೆ ಸರ್ಕಾರದವರು ಮೇಲ್ಕಂಡ ಕೋರಿಕೆಗಳನ್ನು ನೆನೆವೇರಿಸದೇಕೆಂದು ಪ್ರಾರ್ಥಿಸಲಾಗಿ ಇಲ್ಲವಿದ್ದರೆ ಮುಷ್ಕರವೇ ಮುಂತಾದ ಕಾರ್ಯಕ್ರಮಗಳನ್ನು ಪ್ರಾರಂಭೋಚಿಸಲಾಗುವುದೆಂದು ಹೇಳಲಾಗಿದೆ

ನಗರವು ಶಾಂತವಾಗಿದೆ

ಬೆಂಗಳೂರು ನಗರವು ಯಾವ ಗಲಭೆಯೂ ಇಲ್ಲದೆ ಶಾಂತವಾಗಿರುತ್ತದೆ. ಕರ್ಫ್ಯೂ ಆಜ್ಞೆಯನ್ನು ರದ್ದು ಮಾಡಲಾಗಿದೆ ಆಜ್ಞೆಯಲ್ಲಿ ಬಿಡಿಸ್ಸೆ ಹೊಂದುತ್ತಿದ್ದವರ ಪೈಕಿ ಈಚೆಗೆ ಇನ್ನೊಬ್ಬನು ಮೃತಪಟ್ಟಿದ್ದಾನೆ.

ಒಲಂಪಿಕ್ ಸ್ಪರ್ಧೆಗಳು

ಆರೋಗ್ಯ ಮಂತ್ರಿಗಳಾದ ಹಾ ಮಹಮದ್ ಪರೀಕ್ಷೆಯವರು ಸಂಸ್ಥಾನದ ಒಲಂಪಿಕ್ ಸ್ಪರ್ಧೆಗಳಲ್ಲಿ ಗೆದ್ದವರಿಗೆ ನಿನ್ನೆ ಬಹುಮಾನವನ್ನು ಹಂಚಿದರು. ಗಂಡಸರ ಮೊದಲನೆಯ ಬಹುಮಾನವು ಬೆಂಗಳೂರಿನ ವೈ ಯಂ. ಸಿ ಎ ಯವರಿಗೂ, ಎರಡನೆಯ ಬಹುಮಾನವು ಮದರಾಸಿನ ವೈ ಎಂ. ಸಿ.ಎ ಯವರಿಗೂ, ಹೆಂಗಸರ ಬಹುಮಾನವು ಬೆಂಗಳೂರಿನ ಆಂಗ್ಲೋ ಇಂಡಿಯನ್ ಸಂಘದವರಿಗೂ ದೊರೆತುವು.

ಬೆಂಗಳೂರು ಗಲಭೆಯ ಬಗ್ಗೆ ಮಹಾತ್ಮರ ಕುತೂಹಲ

ಮೊನ್ನೆ ಸಂಜೆ ಪ್ರಾರ್ಥನಾ ಸಭೆಯಲ್ಲಿ ಮಹಾತ್ಮಾ ಗಾಂಧೀಜಿಯವರು ಬೆಂಗಳೂರಿನಲ್ಲಿ ನಡೆದ ಕೋಮುವಾರು ಗಲಭೆಯ ವಿಷಯವನ್ನು ಪ್ರಸ್ತಾಪಿಸುತ್ತಾ " ನಿನ್ನ ಉಪವಾಸದಿಂದ ನೈಸೂರಿನ ಮೇಲೆ ಏನೊಂದು ಪರಿಣಾಮವೂ ಉಂಟಾಗಿಲ್ಲವೆಂದೂ ನನಗೆ ಅಲ್ಲಿಂದ ಶಾಂತಿ ಬಂದಿಲ್ಲವೆಂದು ತಿಳಿಸಲು ವ್ಯಥೆಯಾಗುತ್ತದೆ. ಈ ವಿಷಯವಾಗಿ ವಿವರವಾದ ಹೇಳಿಕೆಯೊಂದನ್ನು ಕೊಡಬೇಕೆಂದು ನಾನು ಮೈಸೂರು ಸರ್ಕಾರಕ್ಕೆ ಸೂಚನೆಯನ್ನು ಕೊಟ್ಟಿದ್ದೇನೆ" ಎಂದು ತಿಳಿಸಿದರು

ವಾರ ಭವಿಷ್ಯ

೨೫-೧-೪೮ರಿಂದ ೩೧-೧-೪೮ ರವರೆಗೆ

ಮೇಷ — ಆರೋಗ್ಯ ಸಾಧಾರಣವಾಗಿದೆ, ಯತ್ನಿಸಿದ ಕಾರ್ಯಗಳಲ್ಲಿ ವಿಘ್ನವುಂಟಾಗುವುದು, ಮಿತ್ರರಿಂದ ವಂಚಿತರಾಗುವಿರಿ, ನೌಕರಿ ದಂಧೆಗಳಲ್ಲಿ ಅಪ ಯಶಸ್ಸು, ತಾರೀ ೨೬, ೨೭ ಜೇಸರ, ನಷ್ಟ

ವೃಷಭ — ಧನವಾಯು ಸಾಧಾರಣ, ಆರೋಗ್ಯ ಚೆನ್ನಾಗಿಲ್ಲ, ಮನೆಯಲ್ಲಿ ವೃಥಾ ಕಲಹ ಸಂಭವ, ಆಸ್ತೀಕ್ಷರ ನಿಂದೆಗೆ ಗುರಿಯಾಗುವಿರಿ, ವ್ಯಾಪಾರಿಗಳಿಗೆ ನಷ್ಟ, ತಾರೀ ೨೭, ೨೯ ಕಲಹ ಪ್ರಸಂಗ, ಚಿಂತೆ.

ಒಧುನ — ದೇಹಾರೋಗ್ಯವು ಉತ್ತಮವಾಗಿದೆ, ಧರ್ಮ ಕಾರ್ಯಗಳಿಗಾಗಿ ವೆಚ್ಚ, ವಿಪ್ರ ವರ್ಗದವರಿಂದ ಸನ್ಮಾನ, ಅನಿರೀಕ್ಷಿತ ಪ್ರವಾಸದಿಂದ ಅಧಿಕ ಲಾಭ, ತಾರೀ ೨೬, ೨೯ ಔತಣ, ಸುಖ ಪ್ರವಾಸ

ಕಟಕ — ಆರೋಗ್ಯ ಚೆನ್ನಾಗಿದ್ದರೂ ಅರ್ಥಿಕ ಮುಗ್ಗಟ್ಟು ಹೆಚ್ಚುವುದು, ನಿರೀಕ್ಷಿಸಿದ ಹಣವು ಬಂದೆ ತೊಂದರೆಯಾಗುವುದು, ಪ್ರವಾಸದಿಂದ ನಷ್ಟ ಸಂಭವ ತಾರೀ ೨೭, ೨೯ ಚೋರ ಭಯ, ಧನ ಹಾನಿ.

ಸಿಂಹ — ಹಣಕಾಸಿನ ತೊಂದರೆ ಜಾಸ್ತಿಯಾಗುವುದು, ಏನೆಯಲ್ಲಿ ಸೌಖ್ಯಗಳು ಮರಿಗಳಿಗೆ ಆನಾರೋಗ್ಯವುಂಟಾಗುವುದು, ವಾರಾಂತ್ಯದಲ್ಲಿ ಮಿತ್ರರ ಸಹಾಯದಿಂದ ಕೊಂಚ ಸಮಾಧಾನ, ತಾರೀ ೨೬, ೨೮ ದೂರ ಪ್ರಯಾಣ, ಅಲ್ಪ ಲಾಭ

ಕನ್ಯಾ — ಆದಾಯಕ್ಕೆ ಎಡರುಬ್ಬು ಉಂಟಾಗುವುದರಿಂದ ಅರ್ಥಿಕ ಸಮಸ್ಯೆಯನ್ನು ಬಗೆಹರಿಸುವುದೇ ದೊಡ್ಡ ಚಿಂತೆಯಾಗುವುದು, ವಿದ್ಯಾರ್ಥಿ ವೃಂದಕ್ಕೆ ಈ ವಾರ ಸಾಧಾರಣವಾಗಿದೆ, ತಾರೀ ೨೯, ೩೧ ಧನಹಾನಿ, ಜನನಿಂದೆ

ತುಲಾ — ಆರೋಗ್ಯ ಚೆನ್ನಾಗಿದೆ, ಯತ್ನಿಸಿದ ಕಾರ್ಯಗಳು ಯಶಸ್ವಿಯಾಗಿ ನೆರವೇರುವುದು ಧರ್ಮ ಕಾರ್ಯಗಳಿಗಾಗಿ ವೆಚ್ಚ, ಇತರರಿಂದ ಸನ್ಮಾನ, ತಾರೀ ೨೮, ೩೦ ಯಶಸ್ಸು ಸಂತೋಷ ಕೂಟ

ವೃಶ್ಚಿಕ — ನೌಕರಿ ದಂಧೆಗಳಲ್ಲಿ ಮೇಲಧಿಕಾರಿಗಳ ನೆರವು ದೊರೆಯುವುದು, ಲೇಖಕ ವೃಂದಕ್ಕೆ ಕ್ರಮಗತಿ, ಮನೆಯಲ್ಲಿ ಅನಿರೀಕ್ಷಿತವಾಗಿ ಮಂಗಳ ಕಾರ್ಯಗಳು ಜರುಗುವುವು, ತಾರೀ ೨೭, ೩೦ ಸಂತೋಷ ವಾರ್ತೆ, ಶಕ್ತುಲಾಭ.

ಧನು — ಆರೋಗ್ಯ ಚೆನ್ನಾಗಿದ್ದರೂ ಅನಿರೀಕ್ಷಿತ ಅಪಘಾತಗಳುಂಟಾಗಿ ಮನಸಿಗೆ ಕ್ಲೇಶ ಹೆಚ್ಚುವುದು, ವಿಮ್ರರಿಂದ ಅಪಕೀರ್ತಿ, ವೃಥಾ ಧನವ್ಯಯ, ತಾರೀ ೨೬, ೨೮ ದುಂದು ವೆಚ್ಚ, ವಿಶ್ವಾಸ ಘಾತ.

ಮಕರ — ಪ್ರವಾಸದಿಂದ ಅಧಿಕ ನಷ್ಟ ಸಂಭವ, ಆಸ್ತೀಕ್ಷರಲ್ಲಿ ಮನಸ್ತಾಪಗಳುಂಟಾಗಿ ಪರಸ್ಪರ ಸಂತಯ ಹೆಚ್ಚುವುದು ಮಿತ್ರರು ಗೋಮುಖ ವ್ಯಾಘ್ರೆಗಳಂತೆ ವರ್ತಿಸುವರು ತಾರೀ ೨೬, ೩೦ ಅನಿಷ್ಟವಾರ್ತೆ, ವಾಯಭಯ

ಕುಂಭ — ಆರೋಗ್ಯ ಉತ್ತಮವಾಗಿದೆ ನೌಕರಿ ವ್ಯವಹಾರಗಳಲ್ಲಿ ಮೇಲಧಿಕಾರಿಗಳಿಂದ ಸನ್ಮಾನ, ಮಿತ್ರರ ಸಹಾಯದಿಂದ ಅರ್ಥಿಕ ಸಮಸ್ಯೆಯು ಬಗೆಹರಿಯುವುದು, ತಾರೀ ೨೬, ೨೯ ಆನಂದ ವಾರ್ತೆ, ಮಿತ್ರರಿಂದ ಸಹಾಯ.

ಮೀನ — ಆರ್ಥಿಕ ದೃಷ್ಟಿಯಿಂದ ಈ ವಾರ ಅತ್ಯಂತ ಲಾಭದಾಯಕವಾಗಿರುವುದು. ವ್ಯಾಪಾರಿಗಳಿಗೆ ಅಪೂರ್ವ ಲಾಭ, ಆರೋಗ್ಯ ಉತ್ತಮ. ತಾರೀ ೨೮, ೩೧ ಲಾಭ, ಮಿಶ್ರಫಲ ಭೇಟಿ

ವಿದ್ಯಾರ್ಥಿಗಳಿಗೆ ಉಚಿತ ಭೋಜನ ಸೌಕರ್ಯ

೧೧೦೦೦ ರೂ ನಿಧಿಯ ಕೇಸರಿಕೆ

ಈಗ್ಗೆ ಸುಮಾರು ನಾಲ್ಕು ವರ್ಷಗಳಿಂದಲೂ ಕೌರಸಭೆಯವರು ಮಹಾಜನಗಳ ಉದಾರತ್ರಯದಿಂದ ನೂರಾರು ಬಡ ವಿದ್ಯಾರ್ಥಿಗಳಿಗೆ ಉಚಿತ ಭೋಜನ ಸೌಕರ್ಯವನ್ನೇರ್ಪಡಿಸಿ ನಡೆಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿರುತ್ತದೆ. ನಿನ್ನೆ ಪಿನ ಆಕಾಶವಾಣಿಯ ರಿಕ್ರಿಯೇಷನ್ ಕ್ಲಬ್ಬಿನವರು ಗೃಹ ಸಚಿವರಾದ ಶ್ರೀ ಟಿ ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದ ವಿವಿಧ ವಿನೋದಾವಳಿಯಲ್ಲಿ ಮಹಾಜನರಿಗೆಲು ಉದಾರತ್ರಯದಿಂದ ಸಹಾಯ ಮಾಡಿರುವುದು ೫೦೦೦ ರೂ ಗಳು ಈ ಶುಭ ಸಂದರ್ಭದಲ್ಲಿ ಉದಾರಿಗಳಾದ ಸಾಹುಕಾರ್ ಎಂ. ಎಲ್ ನಾಗಣ್ಣಪ್ಪನವರು ೫೦೦೦ ರೂ ಗಳನ್ನೂ ಮತ್ತು ಸಾ॥ ಎಂ ಎಸ್. ಚನ್ನಬಸಪ್ಪನವರು ೧೦೦೦ ರೂ ಗಳನ್ನೂ ಕೊಟ್ಟಿರುವುದಲ್ಲದೆ ಇನ್ನೂ ೬೦೦೦ ರೂ ಗಳನ್ನು ಕೊಡುವುದಾಗಿ ವಾಗ್ದಾನ ಮಾಡಿರುತ್ತಾರೆ ಇದೇ ರೀತಿಯಾಗಿ ದೇಶಾಭಿಮಾನಿಗಳು ಬಡ ವಿದ್ಯಾರ್ಥಿಗಳ ಮೇಲೆ ಅಭಿಮಾನವಿಟ್ಟು ಸಹಾಯ ಹೂಡಬೇಕೆಂದು ಸಮಿತಿಯ ಪರವಾಗಿ ಪ್ರಾರ್ಥಿಸುತ್ತೇನೆ ಮತ್ತು ಈ ಪರಿಗೂ ಸಹಾಯ ಮಾಡುತ್ತಿರುವ ಮಹನೀಯರಿಗೆ ಸಮಿತಿಯ ಪರವಾಗಿ ಹೃತ್ಪೂರ್ವಕವಾದ ವಂದನೆಗಳನ್ನರ್ಪಿಸುತ್ತೇನೆ

ಚೌಡಯ್ಯ.
ಪೌರಸಭಾ ಸದಸ್ಯ

ಕುದುರೆ ಜೂಜಿನ ನಿರ್ಬಂಧದ ಮಸೂದೆ

ಕುದುರೆ ಜೂಜಿನ ಬಗ್ಗೆ ಕೆಲವು ನಿಬಂಧಗಳನ್ನು ನಿಯಮಿಸುವ ಮಸೂದೆಯನ್ನು ಮದರಾಸಿನಲ್ಲಿ ಸಿದ್ಧಗೊಳಿಸಲಾಗಿದೆ. ದೇಶಾಕೋರ್ಸ್ ಮತ್ತು ಹೊರಗಡೆ ಕುದುರೆಗಳ ಬಗ್ಗೆ ಜೂಜಾಡುವುದನ್ನೂ ಮತ್ತು ಪತ್ರಿಕೆಗಳಲ್ಲಿ ಪ್ರಕಟನೆಗಳನ್ನು ಪೂರೈಸುವುದನ್ನೂ ನಿಷೇಧಿಸಲಾಗುವುದು. ಇದನ್ನು ಉಲ್ಲಂಘಿಸಿದವರಿಗೆ ೬೦೦ ರೂ ದಂಡವನ್ನು ವಿಧಿಸಲಾಗುವುದು.

ಅರಗು ಮತ್ತು ಬಣ್ಣದ ಕಾರ್ಖಾನೆ ಕೆಲಸಗಾರರ ಕೊರತೆ

ರಾಜಧಾನಿಯ ಸರ್ಕಾರೀ ಅರಗು ಮತ್ತು ಬಣ್ಣದ ಕಾರ್ಖಾನೆಯ ಕೆಲಸಗಾರರ ಸಭೆಯು ಕಳೆದ ಬುಧವಾರ ಶ್ರೀ ರಾ. ನಾಗರಾಜರವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾರ್ಖಾನೆಯ ಹಂಗಾಮಿ ಕೂಲಿಗಾರರಿಗೆ ಮತ್ತು ಸಂಬಳದಾರರಿಗೂ ದಿನಕ್ಕೆ ಒಂದು ರೂ ತುಟ್ಟಿಭತ್ಯವನ್ನು ಕೊಡಬೇಕೆಂದೂ ಮತ್ತು ಕೆಲಸಗಾರರಿಗೆ ಇಪ್ಪತ್ತು ತಿಂಗಳಿಗೂ ಇನ್ನೂ ಬೋನಸ್ಸು ಕೊಡದಿರುವುದನ್ನು ಕೂಡಲೇ ಕೊಡಿಸಿಕೊಡಬೇಕೆಂದೂ ಕೋರುವ ನಿರ್ಣಯ ಮಾಡಲಾಯಿತು. ಸಚಿವರಲ್ಲಿ ನಿಯೋಗವೊಂದು ಹೋಗಿ ಕೆಂದೂ ನಿರ್ಧರಿಸಲಾಯಿತು

ವುಡ್‌ಲ್ಯಾಂಡ್ಸ್
23-1-48 ರಿಂದ
ಅಮೋಘ ಎರಡನೇ ವಾರ
ದಿ ರಾತ್
(ಅಮೋಘ ಹಿಂದೀ ಚಿತ್ರ)
ಪಾತ್ರ — ಸ್ನೇಹ ಪ್ರಧಾ
(ಕರ್ನಾಟಕ ಫಿಲ್ಮ್ಸ್ ರಿಲೀಸ್)

Morning Shows
from 23-1-48 for 4 days
Scouts to the
Rescue

Edited printed and pub by A. R. Nagarajan at the S Press D. Sabbaiah Road Mysor

ಅಪೇರಾ ಟಾಕೀಸ್
ತಾ॥ ೨೮-೧-೪೮ ರಿಂದ
ಪ್ರತಿ ದಿನ ಮೂರು ಆಟಗಳು
- ಕನಗಿ -
(ತಮಿಳು)
ಪಾತ್ರ :— ಕೆನ್ನಾಂಬ, ಟಿನ್ನಪ್ಪ
ಎಸ್. ಎಸ್ ಕೃಷ್ಣನ್, ಟಿ ಎ ಮಧುರಂ

From 23-1-48 for 4 days daily at 10.30 a. m.
Hit Parade of 1943
Featuring — JOHN CARROLL, SUSAN HAYWARD
GAIL PATRICK, EVE ARDEN

23-1-48 ರಿಂದ
ಅಮೋಘ ೧೨ನೇ ವಾರ
ಪ್ರತಿ ದಿನ ೨ ಆಟಗಳು
★ ಮಹಾತ್ಮಾ ಕಬೀರ್ ★
(ಕನ್ನಡ)
ರಾಜಕಮಲ್ ಟಾಕೀಸಿನಲ್ಲಿ



ಪ್ರಭುದೇವಾ ಟಾಕೀಸಿನಲ್ಲಿ
25-1-48 ನೇ ಭಾನುವಾರದಿಂದ
ಅಮೋಘ ಪ್ರಾರಂಭ :: ಪ್ರತಿ ದಿನ ೩ ಆಟಗಳು
ಸಂಪೂರ್ಣ ಪಿಕ್ಚರ್ಸ್ ೧೮ರವರ
★ ಚಂದ್ರಹಾಸ ★
—: ಮುಖ್ಯ ಪಾತ್ರಧಾರರು :—
ಎಸ್ ಶೋಭ್ರತ್ನಮ್ಮ, ಎಂ ವಿಶ್ವಾಸ್ ಅಮೀರ್‌ಬಾಯಿ ಕರ್ನಾಟಕಿ, ಹೆಚ್. ಸಿದ್ದರಾಮಪ್ಪ,
ಜಿ ಟಿ ಬಾಲಕೃಷ್ಣರಾವ್ ಮುಂತಾದವರು
CHANDRAHASA

ಸಂಪುಟ ೬] ಸೋಮವಾರ ೨೬-೧-೪೮ [ಸಂಚಿಕೆ ೧೭೫

ರಾಜಪ್ರಭ ಸಂಸ್ಥಾನಕ್ಕೆ ಪರಾಣರ ಮುತ್ತಿಗೆ

ರಾಜಧಾನಿಯ ಪೌರಸಭಾ ಧ್ಯಕ್ಷರು

ಮೈಸೂರು ೨೬

ಈ ದಿನ ನಡೆದ ಪೌರಸಭೆಯ ವಿಶೇಷ ಧಿವೇಶನದಲ್ಲಿ ಅಧ್ಯಕ್ಷರ ಸ್ಥಾನವನ್ನು ಪಡೆಯಿತು ಉದ್ದೇಶ ವಾರಿಕೆಗೆ ನಾಂದಿಹಾಡಿದ ಶ್ರೀ ಬಿ. ಸೀತಾರಾಮಯ್ಯನವರಿಗೆ ಪ್ರತಿ ಸ್ಪರ್ಧಿಗಳು ರಲಿಲ್ಲವಾದುದರಿಂದ ಅವರೇ ಸರ್ವಾನು ಮತದಿಂದ ಚುನಾಯಿತರಾಗಿರು ವುದಾಗಿ ಘೋಷಿಸಿ ನಿರ್ಣಯ ಮಾಡಲಾಯಿತು

ಪೌರಾಧಿಕಾರ ಪ್ರಥಮ ಅಧ್ಯಕ್ಷ ರಾಗಿ ಚುನಾಯಿಸಲ್ಪಟ್ಟ ಶ್ರೀಯುತರನ್ನು ಕಛೇರಿಯ ಸದಸ್ಯರುಗಳೂ, ಅಧ್ಯಕ್ಷರೂ ಅಭಿನಂದಿಸಿದರು ಶ್ರೀ ಸೀತಾರಾಮಯ್ಯನವರು ಅದಕ್ಕಾಗಿ ತನ್ನ ಧನ್ಯವಾದಗಳನ್ನು ಸಲ್ಲಿಸಿದರು

ಗಂಧದೆಣ್ಣೆ ಕಾರ್ಖಾನೆಯ ಪುರೋಭಿವೃದ್ಧಿ

ಆರ್ಥಿಕ ಸಚಿವರಿಂದ ಪ್ರಕಂಸೆ

ಮೈಸೂರು ೨೬

ನಿನ್ನೆ ಬೆಳಿಗ್ಗೆ ರಾಜಧಾನಿಯ ಗಂಧದೆಣ್ಣೆ ಕಾರ್ಖಾನೆಯ ದಿನಾಚರಣೆಯ ಆರ್ಥಿಕ ಸಚಿವರಾದ ಶ್ರೀ ಹೆಚ್. ಸಿ ದಾಸಪ್ಪನವರು ಅಧ್ಯಕ್ಷತೆಯಲ್ಲಿ ನೈಭವದಿಂದ ಜರುಗಿತು ಪ್ರಾರ್ಥನೆಯಾದ ಮೇಲೆ ಸ್ವಾಗತವಾದನವು ನಡೆಯಿತು ಕಳೆದ ೩೦ ವರ್ಷಗಳಿಂದಲೂ ಈ ಕಾರ್ಖಾನೆಯು ಕ್ರಮ ಕ್ರಮವಾಗಿ ಹೊಂದಿರುವ ಅಭಿವೃದ್ಧಿಯನ್ನು ವಿವರಿಸುವ ವರದಿಯನ್ನು ಜನರಲ್ ಮ್ಯಾನೇಜರವರು ಒಪ್ಪಿಸಿದರು ಕೆಲಸಗಾರರು ತನ್ನ ಕಷ್ಟನಿವಾರಣೆಗಳನ್ನೂ, ಮತ್ತು ಬೇಡಿಕೆಗಳನ್ನೂ ಒಗ್ಗೂಡಿಸಿ ವಿನ್ನಪತ್ರಿಕೆಯನ್ನು ಸಚಿವರಿಗೆ ಸಲ್ಲಿಸಿದರು ಆಟಪಾಟಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಪಂಚಲಾಯಿತು

ಅಧ್ಯಕ್ಷರ ಭಾಷಣ ಮಾಡಿ ಈ ಕಾರ್ಖಾನೆಯಲ್ಲಿ ಉತ್ಪತ್ತಿಯಾಗಿರುವ ಗಂಧದ ಎಣ್ಣೆಯು ಹೊನ್ನಿನ ಹೊಳೆಯಂತೆ ಹರಿದು ದೇಶದ ಸಂಪತ್ತನ್ನು ವೃದ್ಧಿಪಡಿಸಲು ಸಹಾಯಿಯಾಗಿದೆಯೆಂದು ಹೇಳಿದರು ಕಾರ್ಖಾನೆಯು ವರದಿಯು ಅದರ್ಶಪ್ರಾಯವಾಗಿದೆಯೆಂದು ತಿಳಿಸಿದರು ಪ್ರಜಾ ಸರ್ಕಾರವು ಒಂದಿವನ ಈ ಕಾರ್ಯವಯದಲ್ಲಿ ಕೆಲಸಗಾರರಿಗೂ, ಒಂಡವಾಳಗಾರರಿಗೂ ಆ ನ್ಯೋನ್ಯ ಪ್ರೀತಿ ವಿಶ್ವಾಸಗಳು ಬೆಳೆದ ಉಭಯತರಿಗೂ ಸಹಾಯವಾಗುವ ಕಾರ್ಯಕ್ರಮಗಳನ್ನು [illegible]

ಧಾರವೀಯ ವೈದ್ಯ ಪದ್ಧತಿಯ ವಿಚಾರಣಾ ಸಮಿತಿ

ಬೊಂಬಾಯಿ ಸರ್ಕಾರದವರಿಂದ ನೇಮಿಸಲ್ಪಟ್ಟಿರುವ ವೈದ್ಯಾಂಡ ಸಮಿತಿಯವರು ತನ್ನ ಅಧ್ಯಕ್ಷರಾದ ಡಾ॥ ಬಿ ಬಿ. ದೇಶಪಾಂಡೆಯವರು ಮುಂದಿನ ಸದಸ್ಯರೊಡನೆ ಕಳೆದ ಶನಿವಾರ ರಾತ್ರಿ ಧಾರವಾಡಕ್ಕೆ ಆಗಮಿಸಿ ಸರ್ಕಾರದ ಅತಿಥಿಗಳಾಗಿದ್ದರು ಸಮಿತಿಯ ಸದಸ್ಯರು ಅದೇ ದಿನ ಆಯುರ್ವೇದ ಮತ್ತು ಯುನಾನಿ ಶಾಲೆಗಳು ಮತ್ತು ಆಸ್ಪತ್ರೆಗಳನ್ನು ಪರಿಶೀಲಿಸಿದರು

ಮಾರನೇ ದಿನ ಸಮಿತಿಯವರು ಹಲವು ಮಂಡಿಸರ ಮತ್ತು ಹಕೀಮರ ಸಲಹೆಗಳನ್ನು ಪಡೆದು ಹುಬ್ಬಳ್ಳಿಗೆ ತೆರಳಿದರು.

ಆರ್ಯನಾಯಕಂರವರ ಧಾರಣ

ವರ್ಧಾ ಶಿಕ್ಷಣದ ಪದ್ಧತಿಯು ದೈವ ಸ್ಥಾಪಕರಾದ ಶ್ರೀ ಆರ್ಯನಾಯಕಂರವರು ನಾಳೆ ಸಂಜೆ ೬ ಗಂಟೆಗೆ ಮಹಾರಾಜಾ ಕಾಲೇಜು ಜೂನಿಯರ್ ಬಿ ಎ ತರಗತಿಯಲ್ಲಿ ನ್ಯೂ ಎಜುಕೇಷನ್ ಫೆಲೋಷಿಪ್ ಸಂಘದ ಆಶ್ರಯದಲ್ಲಿ ಧಾರಣ ಮಾಡುವರು. ಸರ್ವರಿಗೂ ಸ್ವಾಗತವಿದೆ

○ಮದರಾಸ್ ಪ್ರಾಂತ್ಯದಲ್ಲಿ ಬರುವ ಅಕ್ಕೈಟರ್ ಒಂದನೇ ತಾರೀಖಿನಿಂದ ಸಂಪೂರ್ಣ ಪಾನ ನಿರೋಧನವನ್ನು ಜಾರಿಗೆ ತರಲಾಗುವುದೆಂದು ಪ್ರಧಾನಿ ಓಮಂದೂರು ರಾಮಸ್ವಾಮಿ ರೆಡ್ಡಿಯಾರ್‌ರವರು ಘೋಷಿಸಿರುವರು.

[illegible]

ಧ್ವಜಾರೋಹಣ

ಮೈಸೂರು ೨೬

ಸ್ವಾತಂತ್ರ್ಯ ಸ್ಮಾರಕ ದಿನಾಚರಣೆಯು ಯುಕ್ತ ಈ ದಿನ ಬೆಳಿಗ್ಗೆ ಟೌನ್‌ಹಾಲ್ ವೃದಾನದಲ್ಲಿ ಧ್ವಜಾರೋಹಣ ಸಮಾರಂಭ ವು ನಡೆಯಿತು. ಸೌರಸಭಾ ಸದಸ್ಯರು ಾದ ಶ್ರೀ ಕೆ ಪುಟ್ಟಸ್ವಾಮಿಯವರು ರಾ ಧ್ವಜವನ್ನೂ ಶ್ರೀ ಪಿ ಗೋಪಾಲಕೃಷ್ಣ ಟ್ಟರು ನೈಸೂರು ಧ್ವಜವನ್ನೂ ಹಾರಿಸಿ ರು ದೇಶದ ಸಂಪೂರ್ಣ ಸ್ವಾತಂತ್ರ್ಯ ನ್ನು ಗಳಿಸಲು ಕಳೆದ ೧೮ ವರ್ಷಗಳಿಂದ ಾ ಇದೇ ದಿನ ಭಾರತೀಯರು ಪ್ರತಿಜ್ಞೆಗ ನ್ನು ಕೈಗೊಳ್ಳುತ್ತಿದ್ದರೆಂದೂ, ಈಗ ಸ್ವಾ ತ್ರ್ಯವು ದೊರೆತಿರುವುದರಿಂದ ಅದನ್ನು ಳಿಸಿಕೊಳ್ಳುವ ಪ್ರತಿಜ್ಞೆಯನ್ನು ಎಲ್ಲರೂ ಾಡಬೇಕೆಂದೂ ಶ್ರೀ ಪುಟ್ಟಸ್ವಾಮಿಯವರ ತಮ್ಮ ಭಾಷಣದಲ್ಲಿ ಹೇಳಿದರು.

ಸ್ವಾತಂತ್ರ್ಯ ದಿನಾಚರಣೆಯ ಮಹತ್ವ ನ್ನು ಶ್ರೀ ಗೋಪಾಲಕೃಷ್ಣಶೆಟ್ಟರು ವಿವರಿ ಸಿದ್ದನ್ನು ಮುಂದೆ ರಾಷ್ಟ್ರೀಯ ಪುನರ್ರಚನೆ ಯಲ್ಲಿ ಪ್ರಜೆಗಳೆಲ್ಲರೂ ತೊಡಗಬೇಕೆಂದು ಳಿದರು

ಾಂಡಿ ಬಡಾವಣೆಯ ಜಯಪ್ರ ದಯವನ್ನೂ ಮಿಷ್ಟ್ರ ಕೃಷ್ಣಮೂರ್ತಿ ದ ವೇತೀಯ ವಿದ್ಯಾಶಾಲೆಯವರೂ ದ ಪಮ್ಮ ರಸ್ತೆಗಳಲ್ಲಿ ಪ್ರಭಾತಫೇರಿ ಟ್ಟಿದ್ದರು ದೇತೀಯ ವಿದ್ಯಾಶಾಲೆ ಅವರಣದಲ್ಲಿ ಶ್ರೀಯುತ ಎಂ ಎ ಯಿಸುವರು ಧ್ವಜಾರೋಹಣ ಮಾಡಿ ಗಳಿಸಿರುವ ಸ್ವಾತಂತ್ರ್ಯವನ್ನು ಹೇಗೆ ಸಿಕೊಂಡು, ರಾಮರಾಜ್ಯ ಕಟ್ಟಲು ಸಗಬೇಕೆಂಬುದರ ಮೇಲೆ ಕೆಲವು ಹಿ ಕ್ರೆಗಳನ್ನು ನುಡಿದರು ಆನಂತರ ಮಾನ್ ಸೂರ್ಯನಾರಾಯಣ ಪಂಡಿತರು ನಾಡುತ್ತ ವೇತೀಯ ವಿದ್ಯಾಶಾಲೆಯ ಯಗಳನ್ನು ಪ್ರಕಂಸಿಸಿದರು. ರಾಷ್ಟ್ರ ಯೊಡನೆ ಸಭೆಯು ಮುಕ್ತಾಯವಾ ು

ಈ ದಿನ ಸಂಜೆ ಟೌನ್‌ಹಾಲ್ ವೈದಾನ ಬಹಿರಂಗ ಸಭೆಯನ್ನೆರ್ಪಡಿಸಲಾ

ಯೋಗಶಾಲಾ

ವಮನೆಯ ಯೋಗಶಾಲೆಯ ೧೭ ನೇ ಕ ಸುಯೋಕ್ತೃವು ಕಳೆದ ಶನಿವಾಂ ಸ್ಯಾಹ್ನಾಂಜಾವರದ ಹುಜೂರ್ ಸೆಕ್ರೆ ಿಯಾಂದ ಶ್ರೀ ಹೆಚ್. ನಿರಂಜನರಾ ಸಿನವರು ಅಧ್ಯಕ್ಷತೆಯಲ್ಲಿ ಜಗನ್ಮೋ ನವರಲ್ಲಿ ಜರುಗಿತು ಮಂಗಳ ು ನಂತರ ಯೋಗತಾಲಾ ಸಮಿತ ವೈಷ್ಣವಾದ ಶ್ರೀ ಕೆ ನರಸಿಂಹಯ್ಯಂ ಂದ ಸ್ವಾಗತ ಭಾಷಣವಾಯಿತು. ಿ ಶಿಕ್ಷಣದ ಅಧ್ಯಾಪಕಂದ ಬ್ರಿ ಯುಟ್ ಕೃಷ್ಣಮಾಚಾರ್ಯರು ವರದಿ ಒಪ್ಪಿಸಿದರು. ಶಾಲಾ ವಿದ್ಯಾರ್ಥಿ ಯೋಗಾಂಗ ಸಾಧನೆಯ ಪ್ರದರ್ಶ ನವೆಯಿತು. ಅಧ್ಯಕ್ಷರು ಬಹುಮಾ ವಿತರಣೆಗೆ ಮಾಡಿದರು ಯೋಗಾ ನಂದ ಉಗುವ ಉಪಕಾರಗಳನ್ನು ವಿ ರಿಸಿ, ಹೆಚ್ಚು ಹೆಚ್ಚಾಗಿ ಜನರು ಆಸ್ಥಾನ ಮಾಡಬೇಕೆಂದು ಕೋ

ಫುಟ್‌ಬಾಲ್ ಪಂದ್ಯ

ನೆಡೆದ ದಸರಾ ಫುಟ್‌ಬಾಲ್ ಪಂ ರೂರು ರೈಲ್ವೆ ಕ್ಲಬ್ಬಿಗೂ, ನೈಸೂ ಂಜಿಗೂ ನೋಲುಗಳಲ್ಲದೆ ಪಂ ್ಯ ಅಮಿತು.

ಶಂಬೂಹೆಟ್ಟರಿಗೆ ಒಂದು ವರ್ಷ ರಜ

ಸ್ವಂ.ನು ಘೋ) ಬೆಂಗಳೂರು ೨೬

ನಿನ್ನೆ ಪ್ರಾರಂಭವಾದಕ್ಕೆ ಮೊದಲು ಘೋಷ ನೇ ತಾ ಸಿಂದ ಸರ್ ಶಂಬೂಹೆಟ್ಟರಿಗೆ ಒ ಮ ವರ್ಷ ರಜಾ ಕೊಡುವಂತೆ ಆಜ್ಞೆಯಾಗಿದೆ ಅವರಿಗೆ ಕೊಡಲಾಗಿದ್ದ ಕೆಲಸದ ಬಡ್ತಿಯ ಅಧಿಕಾರವು ಬರುವ ಆಗಸ್ಟ್ ತಿಂಗಳಲ್ಲಿ ಮುಗಿಯ ಬೇಕಾಗಿತ್ತು. ಈಗ ಒಂದು ವರ್ಷ ರಜ ಮಂಜೂರಾಗಿರುವುದರಿಂದ ಅವರು ಅನಂತರವೂ ಆ ರು ತಿಂಗಳ ಕಾಲ ಪೂರ್ತಿ ಸಂಬಳವನ್ನು ತೆಗೆದುಕೊಳ್ಳಲು ಅವಕಾಶವುಂಟಾಗುವುದು.

• ಮೂಲ ಶಿಕ್ಷಣದ ಎರಡನೇ ಸಮ್ಮೇಳನ ನ್ನು ಶ್ರೀ ಆರ್ಯ ನಾಯಕಂರವರ ಅಧ್ಯಕ್ಷತೆಯ ಲ್ಲಿ ನಿನ್ನೆ ನಡೆಯಿತು. ವಿದ್ಯಾ ಸಚಿವರಾದ ಶ್ರೀ ಟಿ. ಹೆಚ್. ಶಂದ್ರಶೇಖರಯ್ಯನವರು ಆರಂ ಭೋತ್ಸವವನ್ನು ನೆರವೇರಿಸಿದರು. ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಸಂಪೂರ್ಣ ಸಾಕ್ಷರತೆಯನ್ನು ಉಂಟುಮಾಡಿ ಪಿದ್ಯೋಗಿಗಳ ಶಿಕ್ಷಣಕ್ಕೆ ಹೆಚ್ಚು ಗಮನ ಕೊಡಬೇಕೆಂದು ಅಧ್ಯಕ್ಷರು ಸೂಚಿಸಿದರು.

• ನಿರಾಶ್ರಿತರಾಗಿ ಬಂದಿರುವ ಸಿಖ್ ಜನರಿಗಾಗಿ ಹೊಸ ಮದರಾಸ್ ರಸ್ತೆಯಲ್ಲಿ ಗುರುನಾನಕ್ ನಗರವೆಂಬ ಪ್ರದೇಶದ ಅರಂಭೋತ್ಸವವನ್ನು ಶ್ರೀ ಕೆ. ಸಿ ರೆಡ್ಡಿಯವರು ನೆನ್ನೆ ನೆರವೇರಿಸಿದರು

• ಸಂಸ್ಥಾನದ ಪತ್ರಿಕೋದ್ಯೋಗಿಗಳ ಸಂಘಕ್ಕೆ ಶ್ರೀ ಕೆ ಜೀವನ್ನಾರಾಯರು ಮತ್ತೆ ಅಧ್ಯಕ್ಷರಾಗಿಯೂ, ಶ್ರೀ ಆರ್ ಎಸ್ ನಾರಾಯಣರವರು ಉಪಾಧ್ಯಕ್ಷರಾಗಿಯೂ, ಶ್ರೀಗಳಾದ ಪಿ ಆರ್ ವೆಂಕಟೇಶ್ವರ ಮತ್ತು ಸಯ್ಯದ್ ಮುಸೇರ್ಗರವರು ಕಾರ್ಯದರ್ಶಿಗಳಾಗಿಯೂ ಆಯ್ಕೆಯಾಗಿದ್ದಾರೆ.

ಬೋರ್ಡೋವಿಗೆ ಸರ್ ಸಿ. ವಿ. ರಾಮನ್

ಬೋರ್ಡೋವಿನಲ್ಲಿ ಬರುವ ಏಪ್ರಿಲ್ ತಿಂಗಳು ನಡೆಯಲಿರುವ ವಿಜ್ಞಾನ ಸಮ್ಮೇಳನಕ್ಕೆ ಸರ್ ಸಿ ವಿ ರಾಮನ್‌ರವರಿಗೆ ಆಹ್ವಾನ ಬಂದಿರುವಾಗಿ ಗೊತ್ತಾಗಿದೆ. ಆ ನರು ಮಾರ್ಚ್ ೨೮ ನೇ ತಾ ಬೆಂಗಳೂರನ್ನ ಬಿಡುವರೆಂದು ಹೇಳಲಾಗಿದೆ.

ಆಯಿಲ್ ಇಂಜಿನ್ನುಗಳ ತಯಾರಿ

ತಾತಾ ವಿಜ್ಞಾನ ಮಂದಿರದವರು ಕೊಯಮತ್ತೂರಿನ ಅರ್ಥರ್ ಹೋಪ್ ಕಾಲೇಜಿನವರ ಸಹಕಾರದೊಡನೆ ಆಯಿಲ್ ಇಂಜಿನ್ನುಗಳನ್ನು ತಯಾರಿಸಲು ಸಂಶೋಧನೆಗಳನ್ನು ಪ್ರಥಮತ್ತಿರುವೆಂದು ತಿಳಿದು ಬಂದಿದೆ.

ಜಯಲ್ಮೇರ್ ಸಂಸ್ಥಾನದ ಮೇಲೆ ಬಾಕಿಸ್ತಾ ಪರಾಣರ ಧಾಳಿ

ಪಶ್ಚಿಮ ರಜಪುಟಾನ ಸಂಸ್ಥಾನದ ರಾಜಧಾನಿಯಾದ ಜಯಲ್ಮೇರ್ ಎಂಬಲ್ಲಿಗೆ ಮೊನ್ನೆ ಸಶಸ್ತ್ರ ಪರಾಣೀ ಧಾಳಿಕಾರರು ಪಾಕಿಸ್ತಾನದ ಗಡಿಪ್ರದೇಶದಿಂದ ಒಂದು ಕೊಲೆ, ಲೂಟಿ, ದರೋಡೆ ಮುಂತಾದ ಕೃತ್ಯಗಳನ್ನು ಆರಂಭಿಸಿರುವರೆಂದು ವರದಿಯಾಗಿದೆ. ಸಂಸ್ಥಾನದ ಪ್ರಜೆಗಳು ತಮ್ಮ ಪ್ರಾಣಗಳ್ಳೆತನಿಗಾಗಿ ಸರ್ಕಾರ್ ಏಜೆಂಟರಲ್ಲಿ ಮೊರೆಯಿಟ್ಟರುವರು ಗಲಭೆಕಾರರು ಹಲವು ಹಳ್ಳಿಗಳನ್ನು ಆಕ್ರಮಿಸಿಕೊಂಡಿರುವರೆಂದು ಗೊತ್ತಾಗಿದೆ ಭಾರತ ಸರ್ಕಾರವವರು ಪಾಕಿಸ್ತಾನಕ್ಕೆ ಒಂದು ಪತ್ರ ಬರೆದು ಈ ಕೃತ್ಯಗಳನ್ನು ಕೂಡಲೇ ನಿಲ್ಲಿಸುವಂತೆ ಬೇಡಿಕೊಂಡಿರುವರು. ಆಲ್ಲದೆ ಈಗ ಉಂಟಾಗಿರುವ ನಷ್ಟಕ್ಕೆ ಪರಿಹಾರವನ್ನು ಕೊಡಬೇಕೆಂದು ಕೇಳಿರುವುದಾಗಿಯೂ ತಿಳಿಯಾಗಿದೆ ಧಾಳಿಕಾರರನ್ನು ಎದುರಿಸಲು ಜೋಧಪುರ ಸಂಸ್ಥಾನದ ಸೈನ್ಯಗಳನ್ನು ಕಳುಹಿಸಲಾಗಿದೆಯೆಂದು ಗೊತ್ತಾಗಿದೆ

ಕೋಮುವಾರು ಭಾವನೆಯ ನಿವಾರಣೆ

ಸಾರ್ವಜನಿಕ ಹಾಸ್ಟಲಿನ ಆರಂಭೋತ್ಸವ

ಮೈಸೂರು ೨೬

ಭಾರತದಲ್ಲಿ ನಡೆಯುತ್ತಿರುವ ಕೋಮುವಾರು ಗಲಭೆಗಳು ನಿಲ್ಲಬೇಕಾದರೆ ಮತಭೇದವಿಲ್ಲದ ಹಾಸ್ಟಲುಗಳು ಅತ್ಯಾವಶ್ಯಕ ವಿದ್ಯಾರ್ಥ್ಯಾವಸ್ಥೆಯಲ್ಲಿಯೇ ಪ್ರತಿ ವಿದ್ಯಾರ್ಥಿಗೂ ದೇಶ ಸೇವೆ ಮಾಡುವುದು, ಪರಸ್ಪರ ಸೌಹಾರ್ದತೆಯಿಂದ ಇರುವುದು ಮುಂತಾದುವುಗಳನ್ನು ಕಲಿಸಬೇಕು ಕೋಮುವಾರು ವಿದ್ಯಾರ್ಥಿನಿಲಯ, ಸಂಘ ಮತ್ತು ಸಂಸ್ಥೆಗಳಲ್ಲಿಯೂ ಬಡವ ಬಲ್ಲಿದನೆಲ್ಲರೂ ಭೇದ ವಿಲ್ಲದೆ ಸಮಾನವಾಗಿ ಬೆರೆಯಲು ಸಾರ್ವಜನಿಕರು ಮುಂದೆ ಬರಬೇಕು, ಎಂದು ಹಣಕಾಸಿನ ಸಚಿವರಾದ ಶ್ರೀ ಹಿರಿಯ ದಾಸಪ್ಪನವರು ನಿನ್ನೆ ದಿನ ಸಾರ್ವಜನಿಕ ವಿದ್ಯಾರ್ಥಿ ನಿಲಯದ ಆರಂಭೋತ್ಸವವನ್ನು ನೆರವೇರಿಸುತ್ತಾ ತಿಳಿಸಿದರು.

ಶ್ರೀ ಡಿ ಎಸ್ ಸಿದ್ದಯ್ಯನವರು ಮಾತನಾಡಿ ವಿದ್ಯಾರ್ಥಿನಿಲಯಕ್ಕೆ ಧನ ಸಹಾಯ ಕೋರಿದರು ನಿಲಯದ ವಿದ್ಯಾರ್ಥಿಗಳು ಸಚಿವರಿಗೆ ಬನ್ನಿ ವತ್ತಳೆಯ ಸ್ವಾಗತವನ್ನು ಅರ್ಪಿಸಿದರು ಬನ್ನಿ ವತ್ತಳೆಯಲ್ಲಿದ್ದ ಬೇಡಿಕೆಯಂತೆ ನಿಲಯದ ಕಟ್ಟಡವನ್ನು ಕಟ್ಟಲು ಬೇಕಾಗುವ ಸ್ಥಳವನ್ನು ಕೊಡಿಸಲು ಪ್ರಯತ್ನಿಸುವುದಾಗಿಯೂ ವತ್ತು ಸರ್ಕಾರ ವೆಂದ ಸಾಧ್ಯವಾದಷ್ಟು ಹಣ ಸಹಾಯ ಮಾಡಿಸುವುದಾಗಿಯೂ ಸಚಿವರು ತಿಳಿಸಿದರು

ನಗರ ಸಭೆಯ ಅಧ್ಯಕ್ಷರಾದ ಶ್ರೀ ಹಿರಣ್ಣಯ್ಯನವರು ನಿಲಯಕ್ಕೆ ಬೇಕಾಗುವ ಪಾತ್ರೆಗಳನ್ನು ಕೊಡಿಸುವುದಾಗಿ ತಿಳಿಸಿದರು.

ವಿದ್ಯಾರ್ಥಿ ನಿಲಯದ ಪರವಾಗಿ ಶ್ರೀ ಹೆಚ್ ಎಂ ಜನ್ನಪ್ಪನವರು ಸ್ವಾಗತವನ್ನು ಏರ್ಪಡಿಸಿದರು. ಪಂದೇಮಾತರಂ ಗೀತೆಯೊಂದಿಗೆ ಸಭಾರಂಭವು ಮುಕ್ತಾಯವಾಯಿತು

ವಿದ್ಯಾರ್ಥಿ ಕಾಂಗ್ರೆಸ್ಸಿನ ಸದಸ್ಯತನ

ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ ಸದಸ್ಯತನದ ಪುಸ್ತಕಗಳನ್ನು ತೆಗೆದುಕೊಂಡಿರುವವರು ಇದೇ ತಿಂಗಳು ೩೮ ನೇ ತಾರೀಖಿನೊಳಗೆ ಪುಸ್ತಕಗಳನ್ನೂ ಸಂಪೂರ್ಣ ಹಣವನ್ನೂ ಕಾರ್ಯಾಲಯಕ್ಕೆ ತಲುಪಿಸಬೇಕೆಂದೂ ಅನಂತರ ಬಂದವುಗಳನ್ನು ಓಟಿಂಗಿಗೆ ಪಟ್ಟಿಯಲ್ಲಿ ಸೇರಿಸಲಾಗುವುದಿಲ್ಲವೆಂದೂ ಕಾರ್ಯದರ್ಶಿಗಳು ತಿಳಿಸಿರುತ್ತಾರೆ

ಸಿಲೆ ಸಿನಿಮಾ ಹೌಸ್ ಮೈಸೂರು
ಒಪೇರಾ ಟಾಕೀಸ್
ತಾ|| ೨೮-೧-೪೮ ರಿಂದ
ಪ್ರತಿ ದಿನ ಸೂರು ಆಟಗಳು
- ಕನಗಿ -
(ತಮಿಳು)
ಪಾತ್ರ :— ಕನ್ನಾಂಬ, ಚನ್ನಪ್ಪ ಎಸ್. ಎಸ್ ಕೃಷ್ಣ, ಟಿ ಎ ಮಧುರಂ

ಅಖಿಲ ಭಾರತ ಜನತಾ ಶಿಕ್ಷಣ ದಿನಾಚರಣೆ

ಅಖಿಲ ಭಾರತ ಜನತಾ ಶಿಕ್ಷಣ ಸಭೆಯವರು ಈ ಮಾಹೆ ೩೭ ನೇ ತಾರೀಖು ಜನತಾ ಶಿಕ್ಷಣ ದಿನಾಚರಣೆಯನ್ನು ನಡೆಸಲು ನಿಶ್ಚಯಿಸಿರುತ್ತಾರೆ ಮೈಸೂರಿನಲ್ಲಿ, ರಾಷ್ಟ್ರ ಧ್ವಜಾರೋಹಣ ಪೂರ್ವಕ ಭಾರತ ದಲ್ಲಿ ಜಾಗೃತ ಜನಾಬ್ದಾರಿ ಸರ್ಕಾರ ಎಂದಿರುವ ಮೈಸೂರಿನಲ್ಲಿ ವಯಸ್ಕರ ಶಿಕ್ಷಣದ ವಿಚಾರವಾಗಿ ಭಾಷಣ, ಚಿತ್ರಪಟ ಪ್ರದರ್ಶನ ಪ್ರಮುಖ ಸ್ಪರ್ಧೆಗಳು, ರಾಷ್ಟ್ರಗೀತೆ ಈ ಕಾರ್ಯಕ್ರಮಗಳೆಲ್ಲವನ್ನು ಏರ್ಪಡಿಸಬಹುದು. ಪ್ರಮುಖ ಸ್ವೀಕಾರವನ್ನು ಈ ರೀತಿ ಮಾಡುವುದು

'ನಾನು ಈ ವರ್ಷದ ಅಂತ್ಯದೊಳಗೆ ಅಕ್ಷರಶತ್ರುನಾಗಲು ಹಾಗೂ ಅಕ್ಷರಶತ್ರುವಾದ ನಾನು ಇನ್ನೊಬ್ಬರನ್ನು ಅಕ್ಷರಶತ್ರುವನ್ನಾಗಿ ಮಾಡಿ ಸಮಾಜ ಸೇವೆ ಮಾಡಲು ಕಂಕಣ ಕಟ್ಟುತ್ತೇನೆ'

ವಯಸ್ಕರ ಶಿಕ್ಷಣದಲ್ಲಿ ಉತ್ಸಾಹ ಉಳ್ಳ ವೆಲ್ಲರೂ ಅವರವರ ಸ್ಥಳಗಳಲ್ಲಿ ಯಶಸ್ವಿಯಾಗಿ ಈ ಸಮಾರಂಭವನ್ನು ಆಚರಿಸಬೇಕಾಗಿಯೂ, ರಾತ್ರಿ ವಯಸ್ಕರ ಶಾಲಾ ಉಪಾಧ್ಯಾಯರುಗಳು ಮತ್ತು ಮೇಲ್ವಿಚಾರಕರುಗಳು ಈ ಸಮಾರಂಭದನ್ನು ಯಶಸ್ವಿಯಾಗಿ ಆಚರಿಸಿ ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿಯವರಿಗೆ ವರದಿ ಮಾಡಬೇಕೆಂದೂ ಮೈಸೂರು ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿಯ ಕಾರ್ಯದರ್ಶಿಯವರು ಕೋರಿರುತ್ತಾರೆ

ನಂಜನಗೂಡಿನಲ್ಲಿ

ನಂಜನಗೂಡು ವಿದ್ಯಾ ಪೀಠದಲ್ಲಿ ಈ ಮಾಹೆ ೩೭ ನೇ ತಾರೀಖು ಭಾನುವಾರ ಬೆಳಿಗ್ಗೆ ೧೧-೩೦ ಕ್ಕೆ ಮೈಸೂರು ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿಯವರು ಅಖಿಲ ಭಾರತ ಜನತಾ ಶಿಕ್ಷಣ ದಿನಾಚರಣೆಯನ್ನು ಮೈಸೂರು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನೆರವೇರಿಸುವರು. ಈ ಸಮಾರಂಭಕ್ಕೆ ನಂಜನಗೂಡು ತಾಲ್ಲೂಕಿನ ಎಲ್ಲಾ ಗ್ರಾಮ ಮುಖಂಡರುಗಳೂ ರಾತ್ರಿಶಾಲಾ ಉಪಾಧ್ಯಾಯರುಗಳೂ ವಯಸ್ಕರೂ ಇದೇ ಆಹ್ವಾನವೆಂದು ತಿಳಿದು ಆಯಮಾಡಿಸಬೇಕೆಂದು ಕಾರ್ಯದರ್ಶಿಯವರು ಕೋರಿರುತ್ತಾರೆ

ದೇವಲಾಪುರದಲ್ಲಿ

ಮೈಸೂರು ತಾಲ್ಲೂಕು ಅಮಲ್ದಾರರಾದ ಶ್ರೀ ಎಂ ಆರ್ ನರಸಿಂಗರಾಯರ ಅಧ್ಯಕ್ಷತೆಯಲ್ಲಿ ದೇವಲಾಪುರದಲ್ಲಿ ಮೇಲ್ಕಂಡ ದಿನಾಚರಣೆಯನ್ನು ನಡೆಸಲಾಗುವುದು ಈ ಸಂದರ್ಭದಲ್ಲಿ ಸಂಜೆ ಮೆರವಣಿಗೆ, ಬಹಿರಂಗಸಭೆ ಮುಂತಾದ ಕಾರ್ಯಕ್ರಮಗಳು ಜರುಗುವುವು.

ವುಡ್‌ಲ್ಯಾಂಡ್ಸ್
23-1-48 ರಿಂದ
ಅಪೋಲೊ ವಿಶೇಷ ಮಾಂ
ದ್ವಿ ರಾತ್ರಿ
(ಅಮೋಘ ಹಿಂದಿ ಚಿತ್ರ)
ಪಾತ್ರ — ಸ್ನೇಹ ಪ್ರಭಾ
(ಕರ್ನಾಟಕ ಫಿಲ್ಮ್ಸ್ ರಿಲೀಸ್)

Edited printed and published by A. R. Nagarajan at the Sadhvi Press, D. Subbaraya Shetty Road, Mysore.

ಜಮ್ಮುವಿನಲ್ಲಿ ಶತ್ರುಗಳ ಕಾರ್ಯಾಚರಣೆ

ಪಾಕೀಸ್ತಾನ ಪ್ರದೇಶದಿಂದ ಧಾಳಿಕಾರರು ಜಮ್ಮು ಗಡಿಯನ್ನು ದಾಟಿ ಸಂಸ್ಥಾನದೊಳಕ್ಕೆ ಸುಮಾರು ೨೫ ಮೈಲಿ ದೂರ ಬಂದಿದ್ದರೆಂದೂ, ಇವರುಗಳನ್ನು ಭಾರತ ಸೈನಿಕರು ಹೊಡೆದು ಓಡಿಸಿದರೆಂದೂ ವರದಿಯಾಗಿದೆ ಈ ಪ್ರದೇಶದ ೮ ಹಳ್ಳಿಗಳಿಗೆ ಶತ್ರುಗಳು ಬೆಂಕಿ ಇಟ್ಟು ಓಡಿಹೋದರು. ಭಾರತೀಯ ಸೈನಿಕರು ಕಾಲಲುಗಾಡಿಗೆ ಕಾರ್ಯಾಚರಣೆಯನ್ನು ಬಲವಾಗಿ ನಡೆಸುತ್ತಿದ್ದಾರೆ ನೌಷೇರಾದಲ್ಲೂ ಶತ್ರುಗಳಿಗೆ ಬಹಳ ನಷ್ಟವನ್ನುಂಟು ಮಾಡಿ ೨೫ ಮಂದಿಯನ್ನು ಕೊಲ್ಲಲಾಯಿತೆಂದು ವಾರ್ತೆ ಬಂದಿದೆ

ಮಹಾತ್ಮರಲ್ಲಿ ಕರ್ನಾಟಕದ ನಿಯೋಗ

ಅಖಿಲ ಕರ್ನಾಟಕ ಏಕೀಕರಣದ ಬಗ್ಗೆ ಹಲವು ಮುಖಂಡರು ಮಹಾತ್ಮರಲ್ಲಿ ಮೊನ್ನೆ ನಿಯೋಗ ಹೋಗಿ ಮನವಿಯೊಂದನ್ನು ಸಲ್ಲಿಸಿದರೆಂದು ಗೊತ್ತಾಗಿದೆ ಕರ್ನಾಟಕ ಏಕೀಕರಣದ ಬಗ್ಗೆ ಗಾಂಧೀಜಿಯವರು ಸಹಾನುಭೂತಿಯನ್ನು ವ್ಯಕ್ತ ಪಡಿಸಿದರೆಂದೂ ಹೇಳಲಾಗಿದೆ ನಿಯೋಗದವರು ನಿನ್ನೆ ಕಾಂಗ್ರೆಸ್ ಕಾರ್ಯ ಕಾರೀ ಮಂಡಲಿಗೂ ಸಹ ಒಂದು ಪ್ರಮೇಯವನ್ನು ಸಲ್ಲಿಸಿರುವರು

೪೦,೦೦,೦೦೦ ರೂ. ಗಳ ಜಾನುವಾರು ತಳಿ ಯೋಜನೆ

ಮೈಸೂರು ಸಂಸ್ಥಾನದಲ್ಲಿ ಚಾಮುವಾರು ತಳಿ ಅಭಿವೃದ್ಧಿ ಧಾರಂ ಒಂದನ್ನು ೩೦,೦೦,೦೦೦ ರೂ ವೆಚ್ಚದಲ್ಲಿ ತೆರೆಯುವ ಯೋಜನೆಯು ಭಾರತ ಸರ್ಕಾರದ ಪರಿಶೀಲನೆಯಲ್ಲಿರುವುದೆಂದು ಹೇಳಲಾಗಿದೆ

ಕಾಶ್ಮೀರದಲ್ಲಿ ಪ್ರಜಾಭಿಪ್ರಾಯ ಸಂಗ್ರಹಣೆ

ಕಾಶ್ಮೀರದಲ್ಲಿ ಪ್ರಜಾಭಿಪ್ರಾಯವನ್ನು ಸಂಗ್ರಹಿಸುವ ಬಗ್ಗೆ ಒಂದು ಯೋಜನೆಯನ್ನು ತಯಾರಿಸಲು ವಿಶ್ವ ಭದ್ರತಾ ಸಮಿತಿಯು ಸಮ್ಮತಿಸಿದೆಯೆಂದೂ ಈ ಯೋಜನೆಯು ಇಪ್ಪರಲ್ಲೇ ಸಿದ್ಧವಾಗುವುದೆಂದೂ ಹೇಳಲಾಗಿದೆ.

ಶ್ರೀ ಜಯಚಾಮರಾಜೇಂದ್ರ ಕೋ-ಆಪರೇಟಿವ್ ಸೊಸೈಟ್ಸ್ ಲಿಮಿಟೆಡ್, ಮೈಸೂರು

ಮೇಲ್ಕಂಡ ಸೊಸೈಟಿಯಲ್ಲಿ ೧೯೪೮-೪೯ ನೇ ಸಾಲ್ ಆಫೈರ್ ವರೆಗೆ ನಿಂತಿರುವ ಅವಮಾನಕ್ಕು ನೋಟಲಗಳನ್ನು ಅಯಾಯ ಹಕ್ಕುದಾರರು ಈ ಲಾಗಾಯ್ತು ೩೦-೧-೪೮ ರ ವೇಳಗಾಗಿ ವಾಪಸ್ಸು ಪಡೆದು ತ್ಯಕ್ತರಾಗಿ.

ಅನಂತರ ಬಂದ ಹಕ್ಕು ಬಾಧ್ಯತೆ ಅರ್ಜಿಗಳನ್ನು ಪರಿಶೀಲಿಸಲಾಗುತ್ತೆ. ಮತ್ತು ಹಾಗೆ ವಾಪಸ್ಸಾಗದೆ ನಿಂತ ನೋಟಲುಗಳನ್ನು ಜನರಲ್ ಬಾಡಿಯವರ ತೀರ್ಮಾನದಂತೆ ಸೊಸೈಟಿಯ ಫಂಡಿಗೆ ವರ್ಗಾಯಿಸಲಾಗುತ್ತೆ

ಬೋರ್ಡಿನವರ ಆಜ್ಞೆಯ ಮೇರೆ,
ಕೆ. ವಿ. ವೆಂಕಟಸುಬ್ಬಯ್ಯ,
ಗೌರವ ಕಾರ್ಯದರ್ಶಿ

'ಚಂದ್ರಹಾಸ' ಚಿತ್ರ

ಸುಪ್ರಸಿದ್ಧ ಚಲನ ಚಿತ್ರ ದಿಗ್ದರ್ಶಿ ಶ್ರೀ ಶಾಂತೇಶ ನಾಟೇಲರು ನಿರ್ದೇಶಿಸಿರುವ 'ಚಂದ್ರಹಾಸ' ಕನ್ನಡ ಚಿತ್ರದ ಆರಂಭೋತ್ಸವವು ನಿನ್ನೆ ದೇವಿ ಟಾಕೀಸಿನಲ್ಲಿ ವೈಭವದಿಂದ ಗಿತು ಅನೇಕ ೨೫ ವರ್ಷ ಪ್ರಮುಖ ಪ್ರೇಕ್ಷಕರೂ ರಾಷ್ಟ್ರನಾಯಕರಾಗಿದ್ದರು ದರ್ಶಕ ಕೆ ಬಸವರಾಜ ಅರಸಿನಕೆರೆ ಹೃದುತ್ತು ಆದರ ನಿರ್ಮಾಕರಾದ ಯವನ್ನು ಪೂಡಿಕೊಟ್ಟು ಚಿತ್ರದ ಭೋತ್ಸವವನ್ನು ನೆರವೇರಿಸುವಂತೆ ರಿಕಾ ಸಚಿವರಾದ ಶ್ರೀ ಹೆಚ್ ಸಿ ದಾನವರನ್ನು ಕೋರಿದರು

ಸಚಿವರು ಕಾರ್ಯವನ್ನು ಅಗುಸಿಸಣ್ಣ ಭಾಷಣವನ್ನು ಮಾಡಿ ಜನಾಂಗದಲ್ಲಿ ಪೂರ್ವದ ಸಂಸ್ಕೃತಿ ಸಮತ್ತು ಕಲೆಗಳಿಗೆ ಇರುವ ಆಭರುವನ್ನು ವಿವರಿಸಿ 'ಚಂದ್ರಹಾಸ' ಚಿತ್ರಗಳಿಗೆ ವಿಶೇಷ ಪ್ರೋತ್ಸಾಹವು ಕುಪುದೆಂದು ಹೇಳಿದರು

ಶ್ರೀ ಶಾಂತೇಶ ನಾಟೇಲರು ಮಾಡಿ ಕನ್ನಡ ನಾಡಿನ ಏಕೀಕರಣಕ್ಕೆ ಚಲನ ಚಿತ್ರಗಳೂ ಸಹಕಾರಿಗಳೆಂನ್ನು ವಿವರಿಸಿ ತಾವು ತಯಾರಿಸುವ ಚಿತ್ರಕ್ಕೂ ಇನ್ನು ಮುಂದೆ ತಯಾರಿಸುವ ಚಿತ್ರಗಳಿಗೂ ಕನ್ನಡಿಗರು ಹಾಗಾಗಿ ನೆರವು ನೀಡಬೇಕೆಂದು ಬೇಡಿ ಧನ್ಯವಾದಗಳೊಡನೆ ಕಾರ್ಯಾಂಭವು ಯಿತು

ಎಸ್. ಎ. ಪಂಡಿ
ಅಂಡ್ ಸನ್ಸ್ ರನ್ನರ್ಸ್

೧. ಪಂಚಾಮೃತ —ಮಲೆನಾಡಿನ ಗೆಡ್ಡೆಗಳಿಗೆ ರಾಮಬಾಣ, ಸೀಸೆ ೨

೨ ವಾಸಾದಿ ಪಾಕ, ಕ್ಷಾಸ ಕಾಸ ಲೇಹ್ಯ — ದಮ್ಮಿನ ವ್ಯಾಧಿಗಳಿಗೆ ಸಂಜೀವನ, ೨ ರಿಂದ ರೂ ೩-೦

೩. ದ್ರಾಕ್ಷಾದಿಪಾಕ, ಪಂಚಾಮೃತ ಲವಣ—ಪಿತ್ತಾಜೀರ್ಣಗಳಿಗೆ ಅನುಪಾನ ಡಾಕ್ಟರು, ೨ ರಿಂದ ರೂ. ೨೧-೦

೪ ಸಂಜೀವಿನಿ ತೈಲ—ಎಲ್ಲಾ ತೈಲಗಳಿಗೂ ಅಮೃತ ಸಂಜೀವನ ಸೀಸೆ ರೂ ೨-೪

೫. ಸುತ್ಶಕಾರಿ ಕೂಡ ಆಗಿರುವ ಬಾಲಸಂಜೀವಿನಿ- ಸೀಸೆ ೬ ಆಣೆ, ಎಳೆ ಎಸ್ಳೇ- ಸೀಸೆ ೧೦ ಆಣೆ. ಅದಕ್ಕಿಂದ (ಪ್ರತಿ ಸೀಸೆ ೧ ರೂ ; ಇವು ನಾಲ್ಕೂ ಬಾಲಮಿತ್ರನೆಂಬ ಮಕ್ಕಳ ಆರೋಗ್ಯವನ್ನು ಕಾಪಾಡುತ್ತವೆ.

ವಿಳಾಸ:-ಮೈಸೂರು ಆಯುರ್ವೇದಿಕ ಫಾರ್ಮಸಿ,
೯೦ ಲ್ಯಾನ್ಸ್‌ಡೌನ್ ಬಜಾರ್
ಮೈಸೂರು.

ಬೆಂಗಳೂರು ಏಜೆಂಟರು —
ಆರ್ಯನ್ ಮೆಡಿಕಲ್ ಮತ್ತು ಜನರಲ್ ಸ್ಟೋರ್ಸ್,
ಚಿಕ್ಕಪೇಟೆ, ಬೆಂಗಳೂರು.

ಸಂಪುಟ ೬] ಮಂಗಳವಾರ ೨೭-೧-೪೨ [ಸಂಚಿಕೆ ೧೫೬

ಗಾಂಧಿ, ಜಿನ್ನಾ ಬಳಿಗೆ ಮೈ॥ಮುಸ್ಲಿಂ ನಿಯೋಗ

ಗಾಂಧಿ, ಜಿನ್ನಾರವರ ಬಳಿಗೆ ಮೈಸೂರು ಮುಸ್ಲಿಂ ನಿಯೋಗ

ಮೀರ್ಜಾನೂರ್ ಹುಸೇನರ ತಂತಿ

ಮೈಸೂರು ೨೭

ರಾಜಧಾನಿಯು ಪಕ್ಕಲಲ್ಲೂ, ಪ್ರಾ॥ ಪ್ರ॥ ಸಭಾ ಸದಸ್ಯರೂ ಆದ ಮಿ॥ಮಿರ್ಜಾನೂರ್ ಹುಸೇನರವರು ಮಹಾತ್ಮಾ ಗಾಂಧಿಯವರಿಗೆ ಒಂದು ತಂತಿಯನ್ನು ಕಳುಹಿಸಿ ಈ ರೀತಿ ಪ್ರಾರ್ಥಿಸಿದ್ದಾರೆ ತಾವು ಪ್ರಾರ್ಥನಾ ಸಭೆಯಲ್ಲಿ ಮೈಸೂರಿನ ಗಲಭೆಯನ್ನು ಪ್ರಸ್ತಾಪಿಸಿರುವುದಕ್ಕಾಗಿ ಇಷ್ಟಿನ ಮುಸ್ಲಿಮರು ತಮಗೆ ಕೃತಜ್ಞರಾಗಿರುತ್ತಾರೆ ಮೈಸೂರು ಸರ್ಕಾರದವರು ಗಲಭೆಗೆ ಬಗ್ಗೆ ಹೊರಡಿಸಿರುವ ಪ್ರಕಟಣೆಯಿಂದ ಸಂಸ್ಥಾನದ ಮುಸ್ಲಿಮರು ನಿರ್ದೋಷಿಗಳೆಂಬುದು ವ್ಯಕ್ತವಾಗುವುದು. ಮುಸ್ಲಿಮರು ಗಾಬರಿಗೊಂಡು ಸಂಸ್ಥಾನದಿಂದ ಹೊರಕ್ಕೆ ನಲಸೆ ಹೋಗುತ್ತಿರುವುದನ್ನು ಕಡೆಗಟ್ಟಬೇಕು ಒಟ್ಟಿನ ವಿದ್ಯಮಾನಗಳ ಅರಿವನ್ನು ತಮಗೆ ಉಂಟು ಮಾಡಿಕೊಡಲು ಮಲವಾಗಿ ತಾವು ಇಷ್ಟಗಿ ದಯಮಾಡಿಸಬೇಕೆಂದೂ, ಅಥವಾ ತನ್ನಲ್ಲಿ ನಿಯೋಗ ಬಲು ಅಮಾಕ ಕೊಡಬೇಕೆಂದೂ ಪ್ರಾರ್ಥಿಸಿದ್ದಾರೆ

ಮಿ॥ ಮಿರ್ಜಾನೂರ್ ಹುಸೇನರವರು ಮಿ॥ ಜಿನ್ನಾರವರಿಗೆ ಮಹತ್ವದ ತಂತಿ ಕಳುಹಿಸಿ ಈ ರೀತಿ ತಿಳಿಸಿರುತ್ತಾರೆ — ಪಾಕಿಸ್ತಾನದಲ್ಲಿ ಅಲ್ಪ ಸಂಖ್ಯಾಕರು ಶಾಂತಿಯಿಂದಲೂ ಮತ್ತು ಧೈರ್ಯದಿಂದಲೂ ಇರುವಂತೆ ಭರವಸೆ ಕೊಡಬೇಕೆಂದು ಭಾರತದ ಮುಸ್ಲಿಮರು ತಮ್ಮನ್ನು ಪ್ರಾರ್ಥಿಸುತ್ತಾರೆ ಪಾಕಿಸ್ತಾನದಲ್ಲಿ ನಡೆಯುತ್ತಿರುವ ಘಟನೆಗಳ ಪ್ರತಿಕ್ರಿಯೆಯು ಭಾರತದಲ್ಲಿ ದುಸ್ಪರಿಣಾಮಗಳನ್ನುಂಟು ಮಾಡಿದೆ. ಉಭಯ ದೊಮಿನಿಯನ್ಸುಗಳವರಿಗೂ ಕ್ಷಾಮನೋದಯವನ್ನು ಉಂಟು ಮಾಡಬಲ್ಲ ವಿಶ್ವಾಸೋದಯವನ್ನು ಉಂಟು ಮಾಡಲು ಈ ಸಮಯವೇ ಯೋಗ್ಯವಾದ ಸಮಯವೆಂದು ಭಾವಿಸಿ ಈ ಕೆಲಸವನ್ನು ನೀವೇ ಕೈಗೆತ್ತಿಕೊಳ್ಳಬೇಕೆಂದು ಬೇಡಿಕೊಳ್ಳುತ್ತೇವೆ

ಮಹಾತ್ಮಾ ಗಾಂಧಿಯವರ ಬಳಿಗೂ ಮಿ॥ ಜಿನ್ನಾರವರ ಬಳಿಗೂ ಮೈಸೂರು ಮುಸ್ಲಿಮರ ನಿಯೋಗವೊಂದನ್ನು ತಾವೆ ಕರೆದುಕೊಂಡು ಹೋಗಲು ಸಿದ್ಧರಿರುವುದಾಗಿ ಮಿ॥ ಮಿರ್ಜಾ ಹುಸೇನರವರು ತಿಳಿಸಿರುತ್ತಾರೆ

ಫುಟ್‌ಬಾಲ್ ಪಂದ್ಯ

ನಿನ್ನೆ ನಡೆದ ದಸರಾ ಫುಟ್‌ಬಾಲ್ ಸಂದ್ಯದಲ್ಲಿ ಮೈಸೂರು ಆರ್ಮ್ಸ್ ಟೀಮಿನವರೂ ಮೈಸೂರು ಮಿಲಿಟರಿ ಸ್ಪೋರ್ಟ್ಸ್ ಬೋರ್ಡಿನವರೂ ಆಡಿದರು ಮೊದಲನೆ ಗೋಲನ್ನು ಮೈಸೂರು ಆರ್ಮ್ಸ್ ಟೀಮಿನವರು ಹಾಕಿದರು ಆಟ ಮುಗಿಯುವ ಸಮಯಕ್ಕೆ ಸರಿಯಾಗಿ ಮೈಸೂರು ಮಿಲಿಟರಿ ಸ್ಪೋರ್ಟ್ಸ್ ಬೋರ್ಡಿನವರು ಒಂದು ಗೋಲನ್ನು ಹಾಕಿದರು ಆಟ ಸಮವಾಯಿತು

ಸಂಗೀತ ಕಛೇರಿ

ಮೈಸೂರು ೨೭

ಈ ದಿನ ರಾತ್ರಿ ೯ ಗಂಟೆಗೆ ಡಿ ಮುಖ್ಯಯ್ಯನ ರಸ್ತೆಯಲ್ಲಿರುವ ಸಾರ್ವಜನಿಕ ಆಫೀಸ್ ಮಹಡಿಯ ಮೇಲೆ ಹುಣಿಮೆ ಪ್ರಯುಕ್ತ ಸಂಗೀತ ವಿದ್ವಾನ್ ಲಿಂಗಯ್ಯನವರ ಮಕ್ಕಳು ಅವರ ಪುತ್ರರಾದ ಶ್ರೀ ಸಿ ಆರ್. ಲಕ್ಷ್ಮೀನಾರಾಯಣಾಚಾರ್ಯರ ಸಂಗೀತವು ಉಚಿತ ಪಕ್ಕವಾದ್ಯಗಳೊಡನೆ ನಡೆಯಲಿರುತ್ತದೆ ಸರ್ವರಿಗೂ ಸ್ವಾಗತವಿದೆ.

ರಮಾನಂದ ತೀರ್ಥರ ದಸ್ತಗಿರಿ

ಹೈದರಾಬಾದ್ ಸಂಸ್ಥಾನದಲ್ಲಿ ಜಾರಿಯಲ್ಲಿದ್ದ ಶ್ರತಬಂಧಾಜ್ಞೆಯನ್ನು ಉಲ್ಲಂಘಿಸಿದರೆಂಬ ಕಾರಣದ ಮೇಲೆ ನಿನ್ನೆ ಮಧ್ಯಾಹ್ನ ಪೊಲೀಸರು ಕಾಂಗ್ರೆಸ್ ಅಧ್ಯಕ್ಷ ಶ್ರೀಗಳಾದ ರಮಾನಂದ ತೀರ್ಥರವರನ್ನೂ ಮತ್ತು ಕಾಂಗ್ರೆಸ್ ಮುಖಂಡರುಗಳಾದ ಶ್ರೀ ಕಾಶೀನಾಥ ವೈದ್ಯರವರನ್ನೂ ದಸ್ತಗಿರಿ ಮಾಡಿರುತ್ತಾರೆ

ತ್ಯಾಗರಾಜ ಜಯಂತಿ

ತಾ॥ ೧೩-೨ ಳಿಂದ ನೇ ಗುರುವಾರದವರೆಗೆ ಸಾಯಂಕಾಲ ೫-೩೦ ಗಂಟೆಗೆ ಶ್ರೀ ತ್ಯಾಗರಾಜ ಗಾಯನ ಸಭೆಯವರು ಮೈಸೂರು ಟೌನ್‌ಹಾಲಿನಲ್ಲಿ ಶ್ರೀ ತ್ಯಾಗರಾಜ ಸ್ವಾಮಿಗಳವರ ೧೧೧ ನೇ ಜಯಂತಿ ಮಹೋತ್ಸವವನ್ನು ಆಚರಿಸುವರು. ಗೃಹ ಮಂತ್ರಿಗಳಾದ ಶ್ರೀ ಟಿ. ಪಿ ಯು ಸ್ವರವರು ಅಧ್ಯಕ್ಷತೆ ವಹಿಸುವರು. ಇದರಲ್ಲಿ ಭಾಗ ವಹಿಸುವ ಸಂಗೀತ ವಿದ್ವಾಂಸರುಗಳು ನಾಲ್ಕು ದಿವಸ ಮುಂಚಿತವಾಗಿ ತಿಳಿಸಬೇಕೆಂದು ಅಧ್ಯಕ್ಷರಾದ ಶ್ರೀ ರಾಮಚಂದ್ರ ಭಾಗವತರವರು ಕೋರಿರುತ್ತಾರೆ.

ರಾಜಧಾನಿಯು ನೂರಡಿ ರಸ್ತೆ ಕಾಶೀಪತಿ ಲಾಯದಲ್ಲಿರುವ ಮೈಸೂರು ಪ್ರದರ್ಶಾರದ ಶ್ರೀವರಲಕ್ಷ್ಮಿ ಸಂಗೀತ ವಿದ್ಯಾ ಮಂದಿರ ನಲ್ಲಿ ಇದೇ ಮಾಹೆ ತಾ॥ ೩೦ ಮತ್ತು ೩೧ ನೇ ಶುಕ್ರವಾರ ಮತ್ತು ಶನಿವಾರ ಸಂಜೆ ೬ ಗಂಟೆಗೆ ಶ್ರೀ ತ್ಯಾಗರಾಜರ ಜಯಂತಿ ಉತ್ಸವವನ್ನು ನೆರವೇರಿಸಲು ಏರ್ಪಡಿಸಿರುತ್ತೆ. ತಾ॥ ೩೦ ನೇ ಶುಕ್ರವಾರ ಮಂದಿರದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದಲೂ, ತಾ॥ ೩೧ ನೇ ಶನಿವಾರ ಸ್ಥಳ ಪದ್ಧತಿಗಳ ವಿದ್ವಾಂಸರುಗಳಿಂದಲೂ ಸಂಗೀತ ಕಛೇರಿಗಳು ಮತ್ತು ಭಾಗವತ ನಡೆಯಲಿರುತ್ತೆ.

ಚಿದಂಬರ ಸಪ್ತಾಹ

ಮೈಸೂರು ೨೭

ಬೆಳಗಾಂ ಜಿಲ್ಲಾ ಮುರಗೋಡು ಕ್ಷೇತ್ರದಲ್ಲಿ ಜನಿಸಿದ ಶ್ರೀ ಚಿದಂಬರದೀಕ್ಷಿತರವರು ಲೋಕ ಕ್ಷೇಮಕ್ಕಾಗಿ ಅನೇಕ ಯಜ್ಞ ಯಾಗಾದಿಗಳನ್ನು ಮಾಡಿ ಲೋಕ ವಿಖ್ಯಾತರಾಗಿದ್ದರು. ಆ ಮಹನೀಯರ ಮಂದಿರಕ್ಕೆ ಸೇರಿದ ಶ್ರೀ ಬಾಪೂದೀಕ್ಷಿತರೂ ಅವರ ರೀತಿಯಲ್ಲಿ ಜಗತ್ಕಲ್ಯಾಣ ಕಾರ್ಯದಲ್ಲಿ ನಿರತರಾಗಿ ದೈವೀಶಕ್ತಿಯಿಂದ ಆಮಂಡವಾಗಿ ಏಳು ದಿವಸಗಳು ನಿರ್ವ್ಯಾಹವಾಗಿ ರಚಿಸಲಾಗಿರುವ ಮಹಾಶಕ್ತಿಗಳ ಸಂಯುಕ್ತತೆಯಿಂದ ಏಳು ದಿವಸದಲ್ಲಿ ಕೇಳಿದ ಶ್ರೀ ಚಿದಂಬರ ಭಜನ ಕಾರ್ಯವನ್ನು ನಮ್ಮ ಮೈಸೂರು ದೇಶದ ಸೇವಾ ಜಿಲ್ಲೆಗಳಲ್ಲಿ ಈವರೆಗೆ ಎಷ್ಟು ಕಡೆಯಲ್ಲಿ ಯಶಸ್ವಿಯಾಗಿ ನಡೆಸಿ, ಪ್ರಕೃತ ಸಭೆಯ ಸಪ್ತಾಹವನ್ನು ನಮ್ಮ ಮೈಸೂರು ರಾಜಧಾನಿಯ ಗಾನವಿಶಾರದ ಬಿದಿಂ ಸೈಕ್ಲಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮುಂದಿನದ್ದಲ್ಲಿ ಇದೇ ಪುಣ್ಯ ಅಹುಳಿ ೨೮ (ತಾ॥ ೫-೨ ಳಿ) ಗುರುವಾರ ಸಂಜೆಯಿಂದ ಅನುಷ್ಠಾನಕ್ಕೆ ಪುಂಡಿಸಿ ಏಳು ದಿವಸಗಳು ಅಮಂಡವಾಗಿ ಶ್ರೀ ಚಿದಂಬರ ಭಜನ ಸಪ್ತಾಹವನ್ನು ನೆರವೇರಿಸುವರಿದ್ದಾರೆ. ಆಸ್ತಿಕರಾದ ಸಮಸ್ತ ಮಹಾಜನ ನಿರ್ವಿಕಲ್ಪವೋಗದಲ್ಲಿರುವ ನುವಂತೆ ಹಿಮರ ಸಂದರ್ಶನ ಪಡಿಸಿ ಪ್ರಾಣಿಗಳಾಗಬೇಕೆಂದು ಪ್ರಾರ್ಥನೆ

ಯಾದವ ಯುವಜನ ಸಂಘ

ಟೌನ್‌ಹಾಲ್ ಸಂಘದವರು ರಾಜಧಾನಿ ಟೌನ್‌ಹಾಲಿನಲ್ಲಿ ಬಾ ಅಗ್ರಹಾರವ ೧೫ಲ ನೇ ನವೆಂಬರ್ಯಳ್ಳ ಮೊನೆ ದಿನ ಉಚಿತ ವಾಚನಮಾಲೋಪನ್ನು ಶ್ರೀ ವಿ ಪೆರುಮಾಳ್ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಆರಂಭಿಸಿ

ಹೋಟೆಲ್ ಕೆಲಸಗಾರರ ಸಭೆ

ಇನ್ನೆ ದಿನ ಕಾಂಗ್ರೆಸ್ ಕಛೇರಿಯಲ್ಲಿ ಹೋಟೆಲ್ ಕೆಲಸಗಾರರ ಸಂಘದ ಸಾರ್ವಜನಿಕ ಸಭೆಯು ಶ್ರೀ ಕೆ ಸುಬ್ಬರಾಯಂರವರ ಪ್ರಧಾನತೆಯಲ್ಲಿ ನೇರವೇರಿತ್ತು. ಶ್ರೀಗಳಾ ಶ್ರೀನಿವಾಸರಾವ್, ಕೆ ವಿಶ್ವನಾಥ್, ರಾಜಾರಾವ್‌ಪ್ಪಾ ಭಾಷಣ ಮಾಡಿದರು ಪ್ರಜಾಪ್ರತಿನಿಧಿಸಭೆಯಲ್ಲಿ ಪಾಸಾದ ಅಸ್ಪೃಶ್ಯತಾ ಕಾನೂನನ್ನು ಒರವಿರಿಂದ ಜಾರಿಗೆ ತರಬೇಕೆಂದು ಪರನ್ನು ಪ್ರಾರ್ಥಿಸುವ ವತ್ತು ಪ್ರತಿಗಳನ್ನು ತಾ॥ ಕೆಲಸಗಾರರಿಗೆ ಸಂಸ್ಥೆ ಕೊಡಬೇಕೆಂದು ಹೋಟೆಲ್ ಕೆಲಸಗಾರನ್ನು ಕೋರುವ ನಿರ್ಣಯ ಮಾಡಲ್ಪಟ್ಟಿತು

ಪಿ ಚೆಂಚಪ್ಪ ಮೋಟಾರು

ತನ್ನಿನಲ್ಲಿ ನಿಂದು ಚಕ್ರಗಳಿಂದ ಓಡಿಸುವಿಕೆಯನ್ನು ತಯಾರಿಸಲು ಪ್ರಯತ್ನಿಸುತ್ತಿರುವೆನೆಂದು ಹೇಳಿದ ಈ ಕಾರುಗಳು ಸಣ್ಣ ಜೋಡೆಗೆ ಯಿದ್ದು ಒಂದು ಮೋಟಾರು ಸೈಕಲ್ ಹಾಗು ಮಾಡಿಸಿದ್ದೇವೆ-ಎಂದು ವರದಿ

ಪಿಶಾಚಿಯ ಮನುಷ್ಯ

ಬಾಣಾವರದ ಸಮೀಪದಲ್ಲಿ ಒಬ್ಬಳು ಹೆಂಗಸಿಗೆ ಪಿಶಾಚಿಯ ಗೀಳು ಹತ್ತಿಕೊಂಡಿದ್ದು ಆಕೆಯ ಮೈಮೇಲೆ ಒಬ್ಬ ಮನುಷ್ಯನೊಬ್ಬನನ್ನು ನೋಡಿದೆ. ಆ ಪಿಶಾಚಿಯು ತನ್ನ ಮನೆಯ ಜಾಂಬಿನಲ್ಲಿ ಒಂದು ಎಮ್ಮೆಯನ್ನು ಕೊಂದು ಹಾಕಿದೆ ಎಂದು ಹೇಳಿ ಕೊಂಡಿದ್ದಳಂತೆ ವೇಗವಾಗಿ ಹರಿಯುವ ಹೊಳೆಯಲ್ಲಿ ಈಜಿ ದಡ ಸೇರಿದ್ದಳಂತೆ ಆಕೆಯ ಮೈಮೇಲೆ ಬಂದಿರುವ ಪಿಶಾಚಿಯು ಆಕೆಯ ಗಂಡನ ಸೋದರಿಯ ಗಂಡನೆಂದು ಹೇಳಿಕೊಂಡಿದೆಯಂತೆ ಆಕೆಯ ಗಂಡನ ಸೋದರಿಯ ಗಂಡನು ಇತ್ತೀಚೆಗೆ ಸತ್ತು ಹೋಗಿರುವನಂತೆ ಆಕೆಯ ಗಂಡನ ಸೋದರಿಯ ಗಂಡನು ಸತ್ತು ಹೋಗಿರುವ ಸಂಗತಿಯು ಆಕೆಗೆ ತಿಳಿದಿರಲಿಲ್ಲವಂತೆ ಆಕೆಯ ಗಂಡನ ಸೋದರಿಯ ಗಂಡನು ಸತ್ತು ಹೋಗಿರುವ ಸಂಗತಿಯು ಆಕೆಗೆ ತಿಳಿದಿರಲಿಲ್ಲವಂತೆ ಆಕೆಯ ಗಂಡನ ಸೋದರಿಯ ಗಂಡನು ಸತ್ತು ಹೋಗಿರುವ ಸಂಗತಿಯು ಆಕೆಗೆ ತಿಳಿದಿರಲಿಲ್ಲವಂತೆ

ಮಹಾಮನಃ ಸಂಗ್ರಹಣೆ

ಮೈಸೂರು ೨೭

ಆಹಾರದ ಸಮಸ್ಯೆ ವಿಷಯದಲ್ಲಿ ಜನಾಭಿಪ್ರಾಯ ಸಂಗ್ರಹಿಸಲು ಎಲ್ಲ ಪೋಷ್ಟ್ ಗಳಲ್ಲೂ ಮತದಾನ ಪತ್ರ ಸಿಗುವಂತೆ ಮಾಡಲಾಗಿದೆ. ೧೮ ವರ್ಷ ವಯಸ್ಸಿನ ಮೇಲಿನವರು ಆ ಪತ್ರಗಳಲ್ಲಿ ತಮ್ಮ ಸ್ವತಂತ್ರ ಅಭಿಪ್ರಾಯವನ್ನು ಸೂಚಿಸಬಹುದು ಮತದಾನ ಪತ್ರದಲ್ಲಿ ಕೆಲವು ಸೂಚನೆಗಳನ್ನು ಕೊಡಲಾಗಿದೆ ಹೆಚ್ಚಿಗೆ ವಿವರ ಬೇಕಾದರೆ ವಿಜಾಣಿ ಹೈಸ್ಕೂಲಿನ ಬಳಿ ಇರುವ "ಜೀವನ ಪುಸ್ತಕಾಲಯ" ದಲ್ಲಿ ಪ್ರತಿ ದಿನ ಸಂಜೆ ೪ ಗಂಟೆಯಿಂದ ೬-೩೦ ಗಂಟೆ ವರೆಗೆ ಕಾರ್ಯಾಲಯದ ಶ್ರೀ ನಾರಾಯಣಸ್ವಾಮಿಯವರನ್ನು ವಿಚಾರಿಸಬಹುದು ಮತದಾನ ತಾ॥ ೨೯-೧-೪೨ ರಿಂದ ಪ್ರಾರಂಭವಾಗಿದೆ. ಕೊನೆಯ ದಿನ ೧-೨-೪೨-ಎಂಬುದಾಗಿ ಸಂಘಾಲಯದ ಕಾರ್ಯದರ್ಶಿಗಳು ತಿಳಿಸಿರುತ್ತಾರೆ

ಹೈದರಾಬಾದ್ ಮಂತ್ರಿಯ ರಾಜೀನಾಮೆ

ಹೈದರಾಬಾದಿನ ಇತ್ತೀಚಾದುಲ್ ಮುಸ್ಲಿಮೀನ್ ಸಂಸ್ಥೆಯವರಿಗೆ ಪಾಸಾಗಿ ಸೈನ್ಯವನ್ನು ಇಟ್ಟುಕೊಳ್ಳಲು ಅನುಮತಿ ಕೊಟ್ಟಿರುವುದನ್ನು ಪ್ರತಿಭಟಿಸಿ ಅಲ್ಲಿನ ಪಾಸಾಗಿ ಸಚಿವರಾದ ಶ್ರೀರಾಮಾಚಾರ್ಯರು ತಮ್ಮ ಪದವಿಗೆ ರಾಜೀನಾಮೆ ಇತ್ತಿದ್ದಾರೆ ಸಂಸ್ಥಾನದಲ್ಲಿ ಯಾವ ಪಾಸಾಗೀ ಸಂಸ್ಥೆಯಾದರೂ ಸ್ವಂತವಾಗಿ ಸೈನ್ಯವನ್ನು ಇಟ್ಟುಕೊಳ್ಳಲು ಅನುಮತಿ ಕೊಡಬಾರದೆಂದು ಅವರು ಸೂಚಿಸಿದ್ದಾರೆ

ಗೋವಧೆಗೆ ಬಹಿಷ್ಕಾರ

ಇನ್ನು ಮುಂದೆ ಲಕ್ನೋವಿನ ಪೌರಪಥೆಯ ಪರಿಹದ್ದಿನಲ್ಲಿಲ್ಲಾ ಗೋವಧೆಯನ್ನು ಮಾಡಕೂಡದೆಂದು ಅಲ್ಲಿನ ಪೌರಪಥೆಯವರು ನಿರ್ಣಯಿಸಿ ಆಜ್ಞೆಯೊಂದನ್ನು ಹೊರಡಿಸಿದ್ದಾರೆ.

ಪೊಲೀಸರ ಸಹಾಯದಿಂದ ಫಸಲು ಕಟಾವು

ತಿರುಚನಾಪಳ್ಳಿ ಜಿಲ್ಲೆಯ ಅಲ್ಲೂರು ಗ್ರಾಮದಲ್ಲಿ ಜಮೀನ್ದಾರರಿಗೂ ವ್ಯವಸಾಯಗಾರರಿಗೂ ಫಸಲಿನ ವಿಚಾರದಲ್ಲಿ ಉಂಟಾದ ಭಿನ್ನಭಾವದಿಂದ ರೈತರು ಫಸಲಿನ ಕಟಾವನ್ನು ಮಾಡದೆ ಬಿಟ್ಟಿದ್ದರಿಂದ ನಿಂತರು ಪೊಲೀಸಿನವರ ಸಹಾಯದಿಂದ ಹೊರಗಿನ ರೈತರನ್ನು ಕರೆಸಿ ಫಸಲಿನ ಕಟಾವನ್ನು ಮಾಡಲಾಗುತ್ತಿದೆಯೆಂದು ಗೊತ್ತಾಗಿದೆ

ಪರಾಣರ ಪಲಾಯನ

ರಾಜಪುಟಾಣ ಸಂಸ್ಥಾನವಾದ ಜಸಲ್ಮೀರಿನಿಳಕ್ಕೆ ಮಗ್ಗಿದ್ದ ವರಾಣ ಧಾಳಕಾರರನ್ನು ಬಿಕನೀರ್ ಮತ್ತು ಜೋಧ್‌ಪುರ್ ಸಂಸ್ಥಾನಗಳ ಸೈನಿಗಳು ಅಟ್ಟಿಸಿಕೊಂಡು ಹೋದುವೆಂದೂ, ಅವುಗಳನ್ನು ಕಂಡೊಡನೆಯೇ ಧಾಳಕಾರರು ಪರಾಯಣ ಮಾಡಿರುವುದಾಗಿ ವರದಿಯಾಗಿದೆ

ಸಂಜನಗೂಡು ತಾ॥ ಸಮ್ಮೇಳನ

ಈ ತಿಂಗಳು ೩೦ ನೇ ತಾ॥ ಮಿತ್ರವಾರ ಮಧ್ಯಾಹ್ನ ೧ ಗಂಟೆಗೆ ಸಂಜನಗೂಡು ದಳವಾಯಿ ಯವರ ಕಲ್ಯಾಣದಲ್ಲಿ ತಾಲ್ಲೂಕು ಸಮ್ಮೇಳನವು ನಡೆಯುವುದು ಪೌರಪಥೆಯ ಪ್ರಮುಖರಾದ ಶ್ರೀ ಬಿ ಎ ಎಂ ಅನಂತ್ ಅವರು ಅಧ್ಯಕ್ಷರಾಗಿ [illegible]

ಮಹಾಜನ ಹೈಸ್ಕೂಲಿನ ವಾರ್ಷಿಕೋತ್ಸವ

ಮೈಸೂರು ೨೭

ವಾಣೀವಿಲಾಸ ಪುರಭವ್ಯರುವ ಮಹಾಜನ ಕೈ್ಗಿಲಿನ ವಾರ್ಷಿಕೋತ್ಸವವು ಮೊನ್ನೆ ಸಂ.೪ ನಿಗೆ ವೈಭವದಿಂದ ಆಚರಿಸಲ್ಪಟ್ಟಿತು. ಹಣ ಕಾಸಿನ ಮಂತ್ರಿಗಳಾದ ಶ್ರೀ ಹೆಚ್ ಸಿ ದಾಸಪ್ಪನವರು ಮೊನ್ನೆಯ ದಿನವೂ ಪೌರಧಾತ್ಯರ್ವರಿಂದ ಶ್ರೀ ವಿ ಎಸ್ ಹಿರಣ್ಣಯ್ಯನವರು ನಿನ್ನೆ ಹೊಂ ಅಗ್ರಾಸನವನ್ನು ವಹಿಸಿದ್ದರು.

ಶ್ರೀ ದಾಸಪ್ಪನವರು ಭಾಷಣ ಮಾಡಿ ಹಿಂದೆ ನಮ್ಮ ದೇಶದಲ್ಲಿ ನಡೆದುಬಂದಿದ್ದ ತ್ರಿದ್ವ ಗುರುಕುಲಶಿಕ್ಷಣಕ್ರಮವನ್ನು ವಿವರಿಸಿದರು. ನಮ್ಮ ದೇಶದ ಸಂಸ್ಕೃತಿ ಕಲೆ, ಉದ್ಯೋಗ ಮುಂತಾದುವುಗಳ ಅಭಿವೃದ್ಧಿಗೆ ವಿದ್ಯೆಯು ಸಹಕಾರಿಯಾಗಿರಬೇಕೆಂದು ಸೂಚಿಸಿದರು. ರಾಷ್ಟ್ರೀಯ ಭಾವನೆಯು ಬೇವಸಗೆಯಾಗಿ ವಿದ್ಯಾರ್ಥಿಸಮೂಹದ ಹೆಗ್ಗುರುತಾಗಿರಬೇಕೆಂದು ತಿಳಿಸಿದರು. ವಿದ್ಯೆಯೆಂದರೆ ಜೀವನೋಪಾಯದ ಮಾರ್ಗವನ್ನೂ ಸಹ ವಿದ್ಯಾರ್ಥಿಗಳಿಗೆ ಅಲಿಸುವುದು ಅಗತ್ಯವೆಂದು ಅಭಿಪ್ರಾಯ ಪಟ್ಟರು

ಶ್ರೀ [illegible] ಶಾಲೆಯು ಉತ್ತಮ ಸ್ಥಿತಿಯಲ್ಲಿ ನಡೆಯುತ್ತಿರುವುದಕ್ಕಾಗಿ ಮಾಜಿ ವಿದ್ಯಾರ್ಥಿಗಳ ಪ್ರಯತ್ನವು ಶ್ಲಾಘನೀಯವೆಂದೂ ಸಾರ್ವಜನಿಕರೂ ಇದಕ್ಕಾಗಿ ಸಹಾಯ ನೀಡಬೇಕೆಂದು ಕೋರಿದರು.

ಪ್ರತಿಭೆಯು ಮತ್ತು ಮೊನ ವಿದ್ಯಾರ್ಥಿಗಳು ಭಾಷಣ ಮಾಡಿ ನಮ್ಮ ದೇಶದಲ್ಲಿ ವಿದ್ಯಾ ಸ್ಥಾಪನೆಯಿಂದ ಗಳಿಸಲ ತೀರ್ಯಾಸ್ಪಾಧನೆಗಳನ್ನು ಎಂಬುಗಳೆಂದು ಎಳ್ಳಾಸಿದರು. ಆಟ, ಪಾಠ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಹಂಚಲಾಯಿತು. ವಿವಿಧ ವೇಷ ಸ್ಪರ್ಧೆ ಮತ್ತು ನಾಟಕಗಳು ಜರುಗಿದುವು

ಶಾಲೆಯಲ್ಲಿ ಮಹಿಳೆಯರ ಉಪಯೋಗಕ್ಕಾಗಿ ಸಂ೦೦ ರೂ ನ ಕಟ್ಟಡ ಒಂದನ್ನು ಕಟ್ಟಿಸಿ ಕೊಡಲು ವೈಸೂರು ಇಂಜಿನಿಯರಿಂಗ್ ಕಂಪೆನಿಯ ಶ್ರೀ ರಾಮಸ್ವಾಮಿಯವರೂ, ೧೦೦೦ ರೂ. ಧನ ಸಹಾಯ ಮಾಡಲು ನಿಶ್ಚಯಿಸಿದ್ದ ಮಹನೀಯರೂ ವಾಗ್ದಾನ ಮಾಡಿದರು ——

ಉದಾರ ನಾನ

ವಡಗಾಂ-ಹೊಸಕೋಟೆ ರಸ್ತೆಗೆ ಬಲಿಯುತ್ತಿರುವ ಬಾಲಗಳನ್ನು ಕಟ್ಟಿ ದುರಸ್ತು ಮಾಡಲು ಶಾಲುವ ಒಟ್ಟು ಖರ್ಚಿನಲ್ಲಿ ಕಾಲು ಭಾಗವನ್ನು, ಎಂದರೆ ಸುಮಾರು ಎಂ೦೦ ರೂ ದಾನ ಮಾಡಿದ ಕುಂದ ನೇ [illegible] ಮಾಡಲ್ಪಟ್ಟಿರುವ [illegible] ಶ್ರೀಮಂತ [illegible] ಸಂಸ್ಥಾನದ [illegible]

ಗಾಂಧೀ ನಿಧನ ಸಂಸ್ಮರಣೆ

[illegible] ಸಂಜೆ ಗಾಂಧೀಜಿಯವರ ನಿಧನದ ಎರಡನೆಯ ವರ್ಷಾಚರಣೆಯನ್ನು ನಡೆದು ಶ್ರೀ ಕೆ ವಿ ಶ್ರೀಕಂಠಯ್ಯನವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಪ್ರಿ ರಾಮಚಂದ್ರರನ್ನು ಕಾರ್ಯದರ್ಶಿಗಳನ್ನಾಗಿಯೂ, ಶ್ರೀ ಎಸ್. ಎಸ್ ಶಾಸ್ತ್ರಿಯವರನ್ನು ಖಜಾಂಚಿಯನ್ನಾಗಿಯೂ ಆರಿಸಲಾಗಿದೆ

Edited printed and published by [illegible] Nagarajan at the Sadhvi [illegible] Mysore.

ರಷ್ಯದಲ್ಲಿ ಭಾರಿ ದಂಗೆ

೧೫ ಲಕ್ಷ ಉಕ್ರೇನಿಯನರ ಚಳುವಳಿ

ರಷ್ಯದ ವಶಿಷ್ಟ ಉಕ್ರೇನಿನಲ್ಲಿ ಸುಮಾರು ೧೫ ಲಕ್ಷ ಉಕ್ರೇನಿಯನರು ದಂಗೆ ಎದ್ದಿರುವರೆಂದು ವರದಿಯಾಗಿದೆ ಆನೂ ಜ್ಞಾನವಾಗಿ ಬಂದಿರುವ ತಮ್ಮ ರಾಷ್ಟ್ರೀಯ ಭಾವನೆಗಳ ಬಗ್ಗೆ ರಷ್ಯನರು ಆಕ್ಷೇಪಿಸಿದ್ದರಿಂದ ಉಕ್ರೇನಿಯನರು ಕೈಗೊಂಡಿರುವ ಈ ಕ್ರಮವನ್ನು ಹತ್ತಿಕ್ಕಲು ರಷ್ಯದ ಸರ್ಕಾರದವರು ಅಸಮರ್ಥರಾಗಿರುವರೆಂದೂ, ದಂಗೆಕೋರರನ್ನು ಗಡೀಪಾರು ಮಾಡುವ ಕಾರ್ಯದಲ್ಲಿ ಸರ್ಕಾರದವರು ವಿಫಲರಾಗಿರುವರೆಂದೂ ಗೊತ್ತಾಗಿದೆ ಆವರು ಈ ಪ್ರದೇಶಗಳಲ್ಲಿ ಗೊಂಬಲ್ಲಾ ಸೈನ್ಯಗಳನ್ನು ರವಿಸಿ ಆಗಾಗ್ಗೆ ಸೋವಿಯಟ್ ಪಡೆಗಳ ಮೇಲೆ ಧಾಳಿ ನಡೆಸುತ್ತಿರುವರು. ರಷ್ಯದ ಮೇಲಿನ ಧಾಳಿಯನ್ನು ತೀವ್ರಗೊಳಿಸುವುದಕ್ಕಾಗಿ ಗೊಂಬಲ್ಲಾ ಪಡೆಗೆ ಹೆಚ್ಚು ಹೆಚ್ಚು ಸೈನಿಕರನ್ನು ಸೇರಿಸಿಕೊಳ್ಳಲಾಗುತ್ತಿದೆಯೆಂದೂ ವರದಿಯಾಗಿದೆ.

ವುಡ್‌ಲ್ಯಾಂಡ್ಸ್
23-1-48 ರಿಂದ
ಅಮೋಘ ಎರಡನೇ ವಾರ
ದಿ ರಾತ್
(ಅದೋಘ ಹಿಂದೀ ಚಿತ್ರ)
ಪಾತ್ರ — ಸ್ನೇಹ ಪ್ರಧಾ
(ಕರ್ನಾಟಕ ಫಿಲ್ಮಂ ರಿಲೀಸ್)

ಸೇವಾ ಸಾರಿತೋಷಕ

ಮೈಸೂರು ೨೭

ನಿನ್ನೆ ಸಂಧ್ಯಾಕ್ಕೆ ಮಯಾಂಡಾ ಕಾಲೇಜು ಆವರಣದಲ್ಲಿ ಸ್ವಾತಂತ್ರ್ಯ ಸ್ಮಾರಕ ದಿನಾಚರಣೆಯು ವಿದ್ಯಾರ್ಥಿಗಳಿಂದ ನೆರವೇರಿಸಲ್ಪಟ್ಟಿತು ಬಿಲ್ಲಾ ದೋರ್ಡು ಆಗ್ಯ ಕ್ಷರಾದ ಶ್ರೀ ಹೆಚ್ ಎಂ ಚನ್ನಬಸಪ್ಪನವರು ಅಗ್ರಾಸನವನ್ನು ವಹಿಸಿದ್ದರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬಲಿದಾನ ಮಾಡಿದ ಹುತಾತ್ಮರನ್ನು ಕುರಿತು ಭಾಷಣಗಳಾದುವು. ಈ ದಿನದ ಪ್ರಾಸಂಗಿಕವಾಗಿ ವಿಶ್ವವಿದ್ಯಾಲಯದವರು ಒದು ಸಾರಿತೋಷ ಸ್ಪರ್ಧೆಯನ್ನು ಏರ್ಪಡಿಸಿ ಸೇವಾ ತತ್ಪರತೆಯಲ್ಲಿ ಅಗ್ರಸ್ಥಾನವನ್ನು ಪಡೆದು ವಿದ್ಯಾರ್ಥಿಗಳಿಗೆ ಅದನ್ನು ಕೊಡಬೇಕೆಂದು ಸೂಚಿಸುವ ನಿರ್ಣಯವನ್ನು ಮಾಡಲಾಯಿತು

ಮಹಿಳೆಯರಿಗೆ ವಿದ್ಯೋಗಿಕ ಶಿಕ್ಷಣ

ಮಹಿಳಾ ಮಂಡಲಿಯ ಆಶ್ರಯದಲ್ಲಿ ಕಳೆದ ಶುಕ್ರವಾರ ಸಂಜೆ ಸಾದ್ವಿ ಪತ್ರಿಕಾ ಕಛೇರಿಯ ಮಹಡಿ ಮೇಲೆ ಮಹಿಳೆಯರ ಸಭೆಯೊಂದನ್ನು ನಡೆಯಿತು. ಪ್ರಾರ್ಥನೆಯಾದ ಮೇಲೆ ಶ್ರೀಮತಿ ಎಂ ಆರ್ ಲಕ್ಷ್ಮಣ್ಣನವರು ಮಂಡಲಿಯ ಕಾರ್ಯಕಲಾಪಗಳನ್ನು ವಿವರಿಸಿದರು ಶಾಸನ ಸಭಾ ಸದಸ್ಯೆಯಾಗಿದ್ದ ಜೊಗಳೂರಿನ ಶ್ರೀಮತಿ ರಮಾಬಾಯಿಯವರು ಭಾಷಣ ಮಾಡಿ ಸ್ತ್ರೀಯರಿಗೆ ಈಗಿನ ವಿದ್ಯಾಭ್ಯಾಸದಿಂದ ಪ್ರಯೋಜನವಾಗಿಲ್ಲವೆಂದೂ, ಉತ್ಪಾದಕವಾದ ವಿದ್ಯೆಯನ್ನು ಅವರು ಕಲಿಯಬೇಕೆಂದೂ ಹೇಳಿದರು ವಂದೇ ಮಾತರಂ ಗೀತೆಯೊಡನೆ ಸಭೆಯು ಮುಗಿಯಿತು.

ಬ್ಯೂಟಿಯ ಸೈಟು ಪರಾಜು

ಪೂಳ, ಟೈಪು, ಅಪ್ಪಕ್ಕಿ, ಫ್ಲೈಲ್ಸ್ ಸ್ಪೇಸ್ ಮತ್ತು ಬಸ್ ಸ್ಟಾಂಡುಗಳಿಗೆ ಕೇವಲ ಸಮಾಪದಲ್ಲೇ ಇರುವ ಕಾಟೇಜ್ ಸೈಟು. ಸುತ್ತಲೂ ಕಾಂಪೌಂಡು ಇರುತ್ತೆ.
ಅಳತೆ- ೪೫x೬೦ ಅಡಿ, ರೋಡು- ಪೆಸ್ಟಿ ರೋಡು, ಸೊಪಲ್ಲಾ- ಮಂಡಿ, ಮೈಸೂರು.
೨೨-೨-೪೮ ನೇ ಭಾನುವಾರ ಬೆಳಿಗ್ಗೆ ಬಹಿರಂಗವಾಗಿ ಹರಾಜಾಗುತ್ತದೆ.
— ವಿವರಗಳಿಗೆ —
ಎಂ ಎಸ್. ನಂಜಪ್ಪ, ಸಿ ಎಂ. ಅಂಡ್ ಸನ್ಸ್, ಸಯ್ಯಾಜಿರಾವ್ ರೋಡ್, ಮೈಸೂರು, ಇವರಲ್ಲಿ ವಿಚಾರಿಸಿರಿ.

23-1-48 ರಿಂದ ಅಮೋಘ ೧೨ ನೇ ವಾರ
ಪ್ರತಿ ದಿನ ೨ ಆಟಗಳು
★ ಮಹಾತ್ಮಾ ಕಬೀರ್ ★
(ಕನ್ನಡ)
ರಾಜಕಮಲ್ ಟಾಕೀಸಿನಲ್ಲಿ

ಸ್ಪೆಷಲ್ ನಾಟಕ ! ಒಂದೇ ದಿನ ೨ ಪ್ರದರ್ಶನಗಳು !!
ಮೈಸೂರು ಟೌನ್ ಹಾಲಿನಲ್ಲಿ
ಕಾ॥ ೨೮-೧-೪೮ನೇ ಬುಧವಾರ ಸಂಜೆ ೬-೩೦ ಮತ್ತು ರಾತ್ರಿ ೧೦ ಘಂಟೆಗೆ
★ ಧರ್ಮ ರತ್ನಾಕರ ★
(ಬಬ್ಬಿಯ ಭೂಪಾಲರಾಯ)
ಭಾರತ ಲಲಿತ ಕಲಾ ಸಂಘದ ಕಲಾಕೃತಿ

ಬೆಟ್ಟದ ಮೇಲೆ ಗಾಂಜಾ [illegible]

ಸ್ವಂಯು.] ಚಾಮರಾಜನಗರ ೨೭

ಕಾ॥ ೨೮-೧-೪೮ ರಲ್ಲಿ ಚಾಮುಂಡಿ ರದ ರೇಂಜ್ ಎಸ್ಸೈಸ್ ಇನ್ಸ್‌ಪೆಕ್ಟರ್, [illegible] ಯಂ ಅಸ್ಪಯ್ಯನವರೂ ಮತ್ತು ಪೊಲೀಸ್ ಇನ್ಸ್‌ಪೆಕ್ಟರ್, ನೆಂಕಟಪ್ಪನವರೂ, ತಂ ಸಿಬ್ಬಂದಿಯ ಸಮೇತ, ಬೆಳಿಗಿರಂಗಪ್ಪ ದಟ್ಟಿನ ಮೇಲೆ, ಬೇಡಗುಳಿ, ಹುಲಿಯ ದ, ಸೋಲಿಗರ ಗುಡಿಸಲನ್ನು ಜಡತಿ ಡಿ, ಸುಮಾರು ೧೫ ಸೇರು ಕಚ್ಚಿ ಗಾ ವನ್ನೂ ಲೈಸನ್ಸ್ ಇಲ್ಲದ ಮೂರು ಬಾ ಮಾಡಿದ ಬಂದೂಕ, ಮತ್ತು ಇತರೆ ಪ ಮಾಡುವ ಉಪಕರಣಗಳನ್ನೂ ವಶಪ ಕೊಂಡು ಕಾರ್ಯಭೆಯಲ್ಲಿ ತೊಡಗಿ ಮಾಡಿರ ಶಕ್ತರೆ ಈ ಗಾಂಜಾವು ಬೆಟ್ಟ ದೇಶದಲ್ಲಿ ಲೈಸನ್ಸ್ ಇಲ್ಲದೆ ಬೆಳೆದು ಸರೋಧಿಯಾಗಿರುವ ಕೊಯಮತ್ತೂರು ಜಿಲ್ಲೆಯಲ್ಲಿ ಬಿಕರಿಯಾಗುತ್ತಿದ್ದಿಂದೂ ಹ ಧಾರಿ ಪ್ರಸಂಗವು ಹಿಂದೆಯೂ ಆ ಮೇಲೂ ತಿಳಿದುಬಂದಿದೆ.

ಜನಾಭಿಪ್ರಾಯ ಸಂಗ್ರಹ

ಇನ್ನು ಮುಂದೆ ಆಯಾರದ ಪಡಿ ಯು ಇರಬೇಕೇ ಬೇಡವೇ ಎಂಬ ಮಹಾಜನರ ಅಭಿಪ್ರಾಯವನ್ನು ಕೊಳ್ಳಲು ಕಾರ್ಯಕ್ರಮಗಳನ್ನು ಸಿ ಪಡಿಸುವುದಕ್ಕಾಗಿ ನೆನ್ನೆ ಡಿ. ಬನುಮ ನವರ ಕಾಲೆಯಲ್ಲಿ ಶ್ರೀ ಕೆ. ವಿ ಶ್ರೀನಿ ಮೂರ್ತಿಯವರ ಅಧ್ಯಕ್ಷತೆಯಲ್ಲಿ ಸಭೆ ಯಿತು. ಈ ವಿಚಾರವಾಗಿ ಒಂದು ಕಾಲ ಪ್ರಚಾರ ನಡೆಸಿ ಮಹಾ ನರ ಅಭಿಪ್ರಾಯವನ್ನು ತೆಗೆದುಕೊಳ್ಳ ಕೆಂದು ತೀರ್ಮಾನಿಸಲಾಯಿತು.

ಯುಂಬೆಟಿಗರ ವಿದ್ಯಾರ್ಥಿ ನಿಲಯ

ಮೇಳ್ಕಂಡ ವಿದ್ಯಾರ್ಥಿ ನಿಲಯದ ಮುಚ್ಚುರುವ ವಿಷಯದಲ್ಲಿ ಅದರ ಆ ದರ್ಶಿಗಳು ಒಂದು ಪತ್ರವನ್ನು ಬರೆದು ದ್ಯಾರ್ಥಿ ನಿಲಯವನ್ನು ವಿದ್ಯಾರ್ಥಿಗಳ ಸ್ಥಾಪಿಸಿ ವಿದ್ಯಾರ್ಥಿಗಳಾಗಿದೆಯೆಂದೂ ರಿ ವಿದ್ಯಾರ್ಥಿಗಳು ಸಮಿತಿಯವರ ತೀರ್ ನಗಳಿಗೆ ಒಳಪಡದೆ ಮನಸ್ಸಿಯಾಗಿ ನ ಸುತ್ತಿರುವುದು ಖಂಡನೀಯವಾದುದೆ ತಿಳಿಸಿರುತ್ತಾರೆ.

ಅಪೇರಾ ಟಾಕೀಸ
ತಾ॥ ೨೮-೧-೪೮ ರಿಂದ
ಪ್ರತಿ ದಿನ ಮೂರು ಆಟಗಳು
- ಕನ್ನಗಿ -
(ತಮಿಳು)
ಪಾತ್ರ :— ಕನ್ನಾಂಬ, ಪೆಸ್ಟಿ
ಎಸ್. ಎಸ್ ಕೃಷ್ಣನ್, ಟಿ ಎ ಮಳ
ಪ್ರತಿ ದಿನ ಮೂರು ಆಟಗಳು
೨೮-೧-೪೮ ರಿಂದ
ಆಯಿ ಬಹಾ
ಪಾತ್ರ — ಇಸಾಕ್, ಬೊಪ್ಪಿ
ಅಜ್ಮಲ್ ವ.ತ್ರಿಕರು
ಒಬಿಂಪಿಯಾ ಟಾಕೀಸ್

ಸಂಪುಟ ೬] ಬುಧವಾರ ೨೮-೧-೪೮ [ಸಂಚಿಕೆ ೧೬೭

ಕೊಯಮತ್ತೂರಿನಲ್ಲಿ ೨೮ ಗಿರಣಿಗಳ ಬಂದು

ಪಡಿತರವನ್ನು ೧೦ ಔನ್ಸಿಗೆ ಹೆಚ್ಚಿಸಲಾಗುವುದು

ಬೆಂಗಳೂರು ೨೮ ನ್ನೆ ಮತ್ತು ಮೊನ್ನೆ ಮಂತ್ರಿಮಂಡಳ ಭೆ ನಡೆದು ಹಿಂದಿನ ಸರ್ಕಾರದವರು ಅತಿ ಗೆಜೆಟೆಡ್ ನೌಕರರ ಸಂಬಳಗಳ ಬ್ಗ ಕುರಿತ್ತ ಕೆಲವರ ಸರ್ವಿಸುಗಳನ್ನೂ ಬ ನೂಡಿದ್ದ ವಿಚಾರವನ್ನು ಪುನರ್ವಿಮ ಮಾಡಲಾಯಿತೆಂದು ತಿಳಿದುಬಂದಿದೆ. ಸಂಬಳದ ವಿಚಾರವನ್ನೂ ಸಹ ಪರಿಶೀಲಿಸಿ ದರ ಪ್ರಮಾಣವನ್ನು ೮ ಔನ್ಸಿನಿಂದ ೧೦ ನ್ಸಿಗೆ ಹೆಚ್ಚಿಸಲು ನಿರ್ಧರಿಸಿರುವುದಾಗಿ ಯೂ ಗೊತ್ತಾಗಿದೆ

ಮಂತ್ರಿಗಳು ದೆಹಲಿಗೆ

ಬೆಗಳೂರಿನ ಟಿ ಮರಿಯಪ್ಪ, ಹರ್ ಸಿ ಷಪ್ಪ ದುಮ್ಮ ಹೆಗ್ಡೆ. ಸಿದ್ದಯ್ಯಸ್ವಾಮಿ ಎನ ಏನಾಥದಲ್ಲಿ ದೆಹಲಿಗೆ ತೆರಳಿದ . ಸಂಸ್ಥಾನದಲ್ಲಿ ನಿಂತ್ರಿತರ ಯೋಗ ಮವನ್ನು ವಹಿಸುವ ಸಂಬಂಧದಲ್ಲಿ ಎ ಜ್ಯ ತೆರಿಗೆಯಿಂದ ಸಂಸ್ಥಾನಕ್ಕೆ ಸ್ವಲ್ಪ ಟ್ಟಿಗೆ ವಾಪಸು ಕೊಡುವ ಬಗ್ಗೆ ಶ್ರೀ ದಾ ನಪ್ಪನವರೂ, ಮೈಸೂರು ರೈಲ್ವೆಯನ್ನು ಅ ಭಾರತ ರೈಲ್ವೆಗಳ ಮಟ್ಟಕ್ಕೆ ತರುವ ವುದು ಮುಂತಾದ ಬಗ್ಗೆ ಶ್ರೀ ಮರಿಯಪ್ಪ ರವರೂ, ವೈದ್ಯಕೀಯ ಸಂಶೋಧನಾ ಸ ಸ್ಥೆಯಲ್ಲಿ ಭಾಗವಹಿಸಲು ಶ್ರೀ ಸಿದ್ದ ಪ್ಪನವರೂ ತೆರಳಿರುವರೆಂದು ಗೊತ್ತಾಗಿದೆ

ನೇಟ್ ಸೆಕ್ರೆಟರಿ ಹುದ್ದೆ ವಜಾ ?

ಸ್ ಕಂಬೋಚೆಟ್ಟರ್ ನಿಶ್ಚಿತ್ತರು ನಂತ ಈ ಸ್ಥಾನವನ್ನು ಭರ್ತಿ ಮಾಡುವುದಿಲ್ಲ ದೂ, ಹುಜೂರ್ ಸೆಕ್ರೆಟೆರಿಯವರೇ ಆ ಸಚಿವನ್ನು ನೋಡಿಕೊಳ್ಳುವಂತೆ ಏರ್ಪಡಿ ಸಲಾಗುವುದೆಂದೂ ಹೇಳಲಾಗಿದೆ

ಕ್ಷಯ ರೋಗದ ಆಸ್ಪತ್ರೆ ಸಮಿತಿ

ಮೈಸೂರು ಒಂಟೆಕೊಪ್ಪಲಿನಲ್ಲಿರುವ ಕ್ಷ ಯರೋಗದ ಆಸ್ಪತ್ರೆಗೆ ಶ್ರೀ ಎಸ್ ಚನ್ನ ವೀರಯ್ಯನವರ ಅಧ್ಯಕ್ಷತೆಯಲ್ಲಿ ಪ್ರೇಕ್ಷಕರ ಸಮಿ ತಿಯೊಂದನ್ನು ರಚಿಸಲಾಗಿದೆ. ಶ್ರೀಮತಿ ಆರ್ ಸುನಂದಾದೇವಿ, ಥಿಯೋಬಾಲ್ಡ್ ಮಿಷನ್ ಪ್ರಸ್ತವರ್ ಎ ಎಸ್ ರಂಗಸ್ವಾಮಿ ಅಯ್ಯಂಗಾರ್ ವಕೀಲ ಹಾಗೂ ಮೈಸೂರು ಮಹಾರಾಜ ಮತ್ತು ಜಿಲ್ಲಾ ಬೋರ್ಡು ಅಧ್ಯಕ್ಷರು ಆದರ ಸದಸ್ಯರು

ರೈಲ್ವೆ ಪಲಹೆಗಾರರು

ಹೈದರಾಬಾದ್ ರೈಲ್ವೆಯ ನಿವೃತ್ತ ಆದಿ ಮಗಳಾದ ಶ್ರೀ ನಂದರವರನ್ನು ಮೈಸೂರು ರೈಲ್ವೆ ಸಲಹೆಗಾರರಾಗಿ ನೇಮಿಸಲಾಗಿದೆ ಸೆಕ್ರೆಟರಿಯವರ ಸ್ಥಾನವನ್ನು ಇನ್ನು ಮುಂದೆ ರದ್ದು ಮಾಡಲಾಗುವುದು

ಬಟ್ಟೆ ಸಂಬಂಧ

ಬಟ್ಟೆ ಪೂರೈಕೆ ರದ್ದಿನ ವಿಷಯವಾಗಿ ಸರ್ಕಾರದವರು ಪ್ರಕಟನೆಯೊಂದನ್ನು ಹೊ ಡಿಸಿದ್ದಾರೆಂದು ಬರಬೇಕಾಗಿದ್ದ ಬಟ್ಟೆ ಸ್ಟ ಇದುವರೆಗೆ ತಂರಿಸಿಕೊಳ್ಳದೇ ಇರು ವವರಿಗೆಲ್ಲಾ ಹಾಗೆ ತರಿಸಿಕೊಳ್ಳಲು ಇನ್ನು ಅವಕಾಶವಿಲ್ಲವೆಂದು ತಿಳಿಸಿರುವರು.

ಯು ಸಾರವರ ಅಪೀಲು ವಿಚಾರಣೆ

ಸಚಿವದ ಮಾಜಿ ಪ್ರಧಾನಿ ಉ ಆಂಗ್ ಸಿಯವರ ಕೊಲೆ ಸಂಬಂಧದಲ್ಲಿ ಮರಣ ದಂಡನೆಗೆ ಗುರಿಯಾಗಿದ್ದ ಮೂರು ಜನರು ಮೇಲ್ಮನವಿ ಅಪೀಲು ಬಗ್ಗೆ ವಿಚಾರಣೆಯು ನೆರ್ವ ನೇ ಕಾರ್ಯ ನಡೆಯಲಿದೆ

ತಿರುವಾಂಕೂರಿನಲ್ಲಿ ತಾತ್ಕಾಲಿಕ ಸರ್ಕಾರ

ತಿರುವಾಂಕೂರಿನಲ್ಲಿ ನೂತನ ರಾಜ್ಯಾಂಗ ಸಭೆಯನ್ನು ನಿರ್ಮಿಸಿದೊಡನೆಯೇ, ತಾತ್ಕಾಲಿಕ ಸರ್ಕಾರವನ್ನು ಸ್ಥಾಪಿಸಲಾಗುವುದೆಂದು ಹೇಳಲಾಗಿದೆ. ಅಲ್ಲಿನ ಕಾಂಗ್ರೆಸ್ಸು ಈಗಾಗಲೇ ಪ್ರತಿಸ್ಪರ್ಧೆ ಇಲ್ಲದೆ ೩೭ ಸ್ಥಾನಗಳನ್ನು ಪಡೆದಿರುವುದು

ಎಂ. ಎ ಶ್ರೀನಿವಾಸ್‌ರವರ ರಾಜೀನಾಮೆ

ಗ್ವಾಲಿಯರ್ ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪಿತವಾಗಿರುವುದರಿಂದ, ಅಲ್ಲಿನ ಮಂತ್ರಿಮಂಡಲದ ಉಪಾಧ್ಯಕ್ಷರಾಗಿದ್ದ ಶ್ರೀ ಎಂ ಎ ಶ್ರೀನಿವಾಸರವರು ರಾಜೀನಾಮೆ ಕೊಟ್ಟಿದ್ದಾರೆ ಹಿಂದಿನ ಒಪ್ಪಂದದಂತೆ ಅವರಿಗೆ ಮೂರು ವರ್ಷಗಳ ಸಂಬಳವನ್ನು ಕೊಡುವಂತೆ ಮಹಾರಾಜರು ಆಜ್ಞೆ ಮಾಡಿರುವರೆಂದು ತಿಳಿದುಬಂದಿದೆ

ಭಯಂಕರ ಭೂಕಂಪ

ಪಾನೆ ದ್ವೀಪದಲ್ಲಿ ಅತ್ಯಂತ ಭಯಂಕರ ಭೂಕಂಪವು ಸಭವಿಸಿ, ೩೦ ಜನರು ಸತ್ತಿದ್ದಾರೆಂದೂ, ನೂರಾರು ಜನರಿಗೆ ಗಾಯವಾಗಿದೆಯೆಂದೂ ವದಂಥಾಗಿದೆ. ೧೧ ಲಕ್ಷ ಪೌಂಡುಗಳಿಗಿಂತಲೂ ಹೆಚ್ಚಿನ ನಷ್ಟ ಉಂಟಾಗಿದೆ ಸೀಟಲ್ ನೀಗ್ರಾಸ್, ವಕ್ತು ಲೀಸ್ ದ್ವೀಪಗಳಲ್ಲೂ ಭೂಕಂಪವಾಯಿತೆಂದೂ, ಇಂತಹ ಭೂಕಂಪವು ಕಳೆದ ೫೦ ವರ್ಷಗಳಿಂದೆಲ್ಲೂ ಸಂಭವಿಸಿಲ್ಲವೆಂದೂ ಹೇಳಲಾಗಿದೆ

ಕಾಶ್ಮೀರದಲ್ಲಿ ಗೊರಿಲ್ಲಾ ಪಡೆಗಳು

ಕಾಶ್ಮೀರದ ಗುಡ್ಡ ಪ್ರದೇಶದಲ್ಲಿ ಘಾತಕಾರಿ ವಿನಾಶ ಕೃತ್ಯಗಳನ್ನು ತಡೆಯಲು ಅಲ್ಲಿನ ಸರ್ಕಾರದವರು ಗೊರಿಲ್ಲಾ ಪಡೆಯನ್ನು ನಿರ್ಮಿಸಿ, ೧೫೫ ಪಾವಿರ ಜನರನ್ನು ತರಬೇತು ಮಾಡುತ್ತಿರುವರೆಂದು ಹೇಳಲಾಗಿದೆ ಪೀಪಿಗಾರರ ಪಂಗಡದವರಿಂದ ಈ ಗೊರಿಲ್ಲಾ ಪಡೆಗೆ ಯೋಧರನ್ನು ಸೇರಿಸಿಕೊಳ್ಳಲಾಗುವುದೆಂದು ತಿಳಿಸಲಾಗಿದೆ

ವಿದ್ಯಾರ್ಥಿ ಕಾಂಗ್ರೆಸ್

ಮುಂದೆ ನಡೆಯಲಿರುವ ನಿ ದ್ಯಾರ್ಥಿ ಕಾಂಗ್ರೆಸ್ಸಿನಸಾಮಾನ್ಯ ಸದಸ್ಯರ ಸಭೆಗೆ ಖಾ ಸಗೀ ನಿರ್ಣಯಗಳನ್ನು ಇವೇ ತಿಂಗಳು ೩೧ ನೇ ತಾರೀ ನೊಳಗೆ [illegible] ಕಾರ್ಯದರ್ಶಿಗಳು ಕೇಂದ್ರ ಕಛೇರಿ

ಹೈದರಾಬಾದ್ ವಿದ್ಯಾರ್ಥಿಗಳ ಮೇಲೆ ಲಾಠಿ ಪ್ರಯೋಗ

ಹೈದರಾಬಾದ್ ಕಾಂಗ್ರೆಸ್ ನಾಯಕರನ್ನು ಮೊನ್ನೆ ಬಂಧಿಸಿರುವುದಕ್ಕಾಗಿ ಅಲ್ಲಿನ ವಿದ್ಯಾರ್ಥಿಗಳು ಪ್ರತಿಭಟನಾ ಪ್ರದರ್ಶನಗಳನ್ನು ನಡೆಸುತ್ತಿದ್ದಾಗ ಪೊಲೀಸರು ಗುಂಪಿನ ಮೇಲೆ ಲಾಠಿ ಪ್ರಯೋಗ ಮಾಡಿದರು ನಾಲ್ಕು ಮಂದಿ ವಿದ್ಯಾರ್ಥಿಗಳಿಗೆ ಗಾಯಗಳಾಗಿರುವುದೆಂದು ವದಂತಿಯಾಗಿದೆ.

ಭಾರತೀಯರುಟ್ರಾನ್ಸ್‌ವಾಲ್ ಗಡಿಯನ್ನು ದಾಟಿದರು

ದಕ್ಷಿಣ ಆಫ್ರಿಕದ ಭಾರತೀಯರು ಅಲ್ಲಿನ ಭಾರತೀಯ ವಿರುದ್ಧ ಶಾಸನವನ್ನು ಉಲ್ಲಂಘಿಸಿ ಟ್ರಾನ್ಸ್‌ವಾಲನ್ನು ಪ್ರವೇಶಿಸಿದರೆಂದು ವರದಿಯಾಗಿದೆ ಟ್ರಾನ್ಸ್‌ವಾಲ್ ಪೊಲೀಸರು ಈ ಬಗ್ಗೆ ಯಾವ ಕಾರ್ಯಕ್ರಮವನ್ನು ಕೈಗೊಳ್ಳಲಿಲ್ಲವೆಂದು ಗೊತ್ತಾಗಿದೆ.

ದರ್ಜಿ ಸಂಸ್ಥಾನಗಳು ಬೊಂಬಾಯಿಗೆ ಸೇರುವುವು

ದರ್ಜಿ ಸಂಯುಕ್ತ ಸಂಸ್ಥಾನಗಳ ರಾಜ್ಯಾಂಗ ಸಭಾಧಿವೇಶನವು ನಿನ್ನೆ ನಡೆದು ಆ ಸಂಸ್ಥಾನಗಳು ದೊಬಾಯಿ ಪ್ರಾಂತ್ಯದ ಒಬ್ಬ ಗವರ್ನರ್ ಕೆಳಗೆ ನಿರ್ಧರಿಸಲಾಯಿತು. ಈ ಕಾರಣದಿಂದ ದರ್ಜಿ ಸಂಸ್ಥಾನಗಳಿಗೆ ಪ್ರತ್ಯೇಕ ರಾಜ್ಯಾಂಗವನ್ನು ತಯಾರಿಸಬೇಕಾದ ಅಗತ್ಯವಿಲ್ಲವೆಂದೂ ತಿಳಿಸಲಾಗಿದೆ

ನ್ಯಾಕೆಂಗಿಗೆ ೨೦ ಮೈಲಿ ದೂರದಲ್ಲಿ ಶತ್ರುಪಡೆ

ಚೀನಾದ ರಾಜಧಾನಿ ನ್ಯಾಕೆಂಗಿಗೆ ೨೦ ಮೈಲಿ ದೂರದಲ್ಲಿ ಕಮ್ಯೂನಿಸ್ಟ್ ಪಡೆಯು ಸರ್ಕಾರಿ ಸೈನಿಕರೊಂದಿಗೆ ತೀವ್ರ ಕದನ ನಡೆಸುತ್ತಿದೆಯೆಂದು ಹೇಳಲಾಗಿದೆ. ಚೀನೀ ರಾಜಧಾನಿಯನ್ನು ರಕ್ಷಿಸಲು ಸರ್ಕಾರದ ಸೈನ್ಯಗಳು ಉಗ್ರವಾಗಿ ಪ್ರತಿಭಟನೆಯನ್ನು ಕೈಗೊಂಡಿವೆ

ವಿದ್ಯಾಭ್ಯಾಸದ ಸುಧಾರಣೆ

ರಾಜಧಾನಿಯ ಲಕ್ಷ್ಮೀಪುರಂ ಮಧ್ಯಮಿಕ ಶಾಲಾ ಉಪಾಧ್ಯಾಯರ ಸಂಘದ ವಿಶೇಷ ಸಭೆಯು ೧೧ ನೇ ತಾರೀ ನಡೆದು ಶ್ರೀ ಎಂ. ಪಿ ದೇವೇಗೌಡರು ಹಾಗೂ ವಿದ್ಯಾಭ್ಯಾಸ ಶ್ರಮದ ವಿಷಯದಲ್ಲಿ ಭಾಷಣ ಮಾಡಿ, ದೇಶದ ಸಂಸ್ಕೃತಿಯನ್ನು ಕಾಪಾಡಿಕೊಂಡು, ಗ್ರಾಮ ಕೈಗಾರಿಕೆಯನ್ನು ಅಭಿವೃದ್ಧಿ ಪಡಿಸಿ, ಔದ್ಯೋಗಿಕ ಸಮಾನತೆಯನ್ನು ಕಲ್ಪಿಸಬೇಕೆಂದೂ, ಅವಿರಳದ ವಿದ್ಯಾರ್ಥಿಗಳನ್ನು [illegible]

ಟ್ರಸ್ಟ್‌ಬೋರ್ಡ್ ಅಧ್ಯಕ್ಷರು

ಮೈಸೂರು ೨೮ ಪೌರಸಭೆಯು ಪ್ರತಿನಿಧಿ ಪೌರಸಭೆಯ ಅಧ್ಯಕ್ಷರಾದ ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರನ್ನು ನಗರದ ಟ್ರಸ್ಟ್ ಬೋರ್ಡಿನ ಅಧ್ಯಕ್ಷರನ್ನಾಗಿಯೂ ಸರ್ಕಾರದವರು ನೇಮಿಸಿದ್ದಾರೆ

ತ್ಯಾಗರಾಜ ಜಯಂತಿ

ರಾಜಧಾನಿಯ ಹಳೇ ಪೋಸ್ಟಾಫೀಸು ರಸ್ತೆಯುಲ್ಲಿರುವ ಎಂ ಎಲ್ ಜೈನ ಧರ್ಮಶಾಲೆಯಲ್ಲಿ ಶ್ರೀ ತ್ಯಾಗರಾಜಸ್ವಾಮಿಯವರ ಆರಾಧನಾ ಮಹೋತ್ಸವದ ಅಂಗವಾಗಿ ಇದೇ ೩೦ ನೇ ತಾರೀ ವಿದ್ವಾನ್ ಶ್ರೀ. ಎಸ್ ಭಾಷ್ಯಾಚಾರ್ಯರವರ ಸಂಗೀತ; ೩೧ ನೇ ತಾರೀ ವಿದ್ವಾನ್ ಬಿ ಕೇಶವನ್-ಬೆಳಿಗ್ಗೆ ಪಿಟೀಲು; ೧ ನೇ ತಾರೀ ಸಂಜೆ ೫ ಗಂಟೆಗೆ ಶ್ರೀ ತ್ಯಾಗರಾಜರವರ ಜೀವನ ಚರಿತ್ರೆಯ ಉಪನ್ಯಾಸ; ಮತ್ತು ೫-೩೦ ಗಂಟೆಗೆ ವಿದ್ವಾನ್ ಆರ್. ಕೆ ಶ್ರೀಕಂಠಶರ್ಮರವರಿಂದಲೂ ೨ ನೇ ತಾರೀ ಅಷ್ಟಾಪದಿ ವಿದ್ವಾನ್ ಆರ್ ಜಾ ಸುದೇವಮೂರ್ತಿಯವರಿಂದಲೂ ಸಂಗೀತ ಕಛೇರಿಗಳು ನಡೆಯುವುವು.

ನೇತಾಜಿ ಜಯಂತಿ

ರಾಜಧಾನಿಯ ಎಲೆ ಮಂಡಿ ಯುವಕ ಸಂಘದವರು ನೇತಾಜಿ ಜಯಂತಿಯನ್ನು ಶ್ರೀ ಡಿ ಸಿ ಗೋವಿಂದರಾಜುರವರ ಅಧ್ಯಕ್ಷತೆಯಲ್ಲಿ ಕಳೆದ ಶುಕ್ರವಾರ ಆಚರಿಸಿದರು

ಅಳ್ವಾರಿನಲ್ಲಿ ಜವಾಬ್ದಾರಿ ಸರ್ಕಾರ

ಅಳ್ವಾರ್ ಸಂಸ್ಥಾನದಲ್ಲಿ ಸಂಪೂರ್ಣ ಜವಾಬ್ದಾರಿ ಸರ್ಕಾರವನ್ನು ೨ ವರ್ಷದೊಳಗಾಗಿ ಸ್ಥಾಪಿಸಲಾಗುವುದೆಂದು ಅಲ್ಲಿನ ಮಹಾರಾಜರು ೩೦ ರಂದು ಘೋಷಣೆಯನ್ನು ಹೊರಡಿಸಿದ್ದಾರೆ ಪ್ರಥಮದಲ್ಲಿ ಪ್ರಜಾಪ್ರತಿನಿಧಿಗಳಾಗಿ ಸರ್ಕಾರವನ್ನು ರಚಿಸಲಾಗುವುದೆಂದೂ, ಸರ್ಕಾರದ ಎಲ್ಲಾ ಖಾತೆಗಳ ಅಭಿವೃದ್ಧಿಯ ಕಾರ್ಯವನ್ನು ಈ ಸಮಿತಿಯವರ ಮೇಲ್ವಿಚಾರಣೆಯಲ್ಲಿರುವುದೆಂದೂ ಹೇಳಲಾಗಿದೆ,

ವಿವೇಕಾನಂದ ಮತ್ತು ಪರಮಹಂಸರ ಚಲನ ಚಿತ್ರ

ಸ್ವಾಮಿ ವಿವೇಕಾನಂದ ಮತ್ತು ಶ್ರೀ ರಾಮಕೃಷ್ಣ ಪರಮಹಂಸರವರ ಜೀವನ ಮತ್ತು ಉಪದೇಶಗಳನ್ನು ಕುರಿತು ಹಿಂದೀ ಮತ್ತು ಇಂಗ್ಲಿಷ್‌ಗಳಲ್ಲಿ ಚಲನ ಚಿತ್ರವನ್ನು ತಯಾರಿಸಲಾಗುವುದು ಇದನ್ನು ತಯಾರಿಸುವ ಶ್ರೀ ಚಿಟ್ಟೂರು ನಾಗಯ್ಯನವರೇ ಪ್ರಮುಖ ಪಾತ್ರವನ್ನು ವಹಿಸುವರು.

೨೮ ಗಿರಣಿಗಳ ಲಾಕ್‌ಔಟ್

ಕೊಯಮತ್ತೂರಿನ ಗಿರಣಿ ಮಾಲೀಕರ ಸಂಘದವರ ನಿರ್ಧಾರದಂತೆ ನಿನ್ನೆಯಿಂದ ಅಲ್ಲಿನ ೨೮ ಗಿರಣಿಗಳಲ್ಲಿ ಕೆಲಸಗಳನ್ನು ಬಂದು ಮಾಡಲಾಗಿದೆ ಅಲ್ಲಿನ ಗಿರಣಿ ಕೆಲಸಗಾರರು ತಮ್ಮ ಬೇಡಿಕೆಗಳನ್ನು ಈಡೇರಿಸಿ ಪ್ರಸ್ತಾವನೆಯ ಮುಷ್ಕರ ಹೂಡುವುದಾಗಿ ತಿಳಿಸುವರೆಂದೇ ಈ ಲಾಕ್‌ಔಟಿಗೆ ಕಾರಣವೆಂದು ಹೇಳಲಾಗಿದೆ ಇದರಿಂದ ೪೦ [illegible]

ಮೂಲ ಶಿಕ್ಷಣದ ಮಹತ್ವ

ಆರ್ಯನಾಯಕಂರವರ ಭಾಷಣ

ಮೈಸೂರು ೨೪

ವಾರ್ಧಾ ಶಿಕ್ಷಣ ಪದ್ಧತಿಯಂದು ಪ್ರಸಿದ್ಧವಾಗಿರುವ ವಿದ್ಯಾರ್ಥಿಗಳ ಕ್ರಸಾದ ವಿಚಾರವಾಗಿ ಆದರ ಪಂಚಾಲಕರಾದ ಶ್ರೀ ಆರ್ಯನಾಯಕರವರು ನಿನ್ನೆ ಮಹಾರಾಜರವರ ಕಾಲೇಜಿನಲ್ಲಿ ಸ್ವಾರಸ್ಯವಾಗಿ ಭಾಷಣ ಮಾಡಿದರು. " ಡಾ॥ ಸಿದ್ಧಲಿಂಗಯ್ಯನವರು ಅಗ್ರಾಸನವನ್ನು ನಹಿಸಿದ್ದರು ಶ್ರೀ ಸಿ ರಂಗನಾಯ್ಕರವರು ಅತಿಥಿಗಳ ಪರಿಚಯವನ್ನು ಮಾಡಿ ಕೊಟ್ಟು, ಅವರನ್ನು ಸ್ವಾಗತಿಸಿದರು.

ಈಗಿನ ವಿದ್ಯಾಭ್ಯಾಸ ಕ್ರಮಕ್ಕೂ ಮೂಲ ಶಿಕ್ಷಣ ಪದ್ಧತಿಗೂ ಇರುವ ವ್ಯತ್ಯಾಸವನ್ನು ಶ್ರೀ ಆರ್ಯನಾಯಕರವರು ವಿವರಿಸಿದರು. ವಿದ್ಯಾರ್ಥಿಗಳನ್ನು ಯಂತ್ರಗಳಂತೆ ಪರೀಕ್ಷೆಗೆ ಸಿದ್ಧಗೊಳಿಸುವುದೇ ಈಗಿನ ವಿದ್ಯಾಭ್ಯಾಸದ ಗುರಿಯಾಗಿರುತ್ತದೆ ಶಕ್ತಿ ಮತ್ತು ಸುತ್ತಮುತ್ತಲಿನ ವಿಚಾರಗಳನ್ನು ವಿದ್ಯಾರ್ಥಿಯು ಅರಿಯಲು ಅವಕಾಶವೇ ಇಲ್ಲವೆಂದು ಕಂಡು ಬೇಸರ ವ್ಯಕ್ತಪಡಿಸಿದರು. ಇದರಿಂದ ಇಪ್ಪತ್ತೈದು ವರ್ಷಗಳಲ್ಲಿ ಪರಕೀಯರು ನಮ್ಮ ದೇಶವನ್ನು ಆಳುವ ಪರಿಸ್ಥಿತಿ ಬಂದಿದೆಯೆಂದು ಹೇಳಿದರು. ಈಗ ಸ್ವತಂತ್ರವಾಗಿ ನಮ್ಮ ದೇಶವನ್ನು ಆಳುವ ಜವಾಬ್ದಾರಿ ನಮ್ಮ ಮೇಲಿದೆ. ಆದ್ದರಿಂದ ಈಗಿನ ವಿದ್ಯಾಭ್ಯಾಸ ಕ್ರಮವನ್ನು ಬೇಗೂರಿಸಲು ಈ ವಿದ್ಯಾಭ್ಯಾಸ ಕ್ರಮವನ್ನು ಜಾರಿಗೆ ತಂದರು ಈಗ ಸ್ವತಂತ್ರವು ಲಭಿಸಿರುವುದರಿಂದ ಅದು ಸಂಪೂರ್ಣವಾಗಿ ಪಾರ್ಲಿಮೆಂಟ್‌ಗೆ ಬರಬೇಕು-ಎಂದು ಭಾಷಣಕಾರರು ತಿಳಿಸಿದರು

ವಾರ್ಧಾ ವಿಗರದ ಬಳಿ ಸೇವಾಗ್ರಾಮದಲ್ಲಿ ತಾವು ನಡೆಸುತ್ತಿರುವ ಶಿಕ್ಷಣ ಕೇಂದ್ರಗಳ ವಿಚಾರವನ್ನು ವಿವರಿಸಿ ಅಲ್ಲಿ ಬಾಲಕರು ಮೊದಲಿನಿಂದಲೂ ಕೋಮುವಾರು ಪೌಹಾರ್ದ ಮತ್ತು ಅಹ್ಮತ್ವಲಂಬನೆಯ ಮಾರ್ಗಗಳನ್ನು ಕಲಿಯುವರೆಂಬುದನ್ನು ತಿಳಿಸಿದರು. ಜೀವನದಲ್ಲಿ ಅತ್ಯಗತ್ಯವಾದ ವಿಚಾರಗಳನ್ನು ಮಕ್ಕಳಿಗೆ ಕಾರ್ಯರೂಪದಲ್ಲಿ ಪ್ರತ್ಯಕ್ಷವಾಗಿ ಕಲಿಸಲಾಗುವುದೆಂದು ಹೇಳಿದರು. ನೂಲು ತೆಗೆಯುವುದು, ಗಿಡಗಳನ್ನು ಬೆಳೆಸುವುದು, ಕಣ್ಣು ಪುಟ್ಟ ಚಿಕಿತ್ಸೆಗಳನ್ನು ಮಾಡುವುದು ಮತ್ತು ತಮಗೆ ಬೇಕಾದ ಇತರ ಕೆಲಸಗಳನ್ನೆಲ್ಲಾ ತಾವೇ ಮಾಡಿಕೊಳ್ಳುವುದು-ಇವೇ ಮುಂತಾದುವುಗಳನ್ನು ಅಳ್ಳಿ ಕಲಿಸಲಾಗುತ್ತದೆಯೆಂದ ಹೇಳಿದರು ಇನ್ನು ಮುಂದೆ ವಿಶ್ವವಿದ್ಯಾಲಯಗಳ ಪಾಠ ಪ್ರಸಾರವನ್ನು ಸಂಪೂರ್ಣವಾಗಿ ಬದಲಾಯಿಸಿ ಜನ ಸಾಮಾನ್ಯರಿಗೆ ಒಟ್ಟಿಯಂದ ಪ್ರಯೋಜನವಾಗುವಂತೆ ಮಾಡಬೇಕೆಂದು ಹೇಳಿದರು

ಮೂಲ ಶಿಕ್ಷಣದ ವಿಚಾರವನ್ನು ಪ್ರಚಾರ ಮಾಡುವುದು, ಇನ್ನಷ್ಟಾಗಿ ಶಿಕ್ಷಣ ಕೇಂದ್ರಗಳನ್ನು ತೆರೆದು ಉಪಾಧ್ಯಾಯರುಗಳನ್ನು ತರಬೇತಿ ಮಾಡುವುದು ಇವೇ ಮುಂತಾದ ಉದ್ದೇಶಗಳಿಂದ ಒಂದು ಸಂಘವನ್ನು ಸ್ಥಾಪಿಸಿರುವುದಾಗಿಯೂ ಅದಕ್ಕೆ ಶ್ರೀ ಆರ್ಯ ನಾಯಕರವರು ಅಧ್ಯಕ್ಷರಾಗಿರುವುದಾಗಿಯೂ, ಶ್ರೀ ಟಿ ಎಲ್ ಶಾಂತಕುಮಾರ ತಿಳಿಸಿದರು.

Edited printed and published by A. R. Nagarajan at the Sadhvi Press D Subbaiah Road Mysore.

ಸ್ವಾತಂತ್ರ್ಯ ದಿನಾಚರಣೆ

ಜಿ ರಂಗಸಭೆ

ಮೈಸೂರು ೨೪

ಮೊನ್ನೆ ಸಂಜೆ ಸ್ವಾತಂತ್ರ್ಯ ಸ್ಮಾರಕ ದಿನಾಚರಣೆಯ ಪ್ರಯುಕ್ತ ಟೌನ್ ಹಾಲ್ ವೈದಾನದಲ್ಲಿ ಶ್ರೀ ಎಸ್ ಜನ್ನಯ್ಯನವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯಿತು. ಶ್ರೀಗಳಾದ ಎಸ್ ರಂಗಣ್ಣಯ್ಯ ಮೀರ್ ನೂರ್ ಹುಸೇನ್, ಕೆ ಪುಟ್ಟಸ್ವಾಮಿ ರಾಜಂಕಿಟ್ಟಿ ಮುಂತಾದವರು ಭಾಷಣ ಮಾಡಿದರು. ಎರಡು ತಕ್ಷಣಗಳಂದ ಹಿಂದೂ ಸ್ಥಾನದ ಮೇಲೆ ಇದ್ದ ಬ್ರಿಟಿಷರ ಆಧಿಕಾರವು ಈಗ ಪೂರ್ಣವಾಗಿ ಸ್ವಾತಂತ್ರ್ಯವು ಲಭಿಸಿರುವುದೆಂದೂ ಇನ್ನು ಮುಂದೆ ಭಾರತೀಯರು ತಮ್ಮ ಸ್ವಾತಂತ್ರ್ಯವನ್ನು ಸದುಪಯೋಗಪಡಿಸಿಕೊಂಡು ರಾಷ್ಟ್ರೀಯ ದ್ಧಾರ ಕಾರ್ಯದಲ್ಲಿ ತೊಡಗಬೇಕೆಂದೂ, ಭಾಷಣಕಾರರು ಹೇಳಿದರು ಸಂಸ್ಥಾನದ ವಿಚಾರವಾಗಿ ಮಾತನಾಡುತ್ತಾ ಹತೋಟಿಗಳು ಒಂದೊಂದಾಗಿ ರದ್ದಾಗುತ್ತಿವೆಯೆಂದೂ ಅಧಾರದ ಹತೋಟಿಯು ಮಾರ್ಚ್ ಅಂತ್ಯದೊಳಗೆ ಹೋಗುವುದೆಂದೂ ಬರುವ ತಿಂಗಳನಿಂದಲೇ ಪಡಿತರವನ್ನು ಹೆಚ್ಚಿಸಲಾಗುವುದೆಂದೂ ಹೇಳಿದರು ಹಾ ಮೀರ್ ನೂರ್ ಹುಸೇನ್‌ರವರು ಮಾತನಾಡುತ್ತಾ ನಮಗೆ ಸ್ವಾತಂತ್ರ್ಯವು ಲಭಿಸಿ ಪರದಾಸ್ಯವು ಶಪ್ತಿದ್ದರೂ ಕೂಡ ಪರಾವಲಂಬನೆಯು ನಮ್ಮ ಮನಸ್ಸಿನಿಂದ ಇನ್ನೂ ಸಂಪೂರ್ಣವಾಗಿ ಹೋಗಿಲ್ಲವೆಂದೂ, ಈಗ ನಡೆಯುತ್ತಿರುವ ಕೋಮುವಾರು ಗಲಭೆಗೆ ಬ್ರಿಟಿಷರು ಉಂಟು ಮಾಡುತ್ತಿರುವ ಒಡಕು ಧೋರಣೆಗಳೇ ಕಾರಣವೆಂದೂ, ಇದೀ ಧೋರಣೆಯಲ್ಲೇ ಪ್ರತಿಷೆಗಳ ವಿಚ್ಛಾಸ್ಥೆಗೆ ಪಾತ್ರವಾಗಿ ಅವರಿಗಾಗಿ ಸಚಿವವೂ ದುಡಿಯುತ್ತಿರುವ ಸಂಸ್ಥೆಯೆಂದರೆ ಕಾಂಗ್ರೆಸ್ ಒಂದೇ ಎಂದೂ ತಿಳಿಸಿದರು ಇನ್ನು ಮುಂದೆ ಹಿಂದೂ ಮುಸಲ್ಮಾನರು ಇತರರ ಪ್ರೋಧನೆಗಳಿಗೆ ಕಿವಿಗೊಡದೆ ಸೋದರ ಭಾವನೆಯಿಂದ ವರ್ತಿಸಿ ಈಗ ಬಂದಿರುವ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಬೇಕೆಂದೂ ಅವರು ಹೇಳಿದರು ಅಖಿಲ ಕಾಂಗ್ರೆಸ್ಸಿನಲ್ಲಿ ತಮಗಿರುವ ವಿಶ್ವಾಸಕ್ಕಾಗಿ, (ಅಧಿಕಾರ ಲಾಲಸೆಗಾಗಲ್ಲ) ತಾವೂ ಪಕ್ಷ ಕಾಂಗ್ರೆಸ್ಸಿಗೆ ಸೇರುವುದಾಗಿ ತಿಳಿಸಿದರು.

Mysore City Municipality

NOTICE

Sealed tenders will be received up to 4 p. m. on 30-1-1948 by the Municipal Engineer for the collection and supplying River Sand

Each tender must be accompanied with a challan for having remitted Rs 50 in the Municipal Treasury as earnest money For full particulars please see the Office Notice Board

S. Narayanaswamy,
Municipal Engineer

ಚಾಮರಾಜನಗರದ ತಾಲ್ಲೂಕು ಸಮ್ಮೇಳನ

ಮೇಲ್ಕಂಡ ಸಮ್ಮೇಳನವು ಈಗಿದ ೧೮ ನೇ ತಾ॥ ನಂಜನಗೂಡಿನ ವಕೀಲರಾದ ಶ್ರೀ ಎಸ್. ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರುಗಿತು ದೇವತಾ ಪ್ರಾರ್ಥನೆ ಸ್ವಾಗತಗಳಾದ ನಂತರ ಸುಪ್ರಾತ್ಮರ ಉಪವಾಸ ಮುಕ್ತಾಯವಾದುದಕ್ಕಾಗಿ ಸಂತೋಷ ಸೂಚಿಸುವ ನಿರ್ಣಯ ಮಾಡಲಾಯಿತು ಅನಂತರ ಅಮಲ್ಲಾರಂಭವಾದ ಶ್ರೀ॥ ಹೆಚ್ ತಾಲಪ್ಪನವರು ತಾಲ್ಲೂಕು ವರದಿಯನ್ನು ಓದಿದರು ಸಮ್ಮೇಳನದ ಅಂಗವಾಗಿ ವಸ್ತು ಪ್ರದರ್ಶನವೊಂದನ್ನೂ ವರ್ಪಡಿಸಲಾಗಿದ್ದಿತು ತಾಲ್ಲೂಕಿನ ಅಭಿವೃದ್ಧಿಗಾಗಿ ಶ್ರಮಿಸಿದ ೧೫ ಮಂದಿ ಪುರುಷರು ಮತ್ತು ಸರ್ಕಾರಿ ನೌಕರರಿಗೆ ಬೆಳ್ಳಿಯ ಪದಕಗಳನ್ನೂ, ೩೦ ಮಂದಿಗೆ ಯೋಗ್ಯತಾ ಪತ್ರಗಳನ್ನೂ ಹಂಚಲಾಯಿತು ಅಧ್ಯಕ್ಷರ ಭಾಷಣಾನಂತರ ಸಭೆಯು ಮುಕ್ತಾಯಗೊಂಡಿತು

ಬೆಳಿಗಿನ ಅಟಿಗಳು
28-1-48 ರಿಂದ
ಏಳು ದಿನಗಳು ಮಾತ್ರ
ಕೆಂಗ್ ಆಫ್ಸ್ ದಿ ಟೆಕ್ಸಾಸ್ ರೇಂಜರ್ಸ್
12 ಭಾಗಗಳ ಪೂರ್ತಿ ಸೀರಿಯಲ್
ಒಲಂಪಿಯಾ ಟಾಕೀಸ್

ಗೃಹಕೃತ್ಯದ ನೋಟೀಸು

ಮೈಸೂರು ಚಾಮುಂಡಿ ಬಡಾವಣೆ ಹೊಸ ಬಂಡೀಕೇರಿ ೨೬೬೪ ನೇ ನಂಬರು ಮನೆಯಲ್ಲಿ ವಾಸವಾಗಿರುವ ಲಕ್ಷ್ಮಯ್ಯನು ಈ ಮೂಲಕ ಸಮಸ್ತ ಜನಗಳಿಗೂ ತಿಳಿಸುವುದೇನೆಂದರೆ:—

ಮೈಸೂರು ಚಾಮುಂಡಿ ಬಡಾವಣೆ ಹೊಸ ಬಂಡೀಕೇರಿಯ ೨೬೬೪/೧ ನೇ ನಂಬರು ಮನೆಯು ಜೋಗಾದಿ ಮರಿಯಪ್ಪನ ಹಿರಿಯ ಮಗ ಜವರಪ್ಪನ ಹೆಸರಿನಲ್ಲಿ ಅಮಾನತ್ತಿನಲ್ಲಿರುತ್ತೆ. ಇದು ಬಿತ್ರಾರ್ಜಿತ ಸ್ವತ್ತಲ್ಲವಾದುದರಿಂದ ಇದನ್ನು ಯಾರೂ ಯಾವ ವಿಧದಲ್ಲೂ ಪರಭಾರೆ ಮಾಡಿಕೊಳ್ಳಬಾರದು. ಹಾಗೆ ಮಾಡಿಕೊಂಡಲ್ಲಿ ಆ ದರಿಂದುಂಟಾಗುವ ಕಜ್ಜನವ್ಯಗಳಿಗೆ ಆವರೇ ಜವಾಬ್ದಾರರಾಗುತ್ತಾರೆ

ಲಕ್ಷ್ಮಯ್ಯ

ಅಪೇರಾ ಟಾಕೀಸ್
ತಾ॥ ೨೮-೧-೪೮ ರಿಂದ
ಪ್ರತಿ ದಿನ ಮೂರು ಆಟಗಳು
- ಕನ್ನಗಿ -
(ತಮಿಳು)
ಪಾತ್ರ: ಕನ್ನಾಂಬ, ತಿನ್ನಪ್ಪ
ಎ ಎಳ್ ಕೃಷ್ಣ, ಟಿ ಎ ಮಧುರಂ

ಸಿಟಿ ಸ್ಕೌಟು ಮತ್ತು ಕಬ್ ರ್ಯಾಲಿ

ಮೈಸೂರು

ಇದೇ ತಿಂಗಳು ೩೧ ನೇ ತಾ॥ ಶನಿವಾರ ಮತ್ತು ಫೆಬ್ರವರಿ ೧ ನೇ ತಾ॥ ಭಾನುವಾರಗಳಲ್ಲಿ ಮೈಸೂರು ಸ್ಕೌಟು ಮತ್ತು ಗೈಡ್ ಗಳ ರ್ಯಾಲಿಯು ನಗರದಲ್ಲಿ ನಡೆಯುವುದು ಇದಕ್ಕೆ ಸಂಬಂಧಪಟ್ಟಂತೆ ಸ್ಕೌಟು ಗೈಡ್ ಗಳೂ, ಆಟಪಾಟ ಮತ್ತು ವಿನೋದಗಳೂ ೩೧ ನೇ ತಾ॥ ಶನಿವಾರ ಸಾಯಂಕಾಲ ಗಂಟೆಗೆ ಅಶೋಕ ಪರೇರಿಯ ಮುಂದೆ ಮೈದಾನದಲ್ಲಿ ನಡೆಯಲೇರ್ಪಡಿಸಿದೆ ಹಾಜರಾಗುವ ಸ್ಕೌಟ್-ಗೈಡ್ ಆಟಪಾಟಗಳನ್ನು ವೀಕ್ಷಿಸಿ ಉತ್ತೇಜನ ಕೊಡಬೇಕಾಗಿ ಮೂಲಕ ಕೋರಿದೆ.

ಬೆಳ್ಳಿಯ ಪ್ರಶ್ನೆ

ಬ್ರಿಟನ್ನಿನ ಬೆಳ್ಳಿಯನ್ನು ಅಮೆರಿಕ, ಫ್ರಾನ್ಸ್ ಮೊದಲಾದ ದೇಶಗಳಿಗೆ ಕಳುಹಿಸಲಾಗುತ್ತಿದೆಯೆಂದು ಪ್ರಚಾರವಾಗಿದೆ ಈ ನ ಮಂಗಳಗಳಿಗೆ ಒಂದಕ್ಕೆ ೩೦ ಪೌಂಡುಗಳಂತೆ ಅಮೆರಿಕದವರು ಕೊಂಡುಕೊಳ್ಳುತ್ತಿರುವುದೆಂದೂ ನೀರಿಗೆ ಬೆಳ್ಳುಗಳಿಗೆ ಪರ್ಯಾಯವಾದ ಹೆಚ್ಚಿನ ಗಿರಾಕಿ ಇದೆಯೆಂದೂ ಕೆಲವರು ಲಂಡನ್ನಿನಲ್ಲಿ ಈ ಧಾರಣೆಗಳ ಪ್ರದರ್ಶನವನ್ನು ಈಗ ತೆರೆಯಲಾಗಿದೆ

ಮೈಸೂರು ಸಿಟಿ ರೇಷನಿಂಗ್

ನಂ R 6-81/48

1948 ನೇ ಇಸವಿ ಜನವರಿ ತಿಂಗಳ 31 ನೇ ತಾರೀಖಿನ ದಿವಸ ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋಗಳಲ್ಲಾ ಕಲ್ಯಾಣಿಪುರಾನ್, ಸಕ್ಕರೆ ಮತ್ತು ಸಹಕಾರ ಸಂಘಗಳಲ್ಲಿ ಒಂದನೆಯ ಎಣಿಕೆ ನಾಡಬೇಕಾಗಿರುವುದರಿಂದ ಆ ದಿವಸ ವಿನೋಗಳು ಮುಚ್ಚಿರುತ್ತವೆ

(ಸಹಿ) ಎಂ. ಶ್ರೀನಿವಾಸಲು ನಾಯಕ
ಮೈಸೂರು, ರೇಷನಿಂಗ್ ಆಫೀಸರ್
೨೪-೧-೪೮ ಮೈಸೂರು ಸಿಟಿ.

ವುಡ್‌ಲ್ಯಾಂಡ್ಸ್
23-1-48 ರಿಂದ
ಅಮೋಘ ಎರಡನೇ ವಾರ
ದಿ ರಾತ್
(ಆಮೋಘ ಹಿಂದೀ ಚಿತ್ರ)
ಪಾತ್ರ — ಸ್ನೇಹ ಪ್ರಧಾ
(ಕರ್ನಾಟಕ ಫಿಲ್ಮ್ಸಂ ರಿಲೀಸ್)
ಪ್ರತಿ ದಿನ ಮೂರು ಆಟಗಳು
೨೮-೧-೪೮ ರಿಂದ
ಆಯಿ ಬಹಾರ
ಪಾತ್ರ — ಇಸಾಕ್, ಓಂಪ್ರಕಾಶ್
ಅಚ್ಚಲ ಮತ್ತಿತರರು
ಒಲಿಂಪಿಯಾ ಟಾಕೀಸ್

ಸಂಪುಟ ೬] ಗುರುವಾರ ೨೯-೧-೪೮ [ಸಂಚಿಕೆ ೧೩೮

ಗಾಂಧೀಜಿಯವರಿಗೆ ನೋಬೆಲ್ ಬಹುಮಾನ

ಜಿಲ್ಲಾ ಬೋರ್ಡು ಸಭೆ

ಮೈಸೂರು ೨೯

ಜಿಲ್ಲಾಬೋರ್ಡಿನ ಸಭೆಯು ನಿನ್ನೆ ಮಧ್ಯಾಹ್ನ ಶ್ರೀ ಹೆಚ್ ಎಂ. ಚಿನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಕೃಷ್ಣರಾಜನಗರ ತಾಲ್ಲೂಕು ಹೊಸೂರು ಮತ್ತು ಟಿ. ನರಸೀಪುರ ತಾಲ್ಲೂಕು ಮೂಗೂರು ಗ್ರಾಮಕ್ಕೆರು ಆಸ್ಪತ್ರೆ ಕಟ್ಟಡಕ್ಕಾಗಿ ಕೊಟ್ಟಿರುವ ೫ ಸಾವಿರ ರೂ ಗಳ ಜೊತೆಗೆ, ತಲಾ ೧ ಸಾವಿರ ರೂ ಗ್ರಾಂಟನ್ನು ಕೊಡಬೇಕೆಂದು ತೀರ್ಮಾನಿಸಲಾಯಿತು ಕೃಷ್ಣರಾಜನಗರ ತಾಲ್ಲೂಕು ಹಾಗ್ಯದಲ್ಲಿ ಒಂದು ಹೆಂಗಸರ ಆಸ್ಪತ್ರೆಯನ್ನು ಕಟ್ಟಲು ಅಲ್ಲಿನ ಗ್ರಾಮಸ್ಥರು ಕೊಟ್ಟಿರುವ ೧೦ ಸಾವಿರ ರೂ. ಗಳನ್ನು ಅಂಗೀಕರಿಸಲಾಯಿತು ಹುಣಸೂರು ತಾಲ್ಲೂಕು ಕಾವಡಗೆರೆಯಲ್ಲಿ ತೆರೆಯಲಾಗುವ ಆಯುರ್ವೇದ ಆಸ್ಪತ್ರೆಯ ಕಟ್ಟಡವನ್ನು ಕಟ್ಟಿಸಿಕೊಡಲು ದೋಡ್ಡಿನ ಸದಸ್ಯರಾದ ಶ್ರೀ ಸುಬ್ಬರಾವ್ ಚಾಟಿಗೆಯವರು ಒಪ್ಪಿರುವುದಕ್ಕೆ ಅವರನ್ನು ಅಭಿನಂದಿಸಲಾಯಿತು

ಜಿಲ್ಲೆಯಲ್ಲಿ ಕೈಗಾರಿಕೆ ಉದ್ಯಮ, ರಸ್ತೆಗಳ ದುರಸ್ತಿ, ಆಸ್ಪತ್ರೆಗಳ ನಿರ್ಮಾಣ-ಇವುಗಳಿಗಾಗಿ ೨೦ ಲಕ್ಷ ರೂ. ಸಾಲವನ್ನು ಪಡೆಯಬೇಕೆಂಬ ಸ್ಥಾಯೀ ಸಮಿತಿಯ ಸಲಹೆಯನ್ನು ಸಭೆಯಲ್ಲಿ ಪರೀಕ್ಷಿಸಿ, ಹೆಚ್ಚಿನ ವಿವರಗಳನ್ನು ಅಭ್ಯಸ್ತರು ಕೊಡಬೇಕೆಂದು ಕೋರಲಾಯಿತು.

ಜಿಲ್ಲಾಬೋರ್ಡು ನಿಧಿಯು ಇದುವರೆಗೆ ಮೂರು ತಿಂಗಳಿಗೆ ಒಂದಾವರ್ತಿ ನಡೆಯುತ್ತಿದ್ದುದನ್ನು ಇನ್ನು ಮುಂದೆ ಎರಡು ತಿಂಗಳಿಗೊಂದು ಬಾರಿ ನಡೆಸುವಂತೆ ತೀರ್ಮಾನಿಸಲಾಯಿತು ಸಭೆಯು ಕಾರ್ಯಕಲಾಪಗಳನ್ನು ಕನ್ನಡದಲ್ಲೇ ಬರೆದಿಡಬೇಕೆಂದು ತೀರ್ಮಾನಿಸಿ ನಿನ್ನೆ ಪ್ರಥಮತಃ ಅದರಂತೆಯೇ ನಡೆಸಲಾಯಿತು

ಶ್ರೀ ಸದ್ಗುರು ಸೇವಾ ಮಂಡಲಿ

ಬ್ರಹ್ಮೀ ಭೂತ ಶ್ರೀ ವಿದ್ಯಾಧಿನವ ವಾಲುಕೇಶ್ವರ ಭಾರತೀ ಶ್ರೀಗಳವರ ೭೪ ನೆಯ ಜಯಂತ್ಯುತ್ಸವವು ಸಂಸ್ಕೃತ ಮಹಾಪಾಠಶಾಲೆಯ ಆವರಣದಲ್ಲಿರುವ ಶ್ರೀ ಗುರುಗಳವರ ದೇವಾಲಯದಲ್ಲಿ ಫೆಬ್ರವರಿ ೧ ನೇ ತಾ|| ನಿನ್ನೆ ೪ ದಿನಗಳು ನಡೆಯುವುದು ಈ ಉತ್ಸವದ ಅಂಗವಾಗಿ ೧ ನೇ ತಾ|| ಸಂಜೆ ೬-೩೦ ಗಂಟೆಗೆ ವಿ|| ಕೆ ಶಂಕರ ನಾರಾಯಣ ಶಾಸ್ತ್ರಿಗಳವರಿಂದ 'ಗುರು-ಭಕ್ತಿ' ಎಂಬ ಉಪನ್ಯಾಸ, ೨ ನೇ ತಾ|| ಸಂಜೆ ೬.೩೦ ಕ್ಕೆ ಶ್ರೀ ಬಿ ಸಂಜೀವಯ್ಯನವರಿಂದ ಧರ್ಮಪತ್ನೀತಾ ವಾಚನ, ೩ನೇ ತಾ|| ಸಂಜೆ ೬.೩೦ ಕ್ಕೆ ಕೃಷ್ಣರಾಯರಿಂದ ಸಾವಿತ್ರೀ ವಿಜಯದ ಪದ್ಯ ವಾಚನ ಮತ್ತು ೪ ನೇ ತಾ|| ಸಂಜೆ ೬ ಗಂಟೆಗೆ ವಿ|| ಹಂಸಧ್ವೋತ್ಸವ ದಾಸರವರಿಂದ ಹರಿಕಥೆಗಳು ನಡೆಯುವವು

ಸ್ಕೌಟ್ ಕಮೀಷನರ ಭೇಟಿ

ನಂಜನಗೂಡು ೨೬

ಮೈಸೂರು ಜಿಲ್ಲಾ ಸ್ಕೌಟ್ ಕಮೀಷನರ ಆದ ಸರ್ದಾರ್ ಕೆ ಬಸವರಾಜೇ ಅರಸಿನವರು ಇಂದು ೨೬ ನೇ ತಾ|| ಇಲ್ಲಿಯ ಸ್ಥಳೀಯ ಸ್ಕೌಟುಗಳ ಸಂಸ್ಥೆಗಳಿಗೆ ಭೇಟಿ ಕೊಟ್ಟರು. ಮಿಡ್ಲ್ ಸ್ಕೂಲಿನಲ್ಲಿ ಏರ್ಪಡಿಸಲಾಗಿದ್ದ ಸ್ಕೌಟ್ ಪ್ರದರ್ಶನವನ್ನು ಪರೀಕ್ಷಿಸಿದರು. ಸ್ಥಳೀಯ ಎಲ್ಲ ಶಾಲೆಗಳ ಸ್ಕೌಟು ಮತ್ತು ಕ್ಯಬ್ಬುಗಳು ಸೇರಿ ಸರ್ದಾರರಿಗೆ ಒಂದು ಸತ್ಕಾರಕೂಟವನ್ನು ಏರ್ಪಡಿಸಿದ್ದರು.

ಕಾಂಗ್ರೆಸ್ ನಾಯಕರ ಆಮರಣಾಂತ ಉಪವಾಸ

ಗುಲ್ಬರ್ಗಾ ಜೈಲಿನಲ್ಲಿರುವ ಕಾಂಗ್ರೆಸ್ ಖೈದಿಗಳಿಗೆ ಕೊಡುತ್ತಿರುವ ಅಹಾರಾನುಹಿಂಸೆಗಳನ್ನು ಪ್ರತಿಭಟಿಸಿ ಹೈದರಾಬಾದ್ ಕಾಂಗ್ರೆಸ್ ನಾಯಕರಾದ ಶ್ರೀ ಆರ್ ಜಿ. ಜೋಷಿಯವರು ಆಮರಣಾಂತ ಉಪವಾಸವನ್ನು ಅವೇ ಜೈಲಿನಲ್ಲಿ ಪ್ರಾರಂಭಿಸಿದ್ದಾರೆಂದು ವರದಿಯಾಗಿದೆ

ಡೊಮಿನಿಯರ್ ಸಭೆಯ ಪಾರ್ಲಿಮೆಂಟರಿ ಸೆಕ್ರೆಟರಿ

ಭಾರತದ ಡೊಮಿನಿಯರ್ ಸಭೆಯ ನಾಯಕರಾದ ಪಂಡಿತ ನೆಹರೂರವರಿಗೆ ಪಾರ್ಲಿಮೆಂಟರಿ ಸೆಕ್ರೆಟರಿಗಳಾಗಿ ಶ್ರೀ ಸತ್ಯನಾರಾಯಣ ಸಿನ್ಹಾರವರನ್ನು ೧೫೦೦ ರೂ. ತಲು ಬಿನ ಮೇಲೆ ನೇಮಿಸಲಾಗಿದೆ.

ವಸ್ತು ಪ್ರದರ್ಶನ

ರಾಜಧಾನಿಯ ತಿಲಕ್ ಸಂಘದ ವಾರ್ಷಿಕೋತ್ಸವವು ಮುಂದಿನ ತಿಂಗಳು ಎರಡನೇ ವಾರದಲ್ಲಿ ನಡೆಯುವುದು ಈ ಸಂದರ್ಭದಲ್ಲಿ ಏರ್ಪಡಿಸಿರುವ ವಸ್ತುಪ್ರದರ್ಶನಕ್ಕೆ ಫೆಬ್ರುವರಿ ೧೦ ನೇ ತಾ|| ವ್ಯೋಗಾಗಿ ವಸ್ತುಗಳನ್ನು ಸಂಘಕ್ಕೆ ಕಳಿಸಬೇಕೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ

ಕುಂಟಿಟಗರ ವಿದ್ಯಾರ್ಥಿ ನಿಲಯ

ರಾಜಧಾನಿಯ ಕುಂಟಿಟಗರ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳು ಒಂದು ಹೇಳಿಕೆಯನ್ನಿತ್ತು, ಅಲ್ಲಿನ ವಿದ್ಯುದ್ದೂಷನಗಳನ್ನು ವಿವರಿಸಿದ್ದಾರೆ ನಿಲಯದ ಕಾರ್ಯ ನಿರ್ವಾಹಕ ಕುಂಡಲಿಯು ಲೋಪ ದೋಷಗಳನ್ನು ವಿದ್ಯಾರ್ಥಿಗಳ ಮೇಲೆ ಹೊರಿಸಿ, ನಿಲಯವನ್ನು ಮುಚ್ಚಿದ್ದಾರೆ ನಿಲಯಂಧನೆಗಳನ್ನು ಅನುಸರಿಸದೆ, ಮತ್ತು ಸಮಿತಿಯ ತೀರ್ಮಾನವಿಲ್ಲದೆ, ಲಾಡ್ಜಿಂಗ್ ಫೀಜನ್ನು ಒಂದು ರೂ. ವಸೂಲು ಮಾಡುತ್ತಿರುವರು ಮತ್ತು ಮೂರು ನಾಲ್ಕು ತಿಂಗಳಿನಿಂದಲೂ ದೀಪದ ವರ್ಚಾಡನ್ನೂ ಸಹ ಮಾಡದೆ ಇರುವರು ಈ ಲೋಪ ದೋಷಗಳನ್ನು ಸರಿಪಡಿಸಬೇಕೆಂದು ವಿದ್ಯಾರ್ಥಿಗಳು ಕೋರಿರುತ್ತಾರೆ

ತ್ಯಾಗರಾಜರ ಆರಾಧನೆ

ಶ್ರೀ ಪ್ರಸನ್ನ ಸೀತಾರಾಮನು ಮಂದಿರದಲ್ಲಿ ನಾಳೆ ಸಂಜೆ ೬.೩೦ ರಿಂದ ಶ್ರೀ ತ್ಯಾಗರಾಜ ಸ್ವಾಮಿಗಳವರ ಆರಾಧನೆಯು ನೆರವೇರಿಸಲ್ಪಡುವುದು ಈ ಸಂಬಂಧದಲ್ಲಿ ಸ್ಥಳೀಯ ವಿದ್ಯಾರ್ಥಿಗಳಿಂದ ತ್ಯಾಗರಾಜರ ಕೃತಿಗಳ ಪಠಣವನ್ನು ಏರ್ಪಡಿಸಲಾಗಿದೆ

ಕೆಲಸಗಾರರಿಗೆ ೧೫ ಟನ್ ಪಡಿತರ

ಕೃಂ ಮೂ (ವಿ) ಕೆಂಗೇರಿ ೨೪

ಫೆಬ್ರವರಿ ೧ ನೇ ತಾ|| ನಿಂದ ಆಹಾರದ ಪಡಿತರದ ಪ್ರಮಾಣವನ್ನು ಕೆಳಗೆ ಕಂಡಂತೆ ಹೆಚ್ಚಿಸಲಾಗುವುದೆಂದು ಸರ್ಕಾರದ ಪ್ರಕಟಣೆ ತಿಳಿಸುತ್ತದೆ. 'ಎ' ಕ್ಲಾಸ್ ಪತವರಿಗೆ-೬ ಟನ್ಸ್ ಅಕ್ಕಿ, ೩ ಟನ್ಸ್ ಗೋಧಿ ಒಟ್ಟು ೧೦ ಟನ್ಸ್‌ಗಳು 'ಬಿ' ಕ್ಲಾಸ್ ಪತವರಿಗೆ-೪.೫ ಟನ್ಸ್ ಅಕ್ಕಿ, ೧ ಟ. ಗೋಧಿ ೫ ಟನ್ಸ್ ದ್ವಿದಳ ಧಾನ್ಯಗಳು, ಒಟ್ಟು ೧೦ ಟನ್ಸ್ ಕೆಲಸಗಾರರಿಗೆ-೪.೫ ಟ ಅಕ್ಕಿ, ೧ ಟನ್ಸ್ ಗೋಧಿ, ೪.೫ ಟನ್ಸ್ ದ್ವಿದಳ ಧಾನ್ಯಗಳು, ಒಟ್ಟು ೧೫ ಟನ್ಸ್‌ಗಳು. ೮ ವರ್ಷಕ್ಕೆಂತ ಕಮ್ಮಿ ವಯಸ್ಸಿನ ಮಕ್ಕಳಿಗೆ ಅರ್ಧ ಪಡಿತರ

ಮುಸ್ಲೀರವು ದೇಶದ ವೈಗತಿಗೆ ಕಂಟಕ

ಕೈಗಾರಿಕೆಯ ಪ್ರಗತಿಗೆ ಕಂಡುಂಟು ಮಾಡಿ ಯಾವ ಪ್ರಯತ್ನವೂ ದೇಶದ ಅಭ್ಯುದಯಕ್ಕೆ ಕಂಟಕ ಪ್ರಾಯವೆಂದೂ ಜಲವಿದ್ಯುತ್ಸಾಧನಕ್ಕೆ ಇವರ್ಕಾರ ಸರಕಾರ ಕೈ ಗನ್ನು ದುರುಪಯೋಗಪಡಿಸಿಕೊಳ್ಳಕ್ಕಿರ ವುದು ಒಡನೇಹಾವಾದುದೆಂದೂ ದೆಹಲಿಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯು ಅಭಿಪ್ರಾಯಪಟ್ಟಿದೆ ಇವರಿಗೆ ಉತ್ಪತ್ತಿಯ ಕಡಿಗೆ ಹೆಚ್ಚು ಗಮನಕೊಟ್ಟು, ಜನರ ಕೊಂಡು ಕೊಂಡಿಗಳ ನಿವಾರಣೆ ಆಗ್ಗೆ ಸರ್ಕಾರವನ್ನು ಒತ್ತಾಯಿಸಬೇಕೆಂದೂ, ಕಾಂಗ್ರೆಸ್ ಕೆಲಸಗಾರು ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್‌ಗೆ ಹೊರತು, ರುಜ್ಞಾಪಕ ಕಾರ್ಮಿಕ ಸಂಸ್ಥೆಗೂ ಸೇರಕೂಡದೆಂದೂ ನಿರ್ಧಾಯಿಸಲಾಯಿತು

ಪ್ರಭುದೇವಾ ಟೋಕೀಸು

ಚಲನ ಚಿತ್ರಗಳ ಸೆನ್ಸಾರ್ ಮತ್ತು ವಿದ್ಯುಚ್ಛಕ್ತಿ ಕೊಂದರೆಗಳಿಂದ ರಾಜಧಾನಿಯ ಪ್ರಭುದೇವಾ ಟೋಕೀಸಿನವರು ಹೊಗಿನ ಪ್ರದರ್ಶನಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಿರುವರು

ತ್ಯಾಗರಾಜ ಆರಾಧನೆ

ಅಖಿಲ ಕರ್ನಾಟಕ ಮಕ್ಕಳ ಕೂಟ ಮತ್ತು ಮಹಿಳಾ ಮಂಡಲಿಯವರು ನಾಳೆ ಸಂಜೆ ೫-೩೦ ಗಂಟೆಗೆ ಲಕ್ಷ್ಮೀಪುರದ ಶಿಶು ವಿಹಾರದಲ್ಲಿ ಶ್ರೀ ತ್ಯಾಗರಾಜರ ಆರಾಧನೆ [illegible]

ಭದ್ರತಾ ಸಮಿತಿಯಿಂದ ಭಾರತವು ವಾಪಸಾಗುವುದೇ?

ವಿಶ್ವಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಕಾಶ್ಮೀರದ ಸಮಸ್ಯೆಯನ್ನು ಬಗೆಹರಿಸಲು ಪಡಿತೀರನೆ ನಡೆಯುತ್ತಿರುವ ಪ್ರಯತ್ನ ಇಂದು ಕಾಶ್ಮೀರದಲ್ಲಿರುವ ಧಾಳಿಕಾರರನ್ನು ಸಂಪೂರ್ಣವಾಗಿ ಓಡಿಸುವವರೆಗೂ ಭಾರತ ಸೈನ್ಯವನ್ನು ಅಲ್ಲಿಂದ ವಾಪಸು ಕರೆಸಲು ಮತ್ತು ಶೇಖ್ ಅಬ್ದುಲ್ಲರವರ ಸರ್ಕಾರವನ್ನು ಕಿತ್ತಿಸಲು ಭಾರತ ಸರ್ಕಾರವು ಒಪ್ಪುವುದಿಲ್ಲವೆಂದೂ, ಈ ಬಗ್ಗೆ ಭದ್ರತಾ ಸಮಿತಿಯಲ್ಲಿ ಒಪ್ಪಿಗೆ ದೊರೆಯದಿದ್ದರೆ ಅಲ್ಲಿಂದ ತನ್ನು ಪ್ರತಿ ಫಿಧಿಗಳನ್ನು ವಾಪಸು ಕರೆಸಿ ಆದರ ಸ್ಥಿತಿ ಹಾಗದಲ್ಲಿ ಹಾಗಿಯಾಗುವುದಿಲ್ಲವೆಂದೂ ಪ್ರಕಟಿಯಾಗಿದೆ.

ನಿಜಾಂ ಸೈನ್ಯಾಧಿಕಾರಿಗಳಿಗೆ ಪಾಕೀಸ್ತಾನದಲ್ಲಿ ಕೆಲಸ

ಹೈದರಾಬಾದ್ ಸೈನ್ಯದ ಹುದ್ದಾಧಿಕಾರಿಗಳಾದ ಇನೇಳು ಸಮ್ಯುಡ್ ಅಫಿಸರ್ ಎಪ್ಪತ್ತೆಂಟರಲ್ಲಿ ಪಾಕೀಸ್ತಾನ ಸೈನ್ಯದ ಮುಖ್ಯ ಕಮ್ಯಾಂಡರ್ ಪದವಿಯನ್ನು ಕೊಡಲು ಪಾಕೀಸ್ತಾನದಿಂದ ಕರೆಸಿ ಪ್ರಯತ್ನ ನಡೆದಿತ್ತೆಂದೂ, ಆದರೆ ಅವರಿಗೆ ಅಷ್ಟಾನ ಬಂದಿತ್ತೆಂದೂ, ಈಗ ಅವರು ಆದಷ್ಟು ಅಂಗೀಕರಿಸಿ ಪಾಕೀಸ್ತಾನದಲ್ಲಿ ಕೆಲಸ ಮಾಡಲು ಒಪ್ಪಿರುವರೆಂದೂ ವರದಿಯಾಗಿದೆ

ಹೇಳಿ!

ಆಹಾರ ಧಾನ್ಯ ಪಡೀಟು ವಿಷಯದಲ್ಲಿ
ನಿಮ್ಮ ಅಭಿಪ್ರಾಯವೇನು?
ಪ್ರಜಾ ಸರ್ಕಾರಕ್ಕೆ ಪ್ರಜಾಭಿಪ್ರಾಯವೇ
ಆಧಾರ.

ಪಡೀಟು — ಪಡಿತರ

ಬೇಕೊ? ಬೇಡವೊ?

ಮೊದಲ ಕೊಡುವವರು ಮೊದಲ ಪಾನ ಪತ್ರವನ್ನು ಯಾರಿಂದ ತೆಗೆದುಕೊಂಡರೋ ಅವರಲ್ಲೇ ಆದಷ್ಟು ಕೊಡಬೇಕಾಗಿ ಪ್ರಾರ್ಥನೆ. ಮೊದಲ ಕೊಡುವವರು ನಗರದಲ್ಲಿ ಎಷ್ಟಾದರೂ ಒಂದೇ ಕಡೆ ಒಂದೇ ಸಾರಿ ಮಾತ್ರ ಕೊಡಬೇಕು

ಮಾಮಾಮಕ ಸಂಸ್ಥಕ ಸಮಿತಿ

ಪೆಟ್ರೋಲ್ ಪಡೀಟು ರದ್ದು

ಬೆಂಗಳೂರಿನಲ್ಲಿ ಫೆಬ್ರವರಿ ೧ ನೇ ತಾ|| ನಿಂದ ಪೆಟ್ರೋಲಿಪೆ ಮೇಲಿದ್ದ ಪಡೀಟು ಯನ್ನು ಮತ್ತು ಮೋಟಾರು ವಾಹನಗಳ ಪಡೀಟುಯನ್ನೂ ರದ್ದು ಮಾಡಲಾಗುವುದೆಂದು ತಿಳಿಸಲಾಗಿದೆ

ಮಹಾತ್ಮರಿಗೆ ನೋಬೆಲ್ ಶಾಂತಿ ಪಾರಿತೋಷಕ

ಗಾಂಧೀಜಿಯವರಿಗೆ ನೋಬೆಲ್ ಶಾಂತಿ ಬಹುಮಾನವನ್ನು ಈ ವರ್ಷ ಕೊಡಬೇಕೆಂದು ಅಮೆರಿಕದ ಅನೇಕ ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ. ಕಳೆದ ೧೩ ತಿಂಗಳಿನಿಂದಲೂ ಶಾಂತಿ ಸ್ಥಾಪನೆಗಾಗಿ ದುಡಿಯುತ್ತಿರುವವರಲ್ಲಿ ಮಹಾತ್ಮರಿಗಿಂತ ಹೆಚ್ಚಿನವರು ಇನ್ನಾರೂ ಇಲ್ಲವೆಂದೂ ಮತ್ತು ಇವರಿಗೆ ಹಿಂದೂ ಮುಸ್ಲಿಂ ಸೌಹಾರ್ದತೆಗಾಗಿ ದುಡಿತ್ತಿರುವುದಕ್ಕಾಗಿ ಪ್ರಶಂಸೆಯ ಪತ್ರಗಳು ಬಂದಿವೆಯೆಂದು ಅವರನ್ನು ಭಾವಿಸಲು ಕಾರಣವಾಗಿದೆಯೆಂದೂ ತಿಳಿದುಬಂದಿದೆ ೧೫ ನೋಬೆಲ್ ಶಾಂತಿ ಬಹುಮಾನಗಳನ್ನು ಇಲ್ಲಿಯವರೆಗೆ ಕೊಟ್ಟವರೂ ಎಷ್ಟೋ ಖಂಡಿತರಿಗೆ ಒಂದೂ

ತೆಪ್ಪೋತ್ಸವ ಸಂಸರ್ಭದಲ್ಲಿ ಮೂವರ ಮರಣ

ಮಧ್ಯರಾತ್ರಿ ಶ್ರೀ ವೀರ-ಕ್ಷಿ ಆಂಜನೇಯರ ತೆಪ್ಪೋತ್ಸವವು ಅಲ್ಲಿನ ವೈಗೈ ನದಿಯಲ್ಲಿ ನೆನ್ನೆ ಜ. ದಿನ ನಡೆಯುತ್ತಿದ್ದಾಗ, ನದಿಯ ದಡದಲ್ಲಿದ್ದ ಪ್ರೇಕ್ಷಕರ ಗುಂಪಿನಿಂದ ಯಾರೋ ಒಬ್ಬರು, ಹುಡುಗಾಟಕ್ಕಾಗಿ, ನದಿಯ ಪ್ರವಾಹವು ಹೆಚ್ಚಿತ್ತಿದೆಯೆಂದು ಕೂಗಿ ಹೇಳ್ಳಲು ಜನರು ಗಾಬರಿ ಬಿದ್ದು ಚಲ್ಲಾಪಿಲ್ಲಿಯಾಗಿ ಓಡಲು ಆರಂಭಿಸಿದರು ಗಲಾಟೆಯಲ್ಲಿ ೩೦ ವರ್ಷದ ಯುವತಿಯೊಬ್ಬಳೂ, ಆಕೆಯ ಒಂದು ಮಗುವೂ ಮತ್ತೊಬ್ಬ ಬಾಲಕನೂ ತುಳಿಯಲ್ಪಟ್ಟು ಮೃತಿ ಹೊಂದಿದರು.

ಮಾಜಿ ಯೋಧರ ಸತ್ಯಾಗ್ರಹ

ತಿರುವಾಂಕೂರಿನ ಮಾಜಿ ಯೋಧರ ಬೇಡಿಕೆಗಳನ್ನು ಸರ್ಕಾರದವರು ಇದೇ ತಿಂಗಳ ೨೦ನೇ ತಾರೀಖಿನಲ್ಲಿಗಾಗಿ ಈಡೇರಿಸಿಕೊಡದಿದ್ದಲ್ಲಿ ಅವರುಗಳು ದಿವಾನರ ಬಂಗಲೆಯ ಮುಂದೆ ಸತ್ಯಾಗ್ರಹವನ್ನು ಮಾಡುವುದಾಗಿ ನಿರ್ಧರಿಸಿದ್ದಾರೆ.

ನೂತನ ಮಿಡ್ಲ್ ಸ್ಕೂಲು

ಬೈಸೂರು ಕಾಲ್ಲಾಳು ಬಳಿಯಲ್ಲಿ ಗ್ರಾಮಕ್ಕೆ ಒಂದು ಮಾಧ್ಯಮಿಕ ಶಾಲೆ ಮತ್ತು ತಿರುವಿಜಾರನ್ನು ಸರ್ಕಾರದವರು ಮಂಜೂರು ಮಾಡಿ, ಅವುಗಳನ್ನು ಕಳೆದ ತಿಂಗಳು ೧೧ನೇ ತಾರೀಖು ತೆರೆಯಲಾಯಿತು

ಚಾಮುಂಡೇಶ್ವರಿ ಟಾಕೀಸ್

29-1-48 ರಿಂದ

ಅಮೋಘ ೫ನೇ ವಾರ

★ ಜುಗ್ನು ★

[ಹಿಂದೀ ಸಾಮಾಜಿಕ ಚಿತ್ರ]

ವುಡ್‌ಲ್ಯಾಂಡ್ಸ್

ರಲ್ಲಿ 23-1-48 ರಿಂದ

ಅಮೋಘ ಎರಡನೇ ವಾರ

ದಿ ರಾತ್

(ಅಮೋಘ ಹಿಂದೀ ಚಿತ್ರ)

ಪಾತ್ರ :— ಸ್ನೇಹ ಪ್ರಭಾ

(ಕರ್ನಾಟಕ ಫಿಲ್ಮಂ ರಿಲೀಸ್)

ಕೋಟಿ ರೂಪಾಯಿನ ಅಕ್ಷರ ಪ್ರಚಾರ ಯೋಜನೆ

ಮಧ್ಯ ಸ್ಯಾಂತದಲ್ಲಿ ಅನಕ್ಷರತೆಯನ್ನು ನಿರ್ಮೂಲ ಮಾಡಲು, ಅಲ್ಲಿನ ಸರ್ಕಾರದವರು ೫ ವರ್ಷಗಳ ಯೋಜನೆಯೊಂದನ್ನು ತಯಾರಿಸಿದ್ದಾರೆಂದೂ, ಅದಕ್ಕಾಗಿ ೧ ಕೋಟಿ ರೂ ಗಳನ್ನು ಮಂಜೂರು ಮಾಡಿದ್ದಾರೆಂದೂ ಹೇಳಲಾಗಿದೆ

ಏಳು ವರ್ಷಕ್ಕೇ ಪ್ರವೀಣೆ

ನನ್ನ ಮಗ ಚಿನ್ನ ಮಾಕೇಗೌಡನು ನ ನನ್ನ ಪೆ ಲೆ ಇಲ್ಲದ ಮುತ್ತು ಅವನಾನಕ್ಕ ಮಾಡಿ ಸಾಧ್ಯ ಕೆಯಲ್ಲಿ ಗೆ ಗಳಿಂದ ನೇ ತಾರಂಪ್ರಕ್ಕೆ ದಿವಸ ಗೃಹಕೃತ್ಯದ ನೋಟೀಸೊಂದನ್ನು ಅಚ್ಚು ಹಾಕಿಸಿದುತ್ತಾನೆ ಸದರಿ ನೋ ಟೀಸಿನಲ್ಲಿ ನನ ಸದು ಮಾಡಿರ ವ ಸಂಗತಿ ಗಳೆಲ್ಲಾ ತಮಾಷೆ ಸಳ್ಳದ್ದು ನನಗೆ ಮೋಸ್ಕರ ಚನ್ನ ಮಾಕೇಗೌಡನಲ್ಲದೆ ಬ ಡನೇ ಹೆಂಡತಿ ಕರಗನ್ನು ಮತ್ತು ಇಬ್ಬರ ನೆಯೆಂ ಹೆಣ್ಣು ಮಕ್ಕಳುಗಳಿರುತ್ತಾರೆ ನನ್ನ ವೆ ಳ್ಳಿ ಮನಸು ನನಗೆ ಅವಮಾ ಇನ್ನಾ ನನ್ನನ್ನು ಹೊಡೆದು ಹೀಗಾಮಾ ನವಾಗಿ ಬೈದು ಮನೆ ಬಿಟ್ಟು ಹೊರ ಹೋಗಿದ್ದಾನೆ. ಹಾಲಿ ನನ್ನ ಸ್ವಾಧೀ ನದಲ್ಲಿರುವ ಎಲ್ಲಾ ಸ್ವತ್ತುಗಳೂ ನನ್ನ ಸ್ವ ಯಾರ್ಜಿತವಾದದ್ದು ಕಾರಣದ ಗ್ರಾಮ ದ ರ್ವೆ ಳಿ ಮತ್ತು ಶಾತನಹಳ್ಳಿ ಗ್ರಾ ಮದ ಪರ್ವೆ ಳಿ ನೇ ನಂಬರು ಜಮೀನು ಗಳು ಮಾತ್ರ ಪಿತ್ರಾರ್ಜಿತವಾದದ್ದು ನನ್ನ ಮಗನ ನನಗೆ ಯಾವ ಮೊಲಗನ್ನೂ ಕೊಟ್ಟಿರುವುದಿಲ್ಲ ಮತ್ತು ನನ್ನ ಸ್ವಯಾ ರ್ಜಿತವಾದದ್ದೆಲ್ಲಾ ನನ್ನ ಸ್ವಂತ ಸಂಪಾ ದನೆಯಿಂದ ಮಾಡಿದ್ದು ಪಿತ್ರಾರ್ಜಿತವಾ ಆಸ್ತಿಗಳ ವ ಮಾನವನ್ನೆ ಜೀವನಕ್ಕೆ ಸಾಲ ವಾಗಿಲ್ಲ ಕೇವಲ ದುರ್ವ್ಯಾಜ್ಯಗಳಿಂ ನನ್ನ ಮಗನ ಪತ್ರಿಕೆಯಲ್ಲಿ ಹಾಕಿಸಿದ್ದಕ್ಕೆ ನಾನು ಈ ವಿಷಯ ಗಳನ್ನು ತಿಳಿಸಬೇ ಬಂದಿರುತ್ತೆ.

ಶಾತನಹಳ್ಳಿಯ ರುಜು.

A. V Srikantaiah, B A, L L B

Advocate, Mysore

ನೀವಿನ್ನೂ ನೋಡಿಲ್ಲವೇ?

ಪ್ರಭುದೇವಾ ಟಾಕೀಸಿನಲ್ಲಿ

21-3-48 ರಿಂದ ಅಮೋಘ ಪ್ರಾರಂಭ

ಪ್ರತಿ ದಿನ ೩ ಆಟಗಳು

* ಇದು ನಿಜವೂ? *

—: ಪಾತ್ರ :—

ಬಾಲಚಂದ್ರ ✤ ಸರೋಜಿನಿ

ಮುಂತಾದವರು



ಸಂಪುಟ] ೬] ಸೋಮವಾರ ೨೨-೩-೪೮ [ಸಂಚಿಕೆ ೧೯೨

ಕಾಂಗ್ರೆಸ್ಸಿನ ಜಯಭೇರಿ! ಸ್ವತಂತ್ರರಿಗೆ ಧನ ನಾಶ

ಪತ್ರಿಕೋದ್ಯೋಗಿಗಳ ಸಂಘದ ವಾರ್ಷಿಕ ಕೂಟ

ಮೈಸೂರು ೨೨

ರಾಜಧಾನಿಯ ಪತ್ರಿಕೋದ್ಯೋಗಿಗಳ ಸಂಘದ ವಾರ್ಷಿಕ ಸಭೆಯು ಕೃಷ್ಣರಾಜ ನಾಗರದಲ್ಲಿ ನಿನ್ನೆ ನಡೆಯಿತು. ಸಂಘದ ಸದಸ್ಯರು ಬೆಳಗ್ಗೆ ಮೋಟಾರಿನಲ್ಲಿ ಅಲ್ಲಿಗೆ ಪ್ರಯಾಣ ಬೆಳೆಸಿ ಅಲ್ಲಿನ ಟ್ರಾವೆಲರ್ಸ್ ಬಂಗಲೆಯಲ್ಲಿ ಸಂಜೆಯವರೆಗೂ ತಂಗಿದ್ದರು. ಮಧ್ಯಾಹ್ನ ಚೊಕ್ಕ ಭೋಜನವಾದ ಮೇಲೆ ಸಭೆಯು ಶ್ರೀ ಆರ್. ಗೋಪಾಲ ಕೃಷ್ಣಯ್ಯರ ಅಧ್ಯಕ್ಷತೆಯಲ್ಲಿ ಜರುಗಿತು. ಕಾರ್ಯದರ್ಶಿಗಳಾದ ಶ್ರೀ ಜಿ ಎಲ್ ಸ್ವಾಮಿಯವರು ವಾರ್ಷಿಕ ವರದಿಯ ನ್ನೂ ಮತ್ತು ಆಯವ್ಯಯದ ಪಟ್ಟಿಯನ್ನೂ ಓದಿದರು. ದೀರ್ಘ ಚರ್ಚೆಯಾದ ನಂತರ ಅವನ್ನು ಅಂಗೀಕರಿಸಲಾಯಿತು. ನಂತರ ಶ್ರೀ ಆರ್. ಗೋಪಾಲಕೃಷ್ಣಯ್ಯರನ್ನು ಅಧ್ಯಕ್ಷರನ್ನಾ ಗಿಯೂ, ಶ್ರೀ ಎಂ. ವಿ. ಜೋಯಿಸರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀ ಜಿ ಎಲ್ ಸ್ವಾಮಿಯವರನ್ನು ಕಾರ್ಯದರ್ಶಿಯನ್ನಾಗಿ ಯೂ ಪುನಃ ಚುನಾಯಿಸಲಾಯಿತು. ಸಂಘಕ್ಕೆ ಟೆಲಿಫೋನ್ ಸೌಕರ್ಯವನ್ನು ಒದಗಿಸು ವುದಾಗಿ ಸರ್ಕಾರದವರು ಭರವಸೆ ಕೊಟ್ಟ ರ್ದರೂ ಇಲ್ಲಿಯವರೆಗೆ ಅದನ್ನು ಮಂಜೂರು ಮಾಡದೆ ಇರುವ ಬಗ್ಗೆ ವಿಷಾದವನ್ನು ವ್ಯಕ್ತಪಡಿಸಿ ಕೂಡಲೇ ಅದನ್ನು ಹಾಕಿಸಿ ಕೊಡಬೇಕೆಂದು ಸರ್ಕಾರವನ್ನು ಒತ್ತಾಯ ಪಡಿಸಬೇಕೆಂದು ಅಧ್ಯಕ್ಷರಿಗೆ ಅಧಿಕಾರ ಕೊಡಲಾಯಿತು. ಸಂಘದ ಅಭಿವೃದ್ಧಿಗೆ ಸಂಬಂಧಪಟ್ಟ ಇತರ ವಿಷಯಗಳ ಮೇಲೆ ಚರ್ಚೆಯಾಗಿ ಸಭೆಯು ವಂದನಾರ್ಪಣೆ ಮೊದಲಾದ ಮುಕ್ತಾಯವಾಯಿತು.

ಅನಂತರ ಸದಸ್ಯರುಗಳು ಬೃಂದಾವನ ಗಾರ್ಡನ್ಸ್‌ಗೆ ಇತ್ತು ರಾತ್ರಿ ರಾಜಧಾನಿಗೆ ಹಿಂತಿರುಗಿದರು.

ಆಕಾಶವಾಣಿಯ ವಿಶೇಷ ಕಾರ್ಯಕ್ರಮ

ಗ್ರಾಮಾಂತರಗಳಲ್ಲಿ ರೇಡಿಯೋ ಪ್ರಸಾರ ಅಂಗವಾಗಿ ಪ್ರತಿ ದಿನವೂ ವಿಶೇಷ ಪ್ರಸಾರವನ್ನು ಆಕಾಶವಾಣಿಯವರು ವಿಶೇಷಿಸಿರುವರು. ಈ ಸಂಬಂಧದಲ್ಲಿ ಈ ದಿನ ಸಂಜೆ ೬.೩೦ ಗಂಟೆಯಿಂದ ಒಂದು ಗಂಟೆ ಕಾಲ, ಕುಕ್ಕರ ಹಳ್ಳಿಯ ನಿವಾಸಿಗಳಿಂದ ಗ್ರಾಮದಲ್ಲೇ ವಿಶೇಷ ಕಾರ್ಯಕ್ರಮವನ್ನು ಏರ್ಪಡಿಸಲಾಗುವುದು.

ಕೃಷ್ಣರಾಜೇಂದ್ರ ಗಿರಣಿ ನೌಕರರ ಸಂಘ

ಮೊನ್ನೆ ಬೆಳಿಗ್ಗೆ ಮೈಸೂರು ನಿವಾಸಿಗಳಾದ ಕೃಷ್ಣರಾಜೇಂದ್ರ ಗಿರಣಿ ನೌಕರರು ಆಸಕ್ತಿಯಿಂದ ಲೇಬರ್ ಅಧಿಕಾರಿಗಳಾದ ಶ್ರೀ ದ್ವಾರಕಾನಾಥರವರ ಅಧ್ಯಕ್ಷತೆಯ ಸೇರಿ ತಮ್ಮ ಸಂಘವೊಂದನ್ನು ಸ್ಥಾಪಿಸಿದರು. ಶ್ರೀ ಎ ಜಿ ರಾಮಯ್ಯನವರು ಇದರ ಅಧ್ಯಕ್ಷರಾಗಿಯೂ, ಶ್ರೀ ಇ ಜಿ ಚರ್ಚಯವರು ಕಾರ್ಯದರ್ಶಿಯಾಗಿಯೂ, ಶ್ರೀ ಟಿ ಪಿ ರಾಮಚಂದರವರು ಕೋಶಾಧ್ಯಕ್ಷರಾಗಿಯೂ ಆರಿಸಲ್ಪಟ್ಟರು.

ಮಾಧ್ವ ಸಂಘ

ನೀಲ್ಮಂಡ ಸಂಘದ ಆಶ್ರಯದಲ್ಲಿ ಕೃಷ್ಣ ಜನ್ಮಾಷ್ಟಮಿ ಶ್ರೀ ವ್ಯಾಸಂಜ ವಿರಚಿತ ಕೃಷ್ಣ ಮತ್ತು ನಾಳೆದ್ದು ಸಾಯಂಕಾಲ ಗಂಟೆಗೆ ವಿದ್ವಾನ್ ವೇ॥ ಸೋದಿ ರಾಮಚಂದ್ರಾಚಾರ್ಯರು ಮಧ್ವ ಸಿದ್ಧಾಂತಗಳು ಎಂಬ ವಿಷಯವಾಗಿ ಉಪನ್ಯಾಸ ಮಾಡುವರು.

ಗವರ್ನರ್ ಜನರಲ್ಲರ ಆಗಮನ

ಸ್ವಂ ಸು.ಫೋನ್] ಬೆಂಗಳೂರು ೨೨

ಭಾರತದ ಗವರ್ನರ್ ಜನರಲ್‌ರಾದ ಲಾರ್ಡ್ ಮೌಂಟ್ ಬ್ಯಾಟನ್ನರವರೂ ಮತ್ತು ಅವರ ಪತ್ನಿಯವರೂ ನಿನ್ನೆ ಮಧ್ಯಾಹ್ನ ೨-೩೦ ಗಂಟೆಗೆ ವಿಮಾನದಲ್ಲಿ ಬೆಂಗಳೂರಿಗೆ ಬಂದರು. ಪ್ರಧಾನ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರೂ ಇತರ ಅಧಿಕಾರಿಗಳೂ ಅವರನ್ನು ವಿಮಾನ ಕಾರ್ಖಾನೆಯ ವಿಶ್ರಾಂತಿಯಲ್ಲಿ ಸ್ವಾಗತಿಸಿದರು. ಅರ್ಧ ಗಂಟೆಯ ನಂತರ ಅವರು ಅದೇ ವಿಮಾನದಲ್ಲಿ ತಿರುವಾಂಕೂರಿಗೆ ಪ್ರಯಾಣ ಬೆಳೆಸಿದರು. ಬರುವ ತಿಂಗಳು ೨೨ ನೇ ತಾ॥ ಅವರು ಮೈಸೂರಿಗೆ ಭೇಟಿ ಕೊಡುವರು.

ಜಕೋಸ್ಲವೇಕಿಯಾದಲ್ಲಿ ೧೦ ಸಾವಿರ ಲಕ್ಷ್ಮಪ್ರಭೇಶ್ವರರು

ಸರ್ವಶ್ರೀ ಮಂತ್ರಿಗಳ ಬಗ್ಗೆ ಪರೀಕ್ಷೆ ನಡೆಯಬೇಕಿದೆ. ಜಕೋಸ್ಲವೇಕಿಯಾದ ವಿದೇಶಾಂಗ ಕಮ್ಯೂನಿಸ್ಟ್ ಸರ್ಕಾರವು ಅಜ್ಞೆ ಮಾಡಿದೆ. ಅಲ್ಲಿ ಈಗ ೧೦ ಸಾವಿರ ಮಂದಿ ಲಕ್ಷ್ಮಪ್ರಭೇಶ್ವರರಿರುವರೆಂದೂ, ಇವರು ಪ್ರತಿಕ್ರಿಯಾವಾದಿಗಳಾಗಿರುವ ಸಾಧ್ಯತೆ ಇರುವುದರಿಂದ ಇವರೆಲ್ಲರೂ ಲಾಭಕೋರರು ಮತ್ತು ಕಳ್ಳಸಂತೆ ವ್ಯಾಪಾರಿಗಳೆಂದೂ ಅವಾಮಿಸಲಾಗಿದೆ.

ಬಂಡಿಗೆದಾರರ ಸಂಘ

ಮೈಸೂರು ೨೨

ವೆಲ್ಲಿಂಗ್ ಸಂಘವನ್ನು ಅರೋಕ ರಸ್ತೆಯ ಸೆಂಟ್ರಲ್ ಕೆಫೆ ಮಹಡಿಯ ಮೇಲೆ ನಿನ್ನೆ ಸ್ಥಾಪಿಸಲಾಯಿತು. ಮೀ॥ ಅಜೀಜ್ ಎ ಸತ್ತಾರ್ ಸೇಟ್‌ರವರು ಸಂಘದ ಅಧ್ಯಕ್ಷರಾಗಿಯೂ, ಶ್ರೀಗಳಾದ ಎಂ ಕೆ ನರಸಿಂಹಶೆಟ್ಟಿಯವರು ಕಾರ್ಯದರ್ಶಿಗಳಾಗಿಯೂ, ಎಂ ಎಲ್ ತಿಮ್ಮಯ್ಯನವರು ಉಪಕಾರ್ಯದರ್ಶಿಗಳಾಗಿಯೂ ಮತ್ತು ಕೆ ಎಸ್ ಅಹ್ಮದ್‌ನವರು ಖಜಾಂಚಿಗಳಾಗಿಯೂ ಚುನಾಯಿಸಲ್ಪಟ್ಟರು.

ಮುಜಾತ್ಮನ ನಿಧನದ ಬಗ್ಗೆ ಸಂತಾಪ ಸೂಚಿಸುವ ಮತ್ತು ಇತರ ಗಣ್ಯ ನಿಧನಗಳಿಗೆ ಸಂತಾಪ ಸೂಚಿಸುವ ಸಲುವಾಗಿ ಈಚೆಗೆ ಮನೆಗಳ ಮೇಲೆ ಕಪ್ಪು ಬಾವುಟಗಳನ್ನು ಕಟ್ಟಿದ್ದ ಮನೆ ಮಾಲಿಕರಿಗೆ ಸಂಘದ ಪರವಾಗಿ ಧನ್ಯವಾದಗಳನ್ನು ಅರ್ಪಿಸಲಾಗಿದೆ. ಅಲ್ಲದೆ ಮುಂದೆ ಯಾವುದೇ ಗಣ್ಯ ವ್ಯಕ್ತಿಯ ನಿಧನಕ್ಕೆ ಸಂತಾಪ ಸೂಚಿಸಲು ಕಪ್ಪು ಬಾವುಟಗಳನ್ನು ಕಟ್ಟಿದ್ದಲ್ಲಿ ಅಂಥ ಮನೆ ಮಾಲಿಕರಿಗೆ ಸಂಘದ ಪರವಾಗಿ ಧನ್ಯವಾದಗಳನ್ನು ಅರ್ಪಿಸಲಾಗುವುದೆಂದು ಕಾರ್ಯದರ್ಶಿಗಳು ತಿಳಿಸಿದ್ದಾರೆ.

ದಂಡಿನಲ್ಲಿ ಕಾಂಗ್ರೆಸ್ಸಿಗೆ ವಿಜಯ

ಸ್ವತಂತ್ರರ ಹಣ ಮುಟ್ಟಿಲು ಕೋಲು

ಸ್ವಂ ಸು.ಫೋನ್] ಬೆಂಗಳೂರು ೨೨

ದಂಡಿನ ಪ್ರದೇಶದಿಂದ ರಾಜ್ಯಾಂಗ ಸಭೆಗೆ ನಡೆದ ಚುನಾವಣೆಯ ಓಟುಗಳ ಎಣಿಕೆಯು ನಿನ್ನೆಯೇ ನಡೆಯಿತು. ಕಾಂಗ್ರೆಸ್ ಉಮೇದುವಾರರಾದ ಶ್ರೀಗಳು ಶ್ಯಾಮ್ಯರ್‌ಡಾಸ್ ಮತ್ತು ಶ್ಯಾಮಣ್ಣ ಗೌಡ ಇವರುಗಳಿಗೆ ವಿಶೇಷ ಬಹುಮತವು ದೊರೆತು ಅವರು ಜಯವನ್ನು ಗಳಿಸಿದರು. ಸ್ವತಂತ್ರ ಉಮೇದುವಾರರಾದ ಶ್ರೀಗಳು ಶ್ರೀನಿವಾಸಯ್ಯ ಮತ್ತು ಶ್ರೀನಿವಾಸ್ ರವರುಗಳಿಗೆ ಒಟ್ಟು ಓಟುಗಳಲ್ಲಿ ಎಂಟನೇ ಒಂದು ಭಾಗಕ್ಕಿಂತ ಕಡಿಮೆ ಬಂದುದರಿಂದ ಅವರಿಬ್ಬರೂ ಠೇವಣಿಗಳನ್ನು ಕಳೆದು ಕೊಂಡರು

ಗಾಂಧೀ ಸ್ಮಾರಕ ಫುಟ್ಬೆ

ಪಟ್ಟಿವಾಹಿನಿಯಲ್ಲಿ ಮಹಾತ್ಮರ ಭಸ್ಮಾವಶೇಷವನ್ನು ವಿಸರ್ಜಿಸಿದ ಸ್ಥಳಕ್ಕೆ ಗಾಂಧೀಜಿಮಂದರ ಪೆಸರನ್ನಿಡಬೇಕೆಂಬ ವಿಚಾರವು ಮೇ ೩೬ ನೇ ತಾ॥ ಸ್ವಾರಂಭವಾಗಲಿರುವ ಪ್ರಜಾಪ್ರತಿನಿಧಿ ಸಭೆಯಲ್ಲಿ ಪರಿಶೀಲನೆಗೆ ಬರುವುದೆಂದು ತಿಳಿದಿದೆ.

ಹೈದರಾಬಾದಿನಲ್ಲಿ ೫೦೦ ವರ್ತಕರುಗಳ ಹರತಾಳ

ಇತ್ತೀಚೆಗೆ ಮುಸ್ಲಿಮೀ ಸಂಸ್ಥೆಯೊಂದರ ದಾಂಧಲೆಯನ್ನು ಪ್ರತಿಭಟಿಸಿ ಹೈದರಾಬಾದಿನ ೫೦೦ ವರ್ತಕರುಗಳು ತಮ್ಮ ಅಂಗಡಿಗಳನ್ನು ಕಳೆದ ೧೯ನೇ ತಾ॥ ನಿಂದ ಮೂರು ದಿನಗಳು ಮುಚ್ಚಿ ಹರತಾಳವನ್ನು ಆಚರಿಸಿದ್ದರು. ಅವರುಗಳು ಪ್ರಧಾನಿಯವರಿಗೆ ಒಂದು ಪತ್ರವನ್ನು ಬರೆದು ಸಂಸ್ಥಾನದಲ್ಲಿ ನಡೆಯುತ್ತಿರುವ ದೌರ್ಜನ್ಯವನ್ನು ತಿಳಿಸಿ ವರ್ತಕರುಗಳಿಗೆ ರಕ್ಷಣೆ ಕೊಡಬೇಕೆಂದು ವ್ಯಾಥಿಸಿರುತ್ತಾರೆ

ರೀವಾ ಮಾಜಿ ಅರಸರ ಬಂಧನ

ರೀವಾ ಸಂಸ್ಥಾನದ ಮಾಜಿ ಅರಸರಾದ ರಾಜಾ ಗುಲಾಬ ಸಿಂಗ್‌ರವರನ್ನು ಕಳೆದ ಶುಕ್ರವಾರ ಬಲವಾಬ ವಿಚಾರಣೆ ಮಾಡಿ ಬಿಡುಬಿಟ್ಟಿದ್ದು ಇಂದಿನವರೆಗೂ ಬಿಡುಗಡೆಯಾಗಿದೆ. ಅವರು ಸಂಸ್ಥಾನದ ಆಳ್ವಿಕೆಯಲ್ಲಿ ಪೊಲೀಸ್ ಇಲಾಖೆಯನ್ನು ಸೇರಿಸದೆ ಒಂದು ಸಂಸ್ಥಾನದೊಡನೆ ಆಕ್ಷೇಪಾರ್ಹವಾದ ರೀತಿಯಲ್ಲಿ ಸಂಪರ್ಕವಿಟ್ಟುಕೊಂಡಿದ್ದರೆಂದು ತಿಳಿದುಬಂದಿದೆ.

ಡೆಪ್ಯೂಟಿ ಸಿ. ದಾಸಪ್ಪ ಮತ್ತು ಟಿ. ಮರಿಯಪ್ಪನವರು ಚುನಾಯಿತರಾದರು

ಡಿ. ಸುಮಿತ್ರರವರ ರೇವಣಿ ಮುಟ್ಟುಗೋಲು

ಮೈಸೂರು.

ಈ ದಿನ ದೆಳಿಗ್ಗೆ ರಾಜ್ಯಾಂಗ ಸಭಾ ನಾವಣೆಯ ಓಟುಗಳ ಎಣಿಕೆಯು ನಡೆದು ಶ್ರೀಗಳಾದ ಡೆಪ್ಯೂ ಸಿ ದಾಸಪ್ಪ ಮತ್ತು ಮರಿಯಪ್ಪನವರುಗಳು ಚುನಾಯಿತರಾದರು. ಶ್ರೀಗಳಾದ ಕೆ ಎನ್ ಎಸ್ ನಂ ಗೌ, ಎ ವೆಂಕಟೇಶಯ್ಯ ಮತ್ತು ಡಿ ಸುಬ್ರಹ್ಮಣ್ಯರವರು ಹೀನಾಯವಾಗಿ ಸೋತರು.

ಶ್ರೀಸುಮಿತ್ರರವರಿಗೆಯಿಂಟನೇ ಒಂದು ಭಾಗಕ್ಕಿಂತ ಕಡಿಮೆ ಓಟುಗಳು ಬಂದುದರಿಂದ ಅವರ ರೇವಣಿ ಹಣವು ಮುಟ್ಟುಗೋಲಾಯಿತು. ಓಟುಗಳ ವಿವರ ಈ ರೀತಿ ಇರುತ್ತದೆ:—

ಒಟ್ಟು ಓಟುಗಳು	೩೯೬೩
ಕೆಟ್ಟು ಹೋದವು	೧೫೩
ಶ್ರೀ ಡೆಪ್ಯೂ ಸಿ ದಾಸಪ್ಪ	೨೬೦
,, ಟಿ. ಮರಿಯಪ್ಪ	೨೧೯
,, ಕೆ ಎನ್ ಎಸ್ ಮೂರ್ತಿ	೧೫೫
,, ಎ. ವೆಂಕಟೇಶಯ್ಯ	೧೫
,, ಡಿ ಸುಬ್ರಹ್ಮಣ್ಯ	೨೧

ಈ ಚುನಾವಣೆಯ ಫಲಿತಾಂಶಗಳನ್ನು ಸಂಪಾದಿಸಿಕೊಳ್ಳಲು ನಿನ್ನೆಯಿಂದ ಸಕಲರಿಗೂ ಚುನಾವಣಾ ಸಮಿತಿ ಸಂಚಾಲಕರಾದ ಶ್ರೀ ನಾ. ಭೈರಪ್ಪನವರು ಸ್ವಂತ ಪೂರ್ವಕವಾದ ಸಂಪರ್ಕಗಳನ್ನು ಏರ್ಪಡಿಸಿರುತ್ತಾರೆ.

ಭಾಷ್ಯಂ ಮತ್ತು ಪನ್ನುಮಂಯ್ಯನವರ ವಿಜಯ

ಸ್ವಂ ಸು.ಫೋನ್] ಬೆಂಗಳೂರು ೨೨

ರಾಜ್ಯಾಂಗ ಸಭಾ ಚುನಾವಣೆಯ ಓಟುಗಳ ಎಣಿಕೆಯು ಈ ದಿನ ನಡೆಯಿತು. ಶಾಸಿಗ್ರೆಸ್ ಉಮೇದುವಾರರುಗಳಾದ ಶ್ರೀಗಳಾದ ಕೆ. ಟಿ. ಭಾಷ್ಯಂ ಮತ್ತು ಕೆ ಪನ್ನುಮಂಯ್ಯನವರು ಚುನಾಯಿತರಾಗಿ ಶ್ರೀ ನೀಲಗಿರಿ ರಾಜೀವಯ್ಯನವರು ಪರಾಜಿತರಾದರು. ಓಟುಗಳ ಸಂಖ್ಯೆ ಈ ರೀತಿ ಇದೆ

ಒಟ್ಟು ಓಟುಗಳು	೪೪೧೯
ಕೆಟ್ಟು ಹೋದವು	೧೫೫
ಶ್ರೀ ಭಾಷ್ಯಂ	೨೭೮೩
,, ಪನ್ನುಮಂಯ್ಯ	೨೫೬೨
,, ನೀಲಗಿರಿ ರಾಜೀವಯ್ಯ	೧೫೫೫

ಹೈಭುಗಳೊಂದನೆ ಜಿಲ್ಲಾ ಬೋರ್ಡ್ ಅಧ್ಯಕ್ಷರ ಭೇಟಿ

ಮೈಸೂರು ೨೨

ಮೈಸೂರು ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಶ್ರೀ ಎಚ್. ಎಂ. ಚನ್ನಬಸವಪ್ಪನವರು ಈ ದಿನ ಬೆಳಿಗ್ಗೆ ಪಟಮನೆಯಲ್ಲಿ ಶ್ರೀ ಮನ್ಮಹಾರಾಜರನ್ನು ಭೇಟಿ ಮಾಡಿ ಹಿಂದಿರುಗುವ ವೇಳೆಯಲ್ಲಿ ಅಲ್ಲಿ ಹಾಜರಿದ್ದ ಸಾರ್ವಜನಿಕರ ಕೋರಿಕೆಯ ಮೇರೆಗೆ ಸ್ವಲ್ಪ ಕಾಲ ಅಲ್ಲಿ ತಂಗಿದ್ದರು. ಆಗ ಅವರು ಮಾತನಾಡುತ್ತಾ ಮೈಸೂರು ಜಿಲ್ಲಾ ಬೋರ್ಡ್ ಕೈಗೊಂಡಿರುವ ಕೆಲಸಗಳ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿದರು. ಪ್ರಸ್ತುತ ಇರುವ ಮಂಡಲ ಪಂಚಾಯಿತಿಗಳ ಬದಲಿಗೆ ಗ್ರಾಮ ಪಂಚಾಯಿತಿಗಳನ್ನು ಸ್ಥಾಪಿಸಲು ಸರ್ಕಾರವು ನಿರ್ಧರಿಸಿರುವುದಾಗಿ ತಿಳಿಸಿದರು. ಪ್ರಸ್ತುತ ಇರುವ ಮಂಡಲ ಪಂಚಾಯಿತಿಗಳ ಅಧ್ಯಕ್ಷರುಗಳು ಹೊಸ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರಾಗಿ ಆಯ್ಕೆಯಾಗಲು ಅರ್ಹರಾಗಿರುವುದಿಲ್ಲವೆಂದೂ, ಈ ವಿಚಿತ್ರ ನೀತಿಯಿಂದಾಗಿ ಅನೇಕ ಸಮರ್ಥ ಮತ್ತು ಅನುಭವಿ ಸದಸ್ಯರುಗಳು ಚುನಾವಣೆಯಲ್ಲಿ ನಿಲ್ಲಲು ಅನರ್ಹರಾಗಿರುವುದಾಗಿಯೂ ತಿಳಿಸಿದರು. ಪ್ರಸ್ತುತ ಇರುವ ಮಂಡಲ ಪಂಚಾಯಿತಿಗಳ ಅಧ್ಯಕ್ಷರುಗಳು ಹೊಸ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರಾಗಿ ಆಯ್ಕೆಯಾಗಲು ಅರ್ಹರಾಗಿರುವಂತೆ ಸರ್ಕಾರವು ಕಾನೂನಿಗೆ ತಿದ್ದುಪಡಿ ತರಬೇಕೆಂದು ಅವರು ಸಲಹೆ ನೀಡಿದರು. ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಅನೇಕ ಪ್ರಶ್ನೆಗಳನ್ನು ಕೇಳಿ ಅವುಗಳಿಗೆ ಸಮಾಧಾನಕರವಾದ ಉತ್ತರಗಳನ್ನು ಪಡೆದರು. ಅನಂತರ ಅವರು ಹಿಂತಿರುಗಿದರು.

ಹಿಟ್ಲರನಿಗೆ ಮಹಾತ್ಮರ ಪತ್ರ

ಸಂಜಾಯತಿ ತೀರ್ಪಿಗೆ ಒಪ್ಪಿ ಯುದ್ಧ ನಿಲ್ಲಿಸಲು ಸಲಹೆ

೧೯೪೧ ನೇ ವರ್ಷದ ಕ್ರಿಸ್‌ಮಸ್ ಪರ್ವದಲ್ಲಿ ಮಹಾತ್ಮರು ಹಿಟ್ಲರನಿಗೆ ಒಂದು ಪತ್ರವನ್ನು ಒರೆದು, ಮಾನವೀಯತೆಯ ಹೆಸರಿನಲ್ಲಿ ಘೋರ ಯುದ್ಧವನ್ನು ನಿಲ್ಲಿಸ ಬೇಕೆಂದು ಮನವಿ ಮಾಡಿದ್ದರೆಂದು "ಇಂಡಿಯನ್ ಪಾರ್ಲಿಮೆಂಟ್" ಎಂಬ ಪತ್ರಿಕೆಯು ಪ್ರಕಟಿಸಿರುತ್ತದೆ ಇಂದಿನ ಭಾರತ ಸರ್ಕಾರವು ಈ ಪತ್ರವನ್ನು ಒಟ್ಟಿರನಿಗೆ ಕಳುಹಿಸಲೂ ಇಲ್ಲ ವತ್ತು ಪ್ರಕಟಿಸಲೂ ಅವಕಾಶ ಕೊಡಲಿಲ್ಲವೆಂದು ತಿಳಿಸಲಾಗಿದೆ ಗಾಂಧೀಟಿಜಿಯವರು ತಮ್ಮ ಪತ್ರದಲ್ಲಿ ಈ ರೀತಿ ತಿಳಿಸಿರುತ್ತಾರೆ.

ಜರ್ಮನಿಗೂ ಬ್ರಿಟನ್ನಿಗೂ ಇರವ ಭಿನ್ನಾಭಿಪ್ರಾಯಗಳನ್ನು ಅಂತರ ರಾಷ್ಟ್ರೀಯ ಪಂಚಾಯತಿಯ ತೀರ್ಪಿಗೆ ಬಿಡುವುದರಿಂದ ನಿಮಗೆ ಯಾವ ನಷ್ಟವೂ ಆಗುವುದಿಲ್ಲ ಈ ಘೋರ ಯುದ್ಧದಲ್ಲಿ ನೀವು ಜಯ ಶೀಲರಾದ ಮಾತ್ರಕ್ಕೆ ನಿಮ್ಮ ಕಡೆಯೇ ನ್ಯಾಯವಿದೆಯೆಂದು ಭಾವಿಸಲಾಗದು. ಆದು ನಿಮ್ಮ ವಿನಾಶಕಾರಕ ಶಕ್ತಿಯು ಪರ್ಯವಸಿಸಿದನ್ನು ಮಾತ್ರ ತಿಳಿಯ ಪಡಿಸುತ್ತದೆ ಆದರೆ ಪ ಜಾಯಿತಿ ತೀರ್ಪಿಗೆ ಬಿಡುವುದರಿಂದ ಯಾವ ಪಕ್ಷದವರು ಸರಿಯೆಂದು ವ್ಯಕ್ತವಾಗುವುದು

ಹಿಂದೆ ಶತಮಾನ್ಯೊಬ್ಬ ಬ್ರಿಟಿಷ ಪ್ರಜೆಗೂ ನಾನು ಒಂದು ವಿನಂತಿಯನ್ನು ಮಾಡಿ ನನ್ನ ಆಹಿಂಸಾ ಶಕ್ತಿಯನ್ನು ಅವರಿಗೆ ತಿಳಿಸಬೇಕೆಂದು ಪ್ರಾರ್ಥಿಸಿಕೊಂಡಿದ್ದೆನು ಬ್ರಿಟಿಷರು ನನ್ನನ್ನು ಸ್ನೇಹಿತರೆಂದು ತಿಳಿದಿದ್ದುದರಿಂದಲೇ ನಾನು ಅವರಿಗೆ ಈ ರೀತಿ ಸಲಹೆ ಮಾಡಿದ್ದೆನು ನಿಮಗೂ ಹಾಗು ನಿಮ್ಮ ಜನಗಳಿಗೂ ನಾನು ಅಪರಿಚಿತನಲ್ಲ.ನು ಬ್ರಿಟನ್ನಿಗೆ ಮಾಡಿದ ಮನವಿಯನ್ನು ನಿವು ಗಿ ಮಾಡಲು ನನಗೆ ಧೈರ್ಯವಿಲ್ಲ ಆದರೆ ನನ್ನ ಈಗಿನ ಸಲಹೆಯು ಒಳಿತು ಸುಲಭವಾದುದು ಏಕೆಂದರೆ ಅದು ಭಯಚಿತ್ತ ತ್ತು ಸುಖಭಾಧ್ಯವಾದ ಮಾರ್ಗವಾಗಿದೆ.

ಈ ಪತ್ರವೇತನದಲ್ಲಿ ಯೂರೋಪಿನ ಜನಗಳು ಶಾಂತಿಗಾಗಿ ತವಕ ಪಡುತ್ತಿರುವಾ ಗ ನಾವು ನಮ್ಮ ದೇಶದ ಶಾಂತಿಯುತವಾ ದ ಹೋರಾಟವನ್ನೂ ಸಹ ನಿಲ್ಲಿಸಿದ್ದೇನೆ. ಶಾಂತಿಯನ್ನು ಸ್ಥಾಪಿಸಲು ನೀವು ಸರ್ವ ಪ್ರಯತ್ನ ಮಾಡಬೇಕೆಂದು ಕೋರುತ್ತೇನೆ ಇದರಿಂದ ನಿಮಗೆ ಸ್ವತಃ ಯಾವ ಲಾಭ ವೂ ಬರದಿದ್ದರೂಕೋಟ್ಯಂತರ ಯೂರೋ ಪಿನ ಜನಗಳಿಗೆ ಅದು ಅತ್ಯಂತ ಪರೋ ಪಕಾರವಾಗುವುದು ಅವರ ಶಾಂತಿಯ ವಾಕ್ಯ ಕರೆಯು ನನ್ನ ಕಿವಿಯನ್ನು ಕೊರೆ ಯುತ್ತಿದೆ

ನಾನು ನಿಮಗೂ ಮುತ್ತ ಮುನೊಲಿ ಡ ಸರಿಗೂ ಜಂಟಿ ಮನವಿಯನ್ನು ಮಾಡ ಬೇಕೆಂದು ಆಶಿಸಿದ್ದೆನು ಲಂಡನ್ನಿನಲ್ಲಿ ನ ದವ ದಂಡ ಮೇಜಿನ ಸಭೆಗೆ ಆಹ್ವಾನ ನ ಹೋದಂಗೆ ರೋಮಿನಲ್ಲಿ ಮಸೋ ನಿಯವರನ್ನು ಕಂಡಿದ್ದೆನು ಈ ನವಿ ಯನ್ನ ಅವರಿಗೂ ಒರೆದಿರುವುದಾಗಿ ತಿಳಿಸಿರುವರೆಂದು ನಾನು ನಂಬಿದ್ದೇನೆ.

ಬಹಿರಂಗ ಸಭೆ

ನೈಸೂರು ವಿಶ್ವವಿದ್ಯಾನಿಲಯದ ಸಭೆಗೆ ನಡೆದ ಜುನಾವಣೆಯು ಸಂಬಂಧವಾಗಿ ಈ ದಿನ ಸಂಜೆ ೬ ಗಂಟೆಗೆ ಟೌನ್‌ಹಾಲ್ ವೈದಾನದಲ್ಲಿ ನಗರ ಕಾಂಗ್ರೆಸ್ ಸಮಿತಿಯು ಆಶ್ರಯದಲ್ಲಿ ಬಹಿರಂಗ ಸಭೆಯು ನಡೆಯುವುದು ಸರ್ವರೂ ದಯಮಾಡಿಸಬೇಕಾಗಿ ಕೋರಲಾಗಿದೆ

ವಿವಾಹ ಮಹೋತ್ಸವ

ಮೈಸೂರು ಸುಬ್ ಜಡ್ಜಿಗಳಾದ ಶ್ರೀ ಕೆ ಎ ಪದ್ಮನಾಭಯ್ಯನವರು ತಮ್ಮ ಪುತ್ರಿ ಚಿ॥ ಸೌ॥ ಕಾಂತಮ್ಮನನ್ನು ವಿವಾಹ ಆರ್ಮಿನೆಯ ಶ್ರೀ ಟಿ ಎಸ್ ನಾಗರಾಜ ರಾವ್ ರವರ ಸಹೋದರ ಶ್ರೀ ಸಿ ಬಿ ರಾಜಣ್ಣನವರಿಗೆ ಕೊಟ್ಟ ಲಕ್ಷ್ಮೀಪುರದ ಕಾಂತಿವಿಲಾಸ ಭವನದಲ್ಲಿ ನಿನ್ನೆ ವಿವಾಹ ಮಹೋತ್ಸವ ನನ್ನ ನೆರವೇರಿಸಿದರು

ಜಲಬಾಧೆ ಮಾಡುವುದನ್ನು ನಿಲ್ಲಿಸಬೇಕು

ರಾಜಧಾನಿಯ ಅಲಾ ಕಛೇರಿಯಾ ಎದುರುಭಾಗದಲ್ಲೂ,ಸಯ್ಯಾಜಿರಾವ್‌ರಸ್ತೆಯು ಒಲ ಪಾರ್ಶ್ವದಲ್ಲಿರ ವ ವಿಕ್ಟೋರಿಯಾ ಬಾಲಕಿಯರಶಾಲೆಯ-ಬಳಿಯೂಹಲಗಲಿನಲ್ಲಿಯೆ ಅನೇಕರು ಜಲಬಾಧೆಮಾಡುವುದನ್ನು ನಿಲ್ಲಿಸಬೇಕೆಂದು ನಗರದ ನಿವಾಸಿಗಳೊಬ್ಬರು ಪತ್ರಿಕೆಗೆ ಪತ್ರ ಬರೆದಿರುತ್ತಾರೆ

ಬೇಸಿಗೆ ರಜಾ ಏಪ್ರಿಲ್ ನಿಂದಲೇ ಆರಂಭವಾಗಬೇಕು

ಈ ವರ್ಷ ವಿಪರೀತ ಕಾಲುವೆ ಪಜ್ಜಾಗಿ ರುವುದರಿಂದ ಫೈನಾರಿ ಖಾರೀಫ್‌ನ್ನು ಬೆ ಳ್ಳಿಸಿ ೩೦ ಗಂಟೆ ಪ್ಯಾರಿ ಮಾಡಿ ನಿಗೆ ಗಂಟೆಹರೆಗೂ ನಡೆಯುತ್ತಿರುವ ದನ್ನು ನಿಲ್ಲಿಸಿ ೧೦॥ ಗಂಟೆಗೆ ಶಾಲೆಗಳನ್ನು ವ ಚ್ಚಟೆಗೆ ಮಾ ಡಿ ಪರೀಕ್ಷೆ ಮಾ ಡಿ ಪರೀಕ್ಷೆ ಮುಗಿದ ಕೂಡಲೇ ರಜಾವನ್ನು ಪೇ ರಿ ನೇ ಯಾ॥ ನಿಂದ ಕೂಡಿಸಲೇ ಬೇಕೆಂದು ಒಂದನ್ನು ಸಪ್ಪಿಸಿ, ಏಪಿಲ್ ೧ ನೇ ತಾರೀಖಿನಿಂದಲೇ ಪೂರೈಸಬೇಕೆಂದೂ ಜಿಲ್ಲಾ ಬೋರ್ಡ್ ಸದಸ್ಯರಾದ ಶ್ರೀ ಪಿ ಪೆ ಕಟ್ಟಾ ಬ್ಬಣ್ಣನವರು ವಿನಂತಿಸಿ ಒಂದು ಪತ್ರ ಬರೆದಿರುತ್ತಾರೆ

ಈ ವಿಷಯದಲ್ಲಿ ಸಂಸ್ಕೃತ ವಿಶ್ವವಿದ್ಯಾನಿಲಯ

ಕಾಶಿಯಲ್ಲಿ ಸಂಸ್ಕೃತ ವಿಶ್ವವಿದ್ಯಾಲಯ ಪೊಂದನ್ನು ಸ್ಥಾಪಿಸಲಾಗಿದೆಯೆಂದು ಸರ್ಕಾರದ ಪ್ರಾಥಮಿಕ ವಿದ್ಯಾ ಶಾಖೆಯ ಡೈರೆಕ್ಟರ್ ಶ್ರೀ ಎಸ್ ವಿ ವಿಶ್ವನಾಥರವರು ತಿಳಿಸಿರುತ್ತಾರೆ ವಿದ್ಯಾ ರ್ಥಿಗಳಿಗೆ ಕಡ್ಡಾಯವಾದ ಸ್ಕೌಲರ್‌ಶಿಪ್ ಮತ್ತು ಸಾಮಾನ್ಯ ಸೌಲಭ್ಯಗಳನ್ನು ಕಲ್ಪಿಸಲಾಗಿದೆಯೆಂದೂ ತಿಳಿಸಿರುತ್ತಾರೆ

ಪರೀಕ್ಷೆ

ಪ್ರಯೋಗವು ಪ್ರಾಮಾಣಿಕ ಈ ದಿನ ಸಂಜೆ ೬ ೧೫ ಗಂಟೆಗೆ ಸರ್ಕಾರಿ ಮೊಹಲ್ಲಾ ನಾಲಾ ಬೀದಿಯಲ್ಲಿರುವ ಶ್ರೀ ಪೊದ್ದಾರ ನಂ. ದೇವಸ್ಥಾನದಲ್ಲಿ ನೇ॥ ಪರಿಸರೋತ್ಸವ ವಿಷಯವಾಗಿ ಸೀತಾ ಕಲ್ಯಾಣವೆಂಬ ಸುಪ್ರಸಿದ್ಧ ಕಥಾನು ನಡೆಯುವುದು

ಒಂದೇ ಕಾಲಿನ ಮಗು

ಮಂಗಳೂರಿನ ಕದ್ರಿ ರಾಮ್ಮಿದ ಹತ್ತಿ ಒಬ್ಬ ಕೈಕೆಸ್ತ ಹೆಂಗಸು ಕಳೆದ ೧೫ ನೇ ತಾರೀ ಒಂದು ವಿಚಿತ್ರ ಮಗುವನ್ನು ಪ್ರಸವಿಸಿದ್ದಳು ಆ ಮಗುವಿಗೆ ಒಂದೇ ಕಾಲಿದ್ದು ಆದರೆ ಹತ್ತು ಬೆರಳುಗಳಿದ್ದವು ಕಾಲಿನ ಹಿಂಭಾಗದಲ್ಲಿ ಒಂದು ಚಿಕ್ಕ ಬಾಲವಿತ್ತು ಆನಾಕರು ಬಂದು ಈ ವಿಚಿತ್ರವನ್ನು ನೋಡಿ ಬೆರಗಾದರು ಮಗುವು ತಕ್ಷಣವೇ ವ್ಯಸಪಟ್ಟಿತ್ತು

ಸಂದಿ ಬೆಟ್ಟದಿಂದ ಬಿದ್ದು ಮರಣ

ಕಳೆದ ೧೫ ನೇ ತಾ॥ ಸಂದೀಬೆಟ್ಟಿ ಜಾತ್ರೆಗೆ ಹೋಗಿದ್ದ ಶ್ರೀಮತಿ ಅನ್ನಪೂರ್ಣಮ್ಮ ಎಂಬ ಗಂಗಮ್ಮನವರ ವರ್ಷದ ಮಗ ವೆಂಕಟೇಷಪ್ಪ ಎಂಬ ೪ ವರ್ಷದ ಬಾಲಕನು ಆಕಸ್ಮಿಕವಾಗಿ ಬೆಟ್ಟದಿಂದ ಕೆಳಕ್ಕೆ ಬಿದ್ದು ಮರಣ ಹೊಂದಿದನು

ಬನ ವಿದ್ಯಾರ್ಥಿಗಳಿಗೆ ಊಟದ ಸೌಕರ್ಯ

ರಾಜಧಾನಿಯ ಒಡೆ ವಿದ್ಯಾರ್ಥಿಗಳ ಊಟದ ವರ್ಚಸ್ಸನ್ನು ಪ್ರಾಯಂ ಆಗಿ ಪರಿ ಪಾಲನೆಯ ಉದ್ದೇಶದಿಂದ ಸಮಿತಿಯೊಂದನ್ನು ಏರ್ಪಡಿಸಿರುವುದಾಗಿ ತಿಳಿದು ಬಂದಿದೆ ಈ ಸಮಿತಿಯ ಕಾರ್ಯದರ್ಶಿಗಳಾಗಿ ಶ್ರೀಯುತರಾದ ಎಲ್ ನಾಗಣ್ಣನವರು ಮತ್ತು ಎಂ ಗಂಗಾರಾಯ ಗಳನ್ನು ಕೊಡಲು ಒಪ್ಪಿದ್ದಾರೆ ಶ್ರೀ ಪಿ ಶೇಷಾದ್ರಿಯ್ಯನವರು ಸಮಿತಿಯ ಕಛೇರಿಯನ್ನು ಪ್ರಾರಂಭಿಸಿ ಸಹಾಯ ಧನವನ್ನು ಸಂಗ್ರಹಿಸಲು ಪ್ರಯತ್ನ ಮಾಡಲಿದ್ದಾರೆ ಇದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ಕಳುಹಿಸಬೇಕಾದ ವಿಳಾಸ ಕಛೇರಿ ಕಾರ್ಯದರ್ಶಿಗಳು, ಅಲ್ಲಿ ನಿಗದಿಪಡಿಸಿರುವ ಸಮಯದಲ್ಲಿ ಸಂಗ್ರಹಿಸಿರುವ ಧನವನ್ನು ಕೊಳ್ಳುವ ಸಂಸ್ಥೆಯ ಪರಿತೀರ್ಮಾನವನ್ನು ನಡೆಸಿದರು

Edited printed and published by A. R. Narasimha at the Sadhvi Press D. Subbaiah Road, Mysore

ಅಪೇರಿಯ ಟಾಕೀಸ್

19-3-48 ನೇ ಶುಕ್ರವಾರದಿಂದ

ಪ್ರತಿ ದಿನ ೩ ಆಟಗಳು

ಸದಭಿಯೋಗಂ

[ತಮಿಳು]

— ಪಾತ್ರ —

ಎಂ ಆರ್ ಸ್ವಾಮಿನಾಥನ್, ಡಿ ಆರ್ ರಾಮಚಂದ್ರನ್, ಪಿಯೆ ಪೆರಿಯ ನಾಯಕಿ, ಎ ಎಸ್ ಜಾನಕಿ, ವಿದ್ವಾನ್ ಶ್ರೀನಿವಾಸನ್, ಶೀನು, ದೊರೈರಾಜ ಕಾಳಿ ಎನ್ ರತ್ನಂ ರಾಜಕಾಂತಂ

ಪ್ರಭಾ ಪಿಕ್ಚರ್ ಹೌಸ

ಈ ರಾತ್ರಿಯಿಂದ ಪ್ರತಿದಿನ ಸಂಜೆ ೬ ಗಂಟೆಯಿಂದ

* ರತ್ನಮಾಲ *

ಮತ್ತು

- ನೀಲ್ ಪರ್ಲ್ -

(ಬಣ್ಣದ)

ಚಿತ್ರ ರಂಗಿನ, ಉಲ್ಲಾಸ, ಉತ್ಸಾಹಭರಿತ

ಶ್ರೀ ಸಾಯಿ ಟಾಕೀಸ್

ಪ್ರತಿದಿನ ೩ ಆಟಗಳು

* ಇದು ನಿಜವೇ? *

— ಪಾತ್ರ —

ಬಾಲಚಂದ್ರ ಮತ್ತು ಸರೋಜಿನಿ

ಸಂಪುಟ ೬] ಮಂಗಳವಾರ ೨೩-೩-೪೮ [ಸಂಚಿಕೆ ೧೯೩

ಹೈದರಾಬಾದಿನಲ್ಲಿ ಕಾಂ॥ ಗೊರಿಲ್ಲಾ ಪಡೆ

ಬೆಂಗಳೂರು ಜಿಲ್ಲೆಯಲ್ಲೂ ಕಾಂಗ್ರೆಸ್ಸಿಗೆ ಪೂರ್ಣ ವಿಜಯ

ಸ್ವಂ.ಸು.ಪ್ರೋ.] ಬೆಂಗಳೂರು ೨೩

ರಾಜ್ಯಾಂಗ ಸಭೆಯ ಚುನಾವಣೆಯಲ್ಲಿ ಬೆಂಗಳೂರು ಜಿಲ್ಲೆಯಿಂದ ಕಾಂಗ್ರೆಸ್ ಉಮೇದ್ವಾರರಾದ ಶ್ರೀಗಳು ಟಿ. ಸಿದ್ದಲಿಂಗಯ್ಯ, ಕೆ. ಸುಬ್ಬರಾವ್, ಡಿ. ಎ. ಆಚಾರ್ಯ, ಎಸ್ ಆರ್ ಗುರು, ಡಬ್ಲ್ಯು. ಜೆ ಹನುಮಂತಪ್ಪ, ಎಸ್. ಕರಿಯಪ್ಪ, ಶ್ರೀ ಡಿ ಎಸ್. ರಾಮಚಂದ್ರರಾವ್, ಎಂ. ಶಿವಾನಂದಶರ್ಮ, ವಿ. ವೆಂಕಟಪ್ಪ ಮತ್ತು ಟಿ ಮೂಡಯ್ಯಗೌಡ ಇವರುಗಳು ಚುನಾಯಿತರಾಗಿದ್ದಾರೆ.

ಕಾಂಗ್ರೆಸ್ ಮುಸ್ಲಿಂ ಉಮೇದುವಾರರ ರೇವಣಿ ಹೋಯಿತು

ರಾಜ್ಯಾಂಗ ಸಭೆಯ ಚುನಾವಣೆಗೆ ಕೋಲಾರ ಜಿಲ್ಲಾ ಕ್ಷೇತ್ರದಿಂದ ಕಾಂಗ್ರೆಸ್ ಪರವಾಗಿ ಸ್ಪರ್ಧಿಸಿದ್ದ ಹಜಿ ಹುಸೇನರವರು ಪರಾಜಿತರಾಗಿ, ರೇವಣಿಯನ್ನು ಕಳೆದುಕೊಂಡಿರುವರು. ಮುಸ್ಲಿಂ ಲೀಗ್ ಉಮೇದುವಾರರಾದ ಹಜಿ ಪಲಿಯುಲ್ಲಾರವರು ಚುನಾಯಿತರಾಗಿರುವರು

ಗೋರಿಂಗನ ಮೋಟಾರು ಮೂರಾಟಕ್ಕೆದೆ

ಬಟ್ಟೆಗಳನ್ನು ಅನುಯಾಯಿ ಫೀ॥ ಮಾ॥ ಗೋರಿಂಗನ ಅಳಿಕೆಯ "ಮೋಟಾರು"ಕಾರು ಖರೀದಿಗಿದೆ. ಆದು ವಿಶೇಷ ರೀತಿಯಲ್ಲಿ ಫಿರ್ಮಿಸಲ್ಪಟ್ಟಿವೆ ೫ ಟನ್ ತೂಕವಳ್ಳದ್ದಾಗಿದೆ ಅದರ ಉದ್ದ ೨೦ ಅಡಿ, ಬಾಗಿಲುಗಳು ೨॥ ಅಂಗುಲ ಮಂದದ ಉಕ್ಕಿನ ತಗಡುಗಳಿಂದ ಮಾಡಲ್ಪಟ್ಟಿವೆ ಪ್ರಬಲ ಸೈನಿಕರು ಈ ಮೋಟಾರನ್ನು ಬಾಗಿಲಿನ ಮೇಲೆ ಕಾಲಿಟ್ಟರೂ, ರೈಫಲ್ ಮತ್ತು ಮಿಷಿನ್ ಗನ್ನುಗಳಿಂದ ಹೊಡೆದರೂ ಅದರಲ್ಲಿ ಒಂದು ಜಖಂಗಡದೂ ಬೀಳಲಿಲ್ಲವೆಂದು ಹೇಳಲಾಗಿದೆ

ದೇಂದಿ ಅಂಗಡಿಯನ್ನು ಬದಲಾಯಿಸಬೇಕು

ಆಗರ ಗ್ರಾಮದ ಪೌರಸಭೆಯ ಪರಿಷ್ಕಿಗೆ ಸೃಷ್ಟಿ ದೂರದಲ್ಲಿ ರಸ್ತೆಯ ಬಳಿ ಇರುವ ದೇ ದಿ ಅಂಗಡಿಯಿಂದ ಜನಗಳಿಗೆ ತೊಂದರೆ ತೊಂದರೆ ಉಂಟಾಗಿರುವುದನ್ನು ತಪ್ಪಿಸಲು ಅದನ್ನು ಬೇರೆಯ ಕಡೆಗೆ ವರ್ಗಾಯಿಸಬೇಕೆಂದು ಕಳೆದ ಆಗಸ್ಟ್ ತಿಂಗಳಿನಲ್ಲಿ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದ ಮೇಲೆ ಅದನ್ನು ಬದಲಾಯಿಸುವುದಾಗಿ ಭರವಸೆ ಕೊಟ್ಟಿದ್ದರೂ ಇಲ್ಲಿಯವರೆಗೆ ಯಾವ ಕಾರ್ಯಕ್ರಮವನ್ನೂ ಕೈಗೊಂಡಿಲ್ಲ ಕಳೆದ ೧೫ ತಾ॥ ಕೆಲಸಕ್ಕೆಗಾಲದಿಂದ ಅಲ್ಲಿಗೆ ಬಂದು ಮದ್ಯಪಾನ ಮಾಡಿ ಗೊಂದಲ ನಡೆಸಿದರೂ. ಆದ ದರಿಂದ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕಾರ್ಯಕ್ರಮ ಕೈಗೊಳ್ಳಬೇಕೆಂದು ಅವರಿಗೆ ವಿನಯಪೂರ್ವಕವಾಗಿ ಪತ್ರ ಬರೆದಿರುತ್ತಾರೆ

ಚಂದ್ರನಗರವು ಭಾರತಕ್ಕೆ ಸೇರುವುದು

ಫ್ರೆಂಚರಿಗೆ ಸೇರಿದ ಚಂದ್ರನಗರವು ಭಾರತ ಡಾನಿಯನ್ಸ್ಗಿನ ಸೇರಬೇಕೆಂದು ಅಲ್ಲಿನ ಅಡಳಿತ ಸಭೆಯು ನಿರ್ಧರಿಸಿದೆ. ಸರಿ ಅಡಳಿತವನ್ನು ಕೂಡಲೇ ಪಹಿಲಿಗೆ ಫ್ರೆಂಚರಿಂದ. ಪಶ್ಚಿಮ ಬಂಗಾಳ ಸರ್ಕಾರದ ಮುಖ್ಯಕ್ಕೆ ಕೇಂದ್ರ ಸರ್ಕಾರಕ್ಕೆ ಮೇಲ್ಕುಂಡ ನಿರ್ಣಯವು ಸುವಿ ಮಾಡಿಕೊಂಡಿದೆ.

ಚಿತ್ರದುರ್ಗದಲ್ಲೂ ಕಾಂಗ್ರೆಸ್ಸಿಗೆ ಜಯ

ಸ್ವಂ ಸು.ಪ್ರೋ.] ಬೆಂಗಳೂರು ೨೩

ಚಿತ್ರದುರ್ಗ ಜಿಲ್ಲೆಯಿಂದ ರಾಜ್ಯಾಂಗ ಸಭಾ ಚುನಾವಣೆಗೆ ನಿಂತಿದ್ದ ಎಲ್ಲ ಕಾಂಗ್ರೆಸ್ ಉಮೇದ್ವಾರರೂ ಜಯಶೀಲರಾಗಿದ್ದಾರೆ ಓಟುಗಳ ಸಂಖ್ಯೆಯ ವಿವರಗಳು ಇನ್ನೂ ತಿಳಿದುಬಂದಿಲ್ಲ

§ ಪರಿಷತ್ತರುಗಳಾದ ಶ್ರೀ ಹೆಚ್ ಸಿ ದಾಸಪ್ಪನವರೂ ಮತ್ತು ಶ್ರೀ ಟಿ ವೆಂಕಟಪ್ಪನವರೂ ಒಂದು ಹೇಳಿಕೆಯನ್ನು ಕೊಟ್ಟು ರಾಜ್ಯಾಂಗ ಸಭಾ ಚುನಾವಣೆಯಲ್ಲಿ ಜನರು ತಮಗೆ ಬೆಂಬಲ ನೀಡಿ ಜಯಶೀಲರನ್ನಾಗಿ ಮಾಡಿದುದಕ್ಕೆ ಕೃತಜ್ಞತಾ ಪೂರ್ವಕವಾದ ಅಭಿನಂದನೆಯನ್ನು ಸಲ್ಲಿಸಿದ್ದಾರೆ

§ ನ್ಯಾಯವಿಧಾಯಕ ಸಭೆಯ ಬಜೆಟ್ ಅಧಿವೇಶನವು ಬರುವ ಜೂನ್ ತಿಂಗಳು ೧೫ನೇ ತಾರೀಖಿನಿಂದ ಆರಂಭವಾಗಲಿದೆ

ಸ್ವರಾಜ್ಯ ಭವನವು ಗಾಂಧೀ ಸಂಶೋಧನಾಲಯ

ಅಲಹಾಬಾದಿನ ಸ್ವರಾಜ್ಯ ಭವನವನ್ನು ಇನ್ನು ಮುಂದೆ ಗಾಂಧೀಜಿಯವರ ತತ್ವದ ಸಂಶೋಧನಾಲಯವನ್ನಾಗಿ ಮಾರ್ಪಡಿಸಲಾಗುವುದೆಂದು ತಿಳಿದುಬಂದಿದೆ.

ಅಣು ಸಂಶೋಧನಾ ಗುಪ್ತಕೇಂದ್ರ

ಲಂಡನ್ನಿನಲ್ಲಿ ಇಂದು ಅಣು ಸಂಶೋಧನಾ ಗುಪ್ತ ಕೇಂದ್ರವನ್ನು ಸ್ಥಾಪಿಸಲಾಗಿದೆ ಬರ್ಮಿಂಗ್ಹಮ್ ಕಾಲೇಜಿನ ಡಾ॥ ಕಾರ್ಟ್ರೈಟ್ ಅವರು ಅದರ ಮುಖ್ಯಾಧಿಕಾರಿಗಳು

ಹಿಂದೀ ಪ್ರಚಾರ ಸಭೆ

ನಗರದ ಹಿಂದೀ ಪ್ರಚಾರ ಸಭೆಯು ಅಸ್ಪೃಶ್ಯರುಗಳಿಗಾಗಿ ಸಭೆಯು ಶ್ರೀ ಎಸ್ ಶ್ರೀ ರಂಗಾಚಾರ್ಲುರವರ ಅಧ್ಯಕ್ಷತೆಯಲ್ಲಿ ಮೊನ್ನೆ ನಡೆಯಿತು. ಬೆಂಗಳೂರಿನಲ್ಲಿ ಈಗಿರುವ ೬ ನೇ ತಾ॥ ನಡೆದ ಹಿಂದೀ ಕಾರ್ಯಕರ್ತರ ಸಮ್ಮೇಳನದ ವಿಷಯವಾಗಿ ಅಂತರ್ಜಾತೀಯತೆಯನ್ನು ಕುರಿತು, ರಾಷ್ಟ್ರಭಾಷೆ ಹಿಂದೀ ಪ್ರಚಾರ ಸಮಿತಿಯ ಅಧಿಕಾರಿಗಳ ನೀತಿಯನ್ನು ಖಂಡಿಸುವ ನಿರ್ಣಯ ಮಾಡಲಾಯಿತು.

ಉದಾರ ದಾನ

ವೈ ಸುಬ್ರಹ್ಮಣ್ಯ ಧರ್ಮ ಸಭಾ ಸಭೆಗೆ ರಾಜಧಾನಿಯ ಬಸ್ ನಿಲ್ದಾಣದ ಹತ್ತಿರದಲ್ಲಿನ ಮಾಲೀಕರಾದ ಶ್ರೀ ಕೆ ಶ್ರೀನಿವಾಸಾಚಾರ್ಯರು ೧೦೧ ರೂಗಳನ್ನು ಮೂಲ ಧನವಾಗಿ ಕೊಟ್ಟಿರುತ್ತಾರೆ

ಮಂಡ್ಯದಲ್ಲೂ ಕಾಂಗ್ರೆಸ್ಸಿಗೆ ವಿಜಯ

ರಾಜ್ಯಾಂಗ ಸಭೆಯ ಚುನಾವಣೆಗೆ ಮಂಡ್ಯ ಜಿಲ್ಲೆಯಿಂದ ಸ್ಪರ್ಧಿಸಿದ್ದ ಕಾಂಗ್ರೆಸ್ಸಿನ ಏಳು ಉಮೇದುವಾರರೂ ಜಯಶೀಲರಾಗಿರುವರು ಓಟುಗಳ ಸಂಖ್ಯೆ ಈ ರೀತಿ ಇದೆ:—

ಶ್ರೀ ಶಂಕರೇಗೌಡರು	೨೩೧೫
,, ಹೆಚ್ ಕೆ ವೀರಣ್ಣಗೌಡರು	೨೧೧೭
,, ಸಿಂಗಾರಿಗೌಡರು	೨೧೧೨
,, ಎ. ಜಿ ಬಂಡೀಗೌಡರು	೨೦೫೧
,, ಕೆ. ಪುಟ್ಟಸ್ವಾಮಿ	೨೯೨೩
,, ಎಂ. ಸಿ ರಿಂಗೇಗೌಡರು	೧೬೬೬
,, ಎಂ ಸಿ. ಮಲ್ಲಯ್ಯನವರು	೧೪೪೧

ನೂರು ಬಾರಿ ಅವಳಿ ಮಕ್ಕಳ ಜನನ

ಸಂಯುಕ್ತ ಸಂಸ್ಥಾನದ ಒಬ್ಬಾಕೆಯು ಈವರೆಗೆ ಮಂಗಳವಾರದಿಂದ ಪ್ರತಿ ವರ್ಷವೂ ಅವಳಿ ಮಕ್ಕಳನ್ನು ಹೆತ್ತಿರುವಳೆಂದು ವರದಿಯಾಗಿದೆ ಅಕೆಯು ಮಕ್ಕಳನ್ನು ಪ್ರತಿ ವರ್ಷದ ಆಕ್ಟೋಬರ್ ತಿಂಗಳನಲ್ಲೇ ಪ್ರಸವಿಸುತ್ತಿರುವಳೆಂದೂ, ಈಗ ಆಕೆಯು ಗರ್ಭಿಣಿಯಾಗಿರುವಳೆಂದೂ ಬರುವ ಅಕ್ಟೋಬರ ೧೦ನೇ ತಾರೀಖಿಗೆ ಮತ್ತೆ ಪ್ರಸವಿಸುವ ಸೂಚನೆಗಳಿವೆಯೆಂದೂ ವರದಿಯಾಗಿದೆ

ವಿವೇಕಾನಂದ-ಪರಮಹಂಸರ ಜಯಂತಿ

ಮೈಸೂರು ಇಂಟರ್ ಕಾಲೇಜು ಸಂಘದ ಆಶ್ರಯದಲ್ಲಿ ನಿನ್ನೆ ಸಂಜೆ ಶ್ರೀ ವಿವೇಕಾನಂದ ಮತ್ತು ಶ್ರೀರಾಮ ಕೃಷ್ಣ ಪರಮಹಂಸರ ಜಯಂತಿಯನ್ನು ಶ್ರೀ ಸೋವಿನಾಥಾನಂದ ಸಭಾಮಂದಿರದ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳವರೆ ಎಸ್. ಎಸ್ ರಾಘವಾಚಾರ್ಯ ಮತ್ತು ಎಂ ಹಿರಿಯಣ್ಣಾಚಾರ್ಯರುಗಳು ಭಾಷಣ ಮಾಡಿದರು ಶ್ರೀ ವಿವೇಕಾನಂದರ ನುಡಿ ಶ್ರೀ ರಾಮಕೃಷ್ಣ ಪರಮಹಂಸರ ಭಾವಚಿತ್ರಗಳನ್ನು ಅಲಂಕರಿಸಲಾಗಿತ್ತು.

ಆಕಾಶವಾಣಿಯಲ್ಲಿ ಸಂಗೀತ

ನಾಳೆ ರಾತ್ರಿ ೮ ಗಂಟೆಗೆ ೧೦ ಗಂಟೆಗೆ ವಿ ಸಾಕ್ಷಾರವು ಎ ಚಿ ಸುಬ್ರಹ್ಮಣ್ಯಂ ರವರ ವಿಶೇಷ ಗಾಯನ ಕಾರ್ಯಕ್ರಮವನ್ನು ಆಕಾಶವಾಣಿಯಲ್ಲಿ ಏರ್ಪಡಿಸಲಾಗಿದೆ.

ರಥೋತ್ಸವ ನಿಂತಿತು

ಹರಿಜನ ದೇವಾಲಯ ಪ್ರವೇಶ ಪ್ರಯತ್ನದ ಫಲ

ಚಿಂತಾಮಣಿ ತಾಲ್ಲೂಕು ನೆಗ್ಗೂದಿ ಗ್ರಾಮದ ಶ್ರೀ ನಾಗನಾಥೇಶ್ವರ ಸ್ವಾಮಿಯವರ ರಥೋತ್ಸವವು ಕಳೆದ ಶುಕ್ರವಾರ ನಡೆಯಬೇಕಾಗಿತ್ತು ಅಂದು ದೇವಸ್ಥಾನದಲ್ಲಿ ಕಲಶ ಸ್ಥಾಪನೆಯಾಗುತ್ತಿರುವ ಸಮಯದಲ್ಲಿ ಹರಿಜನರು ದೇವಾಲಯಕ್ಕೆ ಪ್ರವೇಶಿಸಲು ಯತ್ನಿಸಿದರು. ಅರ್ಚಕರು ಅವರನ್ನು ತಡೆದು ಕಲಶ ಸ್ಥಾಪನಾ ಸಮಯದಲ್ಲಿ ಯಾವುದೇ ಪ್ರವೇಶಕ್ಕೆ ಅವಕಾಶ ವಿಲ್ಲವೆಂದು ತಿಳಿಸಲು ಅದನ್ನು ಕೇಳದೆ ಹರಿಜನರು ಮತ್ತೆ ದೇವಾಲಯಕ್ಕೆ ನುಗ್ಗಲು ಪ್ರಯತ್ನಿಸಿದರು ಇದರಿಂದ ಅರ್ಚಕರು ದೇವಸ್ಥಾನವನ್ನು ಬೀಗ ಹಾಕಿಕೊಂಡು ದೇವಾಲಯದ ಬಾಗಿಲು ಜಾತಿ ಬೀಗದ ಕೈಯನ್ನು ಅಮಲ್ದಾರರ ವಶಕ್ಕೆ ಒಪ್ಪಿಸಿಬಿಟ್ಟರು. ಅಮಲ್ದಾರರು ಮಹಜರ್ ನಡೆಸಿ ದೇವಸ್ಥಾನಕ್ಕೆ ಬೀಗ ಮುದ್ರೆ ಹಾಕಿಸಿರುವರು. ರಥೋತ್ಸವ ನಡೆಯಲಿಲ್ಲ. ರಥವನ್ನು ಪೊಲೀಸರು ಕಾಯುತ್ತಿದ್ದಾರೆ

ಸಾಕಿಸ್ವಾಸದ ಹೊಸ ನೋಟುಗಳಿಗೆ ಪುರಸ್ಕಾರವಿಲ್ಲ

ಮಾಕಿಸ್ವಾಸದ ಹೊಸ ಜ್ಯಾರ್ಜ್ ನೋಟುಗಳಿಗೆ ಧಾರಣದಲ್ಲಿ ಪುರಸ್ಕಾರವಿಲ್ಲವೆಂದು ರಿಜರ್ವ್ ಬ್ಯಾಂಕು ತಿಳಿಸಿದೆ.

ಕಾಫಿ ಮತ್ತು ಟೀ ಮೇಲಿನ ಸುಂಕ ಕಡಿಮೆ.

ಭಾರತ ಸರ್ಕಾರದ ಬಜೆಟ್ಟಿನ ಸೆಲೆಕ್ಟ್ ಸಮಿತಿಯವರು ಕಾಫಿ ಮತ್ತು ಟೀ ಮೇಲಿನ ಸುಂಕವನ್ನು ವಿಗುಂಠನೆಗಳಿಲ್ಲದೆ ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಬೇಕೆಂದು ಶಿಫಾರಸು ಮಾಡಿದ್ದಾರೆ.

ಹೈದರಾಬಾದ್ ಪೊಲೀಸರ ಕಾಣ್ಯದ ಮೇಲೆ ಧಾಳಿ

ಹೈದರಾಬಾದ್ ಕಾಂಗ್ರೆಸ್ ಪಕ್ಷದ ಗೊರಿಲ್ಲಾ ಪಡೆಗಳವರು ಇತ್ತೀಚೆಗೆ ಅವಿಲಾ ಬಾದ್ ಜಿಲ್ಲೆಯ ಲೊನಾವಳ್ಳ ಎಂಬಲ್ಲಿ ಪೊಲೀಸ್ ಕಾಣ್ಯದ ಮೇಲೆ ಧಾಳಿ ನಡೆಸಿದೆಯೆಂದು ವರದಿಯಾಗಿದೆ ಇದರ ಪರಿಣಾಮವಾಗಿ ಒಟ್ಟು ಕಾನ್ಸ್ಟೇಬಲರು ಸುಡುಮದ್ದು ಹಲವರಿಗೆ ಗಾಯಗಳಾಗಿವೆಯೆಂದೂ, ಗೊರಿಲ್ಲಾಗಳು ಪೊಲೀಸ್ ಠಾಣ್ಯದಿಂದ ಹಲವು ಬಂದೂಕಗಳನ್ನು ಕೊಂಡೊಯ್ದರೆಂದೂ ಹೇಳಲಾಗಿದೆ.

ಬಟ್ಟೆ ಗಿರಣಿ ಮುಷ್ಕರಗಳ ಮುಕ್ತಾಯ

ಕೊಯಮತ್ತೂರು, ತಿರುಚಿರಾಪಳ್ಳಿ, ಸೇಲಂ ಮತ್ತು ಮದುರೆಗಳಲ್ಲಿ ಕಳೆದ ಎರಡು ತಿಂಗಳಿಂದ ನಡೆಯುತ್ತಿದ್ದ ಗಿರಣಿ ಕೈಕಾರಿಗಳು ಸಲಾಂಡ ಸಾಧನೆ ಮೇಲೆ ನಿನ್ನೆ ಮುಕ್ತಾಯಗೊಂಡಿವೆ.

ಹೋಟೆಲ್ ಕೆಲಸಗಾರರ ಬೇಡಿಕೆ

ರಾಜ್ಯದಲ್ಲಿನ ಹೋಟೆಲುಗಳಲ್ಲಿ ಕೆಲಸ ಮಾಡುತ್ತಿರುವ ಕೆಲಸಗಾರರ ಸಭೆಯು ಬೆಂಗಳೂರಿನಲ್ಲಿ ನಿನ್ನೆ ಜರುಗಿತು ಸಭೆಯಲ್ಲಿ ಸುಮಾರು ೪೦೦ ಜನ ಪ್ರತಿನಿಧಿಗಳು ಹಾಜರಿದ್ದರು. ಈ ದಿನ ರಾತ್ರಿ ಅಂತಾ ಗುವಿನಿಗೆ ಸಭೆಯು ಪ್ರಕಟಿಸಿದೆ.

ವಂದನಾ ಸಭೆ

ವೈಸೂರು ೨೩

ನಿನ್ನೆ ಸಂಜೆ ಟೌನ್‌ಹಾಲ್ ಮೈದಾನದಲ್ಲಿ ನಗರ ಕಾಂಗ್ರೆಸ್ ಸಮಿತಿಯು ಆಶ್ರಯದಲ್ಲಿ ಬಹಿರಂಗ ಸಭೆಯು ಶ್ರೀ ಎಸ್ ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ಪಾಲಹಳ್ಳಿ ಸೀತಾರಾಮಯ್ಯ ಎಸ್ ರಂಗರಾಮಯ್ಯ, ಹೆಚ್ ಕೆ ಕುಮಾರಸ್ವಾಮಿ, ಶಿವಣ್ಣ, ಎಂ ಎ ಹೋಯಿಸ್ ಇವರುಗಳು ಭಾಷಣಕಾರರಾಗಿದ್ದರು. ರಾಜ್ಯಾಂಗ ಸಭೆಯಲ್ಲಿ ನಾವೆಗೆಯಲ್ಲಿರುವ ಕಾಂಗ್ರೆಸ್‌ಜನರಿಗೆ ದೊಂಬಲು ನೀಡಿ ಅದರುಗಳು ಜಯಕಾರಗಳಾಗುವಂತೆ ಮಾಡಿದ ಎಲ್ಲರಿಗೂ ಅಭಿನಂದನೆಯನ್ನು ಸಲ್ಲಿಸಿದರು. ಮುಂದೆ ಬರಲಿರುವ ಸಾರ್ವತ್ರಿಕ ಚುನಾವಣೆಗೆ ಈಗಿನಿಂದಲೇ ಸರ್ವ ಸಿದ್ಧತೆ ಮಾಡಬೇಕೆಂದು ಅವರುಗಳು ಸೂಚಿಸಿದರು.

ವೈಸೂರು ರೈಲ್ವೆ ಕೆಲಸಗಾರರ ಸಂಘದ ಆಶ್ರಯದಲ್ಲಿ ನಿನ್ನೆ ಸಂಜೆ ವರ್ಕ್‌ಷಾಪ್ ಆವರಣದಲ್ಲಿಯೂ ಶ್ರೀ ಶ್ರೀರಾಮುಲು ರವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಶ್ರೀಗಳಾದ ಎಂ ಸಿ ಶ್ರೀನಿವಾಸ್ ಮತ್ತು ರಾಜಾರಾವ್‌ರವರುಗಳು ಭಾಷಣ ಮಾಡಿ ರಾಜ್ಯಾಂಗ ಸಭೆಯು ಜಯಿಸುವಂತೆ ಮಾಡಿ ಎಲ್ಲರಿಗೂ ಅಭಿನಂದನೆಯನ್ನು ಸಲ್ಲಿಸಿದರು. ಶ್ರೀ ಕೆ. ಎಸ್. ನಾರ್ಯಣಯ್ಯನವರಿಗೆ ಶ್ರೀ ಕೆ. ಎಸ್. ನಾರ್ಯಣಯ್ಯನವರಿಂದ ಬೆಂಬಲವಿತ್ತ ಎಲ್ಲರಿಗೂ ಅಭಿನಂದನೆಯನ್ನು ಸಲ್ಲಿಸಿದರು.

ಆಯುರ್ವೇದ ಕಾಲೇಜ್ ಪದವಿಗೆ ಪುರಸ್ಕಾರ

ಮದರಾಸಿನ ಧಾಂತೇಯ ವಿಷಧಿಗಳ ಕೇಂದ್ರ ಬೋರ್ಡಿನ ಪರೀಕ್ಷಣಾ ಸಮಿತಿಯು ಡಾಃ ಎಂ ಪರಾಂಕಿ ಶಂ, ಡಾಃ ಎ. ಲಕ್ಷ್ಮೀಪತಿ, ಮತ್ತು ರಾವ್ ಹೆಚ್ ಎಂ ಎ ಪಾರ್ಥಸಾರಥಿಗಳಿಗೆ ಕಳೆದ ೧೫ ನೇ ತಾಃ ರಾಜಧಾನಿಗೆ ಆಗಮಿಸಿದರು. ವೈಸೂರು ಆಯುರ್ವೇದ ಮತ್ತು ಯುನಾನಿ ಕಾಲೇಜಿನ ಪದವಿಯನ್ನು ಮೇಲ್ಕಂಡ ಬೋರ್ಡಿನವರು ಪುರಸ್ಕರಿಸುವ ವಿಷಯದಲ್ಲಿ ಕಮಿಟಿಯ ವತಿ ಕಾಲೇಜಿಗೆ ಭೇಟಿ ಕೊಟ್ಟು, ಅದನ್ನು ೩ ಗಂಟೆಗಳ ಕಾಲ ಕೂಲಂಕಷವಾಗಿ ಪರೀಕ್ಷಿಸಿ ನಡೆಸಿದರು. ವಿದ್ಯಾರ್ಥಿಗಳನ್ನು ಉದ್ದೇಶಿಸಿ ಭಾಷಣ ಮಾಡಿದರು

ನಗರಗಳ ಹೆಸರಿನ ಬದಲಾವಣೆ

ಭಾರತದ ಹಲವು ನಗರಗಳ ಹೆಸರುಗಳನ್ನು ತಳಕಿಗೆ ತಂದಂತೆ ಬದಲಾಯಿಸಲಾಗಿದೆ:—ಅಹ್ಮದಾಬಾದ್-ಅಹಮದಾಬಾದ್, ಬ್ಯಾಂಗಲೂರ್-ಬೆಂಗಳೂರ್, ಬಾಂಬೆ-ಮುಂಬೈ, ಕಾನ್‌ಪುರ್-ಕಾನ್‌ಪುರ್, ಪೈಜಾಬಾದ್-ಫೈಜಾಬಾದ್, ಗೋವರ್ನರ್-ಗೋವರ್ನರ್, ಜಮ್ನಾ ಬ್ರಿಡ್ಜ್-ಯಮುನಾ ಬ್ರಿಡ್ಜ್, ಕನಾರಾ-ಕನಾರಾ, ಮುಟ್ರಾ-ಮಥುರಾ, ನಿಮ್ಮಸಾರ್-ನಯಿಮಸಾರಾಯ್, ಪರ್ತಾಬ್‌ಗರ್-ಪ್ರತಾಪ್‌ಗರ್, ರುಕ್ಮಿಕೇಶ್-ರುಷಿಕೇಶ, ಉನೋ-ಉನ್ನೋ.

ಪ್ರಚಂಡ ಬಿರುಗಾಳಿಯಿಂದ ೫೦೩ ಜನರ ಮರಣ

ಆಮೆರಿಕದ ಓಕ್ಲಾಹೋಮ ಬಳಿಯಲ್ಲಿ ನೈರಿ ವೇಗದ ಪ್ರಚಂಡ ಬಿರುಗಾಳಿಯು ಎದ್ದು, ೫೦೩ ಜನರು ಸತ್ತರೆಂದೂ, ೨ ನೆಗಂಗಳು ನೆಲಸಮವಾದುವೆಂದೂ ಹೇಳಲಾಗಿದೆ. ೬೮ ವಿಮಾನಗಳೂ ನಾಶವಾದವೆಂದೂ ೧೫೦ ಲಕ್ಷ ಡಾಲರುಗಳನ್ನು ನಷ್ಟ ಸಂಭವಿಸಿದೆ.

೧೫ ಸಾವಿರ ಮೈಲಿ ರೇಡಿಯೋ ಫೋಟೋ ಮಾರ್ಗ

ಲಂಡನ್ನಿಂದ ನ್ಯೂಜೀಲೆಂಡಿಗೆ ಕಾಗದ, ಹೆಳ್ಳು ಮತ್ತು ಫೋಟೋಗಳನ್ನು ವೈರ್‌ಲೆಸ್ ಮೂಲಕ ಕಳುಹಿಸಲು ಬ್ರಿಟನ್ನಿನ ಕೇಬಲ್ ಮತ್ತು ವೈರ್‌ಲೆಸ್ ಕಂಪೆನಿಯವರು ಯತ್ನಿಸಿ ಮಾಡಿದ್ದಾರೆ. ಅದು ೧೫ ಸಾವಿರ ಮೈಲಿ ಸಂಪರ್ಕವಿರಲಿದ್ದು, ಪ್ರಪಂಚದಲ್ಲೇ ಅತಿ ದೊಡ್ಡ ರೇಡಿಯೋ ಫೋಟೋ ಮಾರ್ಗವಾಗಿದೆ

ಶ್ರೀ ಗಣೇಶಾ ಟಾಕೀಸ್

23-3-48 ರಿಂದ

ಪ್ರತಿದಿನ 2-30, 6-30, ಮತ್ತು 9-45 ಗಂಟೆಗೆ

ಅರೆಬಿಮಣಿ

ಲಭ [ತಮಿಳು]

ಭೂಮಿಕೆ—ಎಂ ಆರ್ ಸಂತಾನಲಕ್ಷ್ಮಿ, ಎಸ್. ಎಸ್ ಕೃಷ್ಣ, ಟಿ ಎ ಮಧುರಂ

ಅತಿ ಸಣ್ಣ ಟೈಪ್‌ರೈಟರ್

ಪ್ರಪಂಚದಲ್ಲೇ ಅತಿ ಸಣ್ಣದಾದ ಎಸ್ಪೆರ್ ಎಂಬ ಟೈಪ್‌ರೈಟರನ್ನು ಲಂಡನ್ನಿನಲ್ಲಿ ಪ್ರಾರಂಭವಾಗಿರುವ ಬಿಟಿಷ್ ಕೈಗಾರಿಕಾ ಪ್ರದರ್ಶನದಲ್ಲಿ ಇಡಲಾಗಿದೆ. ಅದು ೨೯ ವಲ ೧೧ ಇಂಚು ಉದ್ದ, ಮತ್ತು ೪½ ಪೌಂಡು ತೂಕವಿದ್ದು ಒಂದು ತೆರೆದ ಬೀಕೆಸ್ ಪೆಟ್ಟಿಗೆಯಷ್ಟಿರುವುದು. ಅದು ಅಷ್ಟು ಚಿಕ್ಕದಾಗಿದ್ದರೂ ಒಂದು ಸಲಕ್ಕೆ ೫ ಅಥವಾ ೬ ಪ್ರತಿಗಳನ್ನು ತೆಗೆಯಬಲ್ಲದು.

ಪ್ಲೇಗಿಗೆ ಹೊಸ ಔಷಧಿ

ಭಾರತದಲ್ಲಿ ಪ್ಲೇಗಿನ ಉಪದ್ರವವನ್ನು ತಡೆಗಟ್ಟಲು ಪೊಲಿಮಿಕ್ಸಿನ್ ಎಂಬ ಹೆಮ್ಮೆಯ ಔಷಧಿಯನ್ನು ಅಮೆರಿಕದಿಂದ ತರಿಸಲಾಗುವುದೆಂದು ಹೇಳಲಾಗಿದೆ. ಈ ಔಷಧಿಯಿಂದ ವಿಷಮಶೀತ ಜ್ವರ, ಮತ್ತು ಇತರ ರೋಗಗಳೂ ಗುಣವಾಗುವುದೆಂದು ವರದಿಯಾಗಿದೆ

ನೂತನ ಬ್ರಿಟಿಷ್ ನೋಟುಗಳು ಕಾರು

ಬ್ರಿಟನ್ನಿನಲ್ಲಿ ನೂತನವಾದ ಫೂಷನ್ ಮ್ಯಾಗ್ನಾರ್ಡ್ ಎಂಬ ವೇಗದ ಕಾರುಗಳಿಗೆ ಇತರ ಕಡೆಗಳಂತೆ ವಿಶೇಷ ಗಿರಾಕಿಗಳು ಇದ್ದು ಈಗಾಲೇ ೬೬೫ ಕೋಟಿ ರೂ. ಗಳ ಬೆಲೆ ಬಾಳುವಷ್ಟು ಕಾರುಗಳಿಗೆ ಆರ್ಡರ್‌ಗಳು ಬಂದಿವೆಯೆಂದು ಹೇಳಲಾಗಿದೆ ಭಾರತವೂ ಇಂದು ಅಂತಹ ಸಣ್ಣ ಕಾರುಗಳಿಗೆ ಆರ್ಡರು ಕೊಟ್ಟಿದೆಯೆಂದೂ ಗಂಟೆಗೊಂದಂತೆ ಅವುಗಳನ್ನು ತಯಾರಾಗುತ್ತಿದೆಯೆಂದೂ ವರದಿಯಾಗಿದೆ.

ಪ್ರಪಂಚದ ರಾಜ್ಯಾಂಗ

ವಿಶ್ವ ಸರ್ಕಾರವೊಂದು ಸಂಸ್ಥೆಯನ್ನು ಚಿಸಲು, ಪ್ರಪಂಚದ ರಾಜ್ಯಾಂಗವೊಂದನ್ನು ಸ್ಥಾಪಿಸಬೇಕೆಂದು ಬ್ರಿಟನ್ನಿನ ೧೫೦ ಜನ ಪಾರ್ಲಿಮೆಂಟ್ ಸದಸ್ಯರು ಒಂದು ಮಸೂದೆಯನ್ನು ಮಂಡಿಸಿದ್ದಾರೆ.

ಬರ್ನಾರ್ಡ್ ಷಾರವರಿಂದ ಗಾಂಧೀಜಿ ಜೀವನ ಚರಿತ್ರೆ

ಬ್ರಿಟನ್ನಿನ ಸುಪ್ರಸಿದ್ಧ ಸಾಹಿತಿಗಳು ಬರ್ನಾರ್ಡ್ ಷ ರವರು ಮಹಾತ್ಮರ ಜೀವನ ಚರಿತ್ರೆಯನ್ನು ಬರೆಯುವರೆಂದೂ ಅದು ಈ ವರ್ಷದಿಸಂಗಾಗಿ ಪ್ರಕಟವಾಗುವುದೆಂದೂ ತಿಳಿದುಬಂದಿದೆ.

ಅಶೋಕಾ ಟಾಕೀಸ್

19-3-48 ನೇ ಶುಕ್ರವಾರದಿಂದ

ಪ್ರತಿ ದಿನ ೩ ಆಟಗಳು

ಸಕಟಯೋಗ

[ತಮಿಳು]

— ಸಾಹ್ಯ —

ಎಂ ಆರ್ ಸ್ವಾಮಿನಾಥನ್, ಡಿ ಆರ್ ರಾಮಚಂದ್ರನ್, ಪಿಯೆ ಪೆರಿಯ ನಾಯಕಿ, ಎ ಎಸ್ ಜಾನಕಿ, ವಿದ್ವಾನ್ ಶ್ರೀನಿವಾಸನ್, ಶೀನು, ದೊರೈ-ಕಾಳಿ ಎನ್ ರತ್ನಂ, ರಾಜಕಾಂತಂ

Edited printed and published by A. R. Nagarajan at the Sadhvi Press D. Subbaiah Road Mysore

ಇದು ಗೊಜಮಾ?

ಪ್ರಭುದೇವಾ ಟಾಕೀಸಿನಲ್ಲಿ

21-3-48 ರಿಂದ ಅಮೋಘ ಪ್ರಾರಂಭ

ಪ್ರತಿ ದಿನ ೩ ಆಟಗಳು

ಇದು ನಿಜವಾ?

ಈ ಚಿತ್ರದಲ್ಲಿ ಬರುವ ಲಾರ್ಡ್ ಗಣಪ. ನಾರದ ಮುನೀಂದ್ರರ

ದೃಶ್ಯಗಳೆಲ್ಲವೂ ಪ್ರತ್ಯೇಕವಾಗಿ ತೆಗೆಯಲ್ಪಟ್ಟು

ಮನಸ್ಸಿಗೆ ಆನಂದವನ್ನು ಒದಗಿಸುವುದು

ರಾಜಕಮಲ್,

ಮೈಸೂರು

ತಾ|| ೨೦-3-48 ರಿಂದ

ಅಪೂರ್ವ ಪ್ರಾರಂಭ

ಪ್ರತಿ ದಿನ ಮೂರು ಆಟಗಳು

ಚಂದ್ರಮೋಹನ್ ಜಯಶ್ರೀ

ರಾಜಕಮಲ್ ರವರ

ಶಾಕುಂತಲ

(ಹಿಂದಿ)

ಸಂಪುಟ ೬] ಬುಧವಾರ ೨೪-೩-೪೮ [ಸಂಚಿಕೆ ೧೯೪

ಟ್ರಿಚ್ಚಿ ಪೌರಸಭೆಯಲ್ಲಿ ಗಾಂಧೀ ಸ್ಮಾರಕಕ್ಕೆ ಅಡ್ಡಿ

ಹೊಟೇಲ್ ಕೆಲಸಗಾರರ ಸತ್ಯಾಗ್ರಹ

ಮೈಸೂರು ೩೪

ಮೈಸೂರು ನಗರದ ಹೊಟೇಲ್ ಕೆಲಸಗಾರರ ಸಂಘದ ಸಭೆಯು ನಿನ್ನೆ ರಾತ್ರಿ ಶ್ರೀ ಕೆ ಸುಬ್ಬರಾಯರ ಅಧ್ಯಕ್ಷತೆಯಲ್ಲಿ ನ ಡೆಯಿತು. ಇದೇ ೩೬ ನೇ ತಾರೀ ಬೆಂಗಳೂರಿನಲ್ಲಿ ಹೊಟೇಲ್ ಕೆಲಸಗಾರರು ಹೂಡುವ ಸತ್ಯಾಗ್ರಹಕ್ಕೆ ಬೆಂಬಲ ಕೊಡಬೇಕೆಂದೂ, ಮತ್ತು ಷಾಪ್ ಅಸಿಸ್ಟೆಂಟ್ ಕಾನೂನನ್ನು ಸರ್ಕಾರದವರು ಇದೇ ೩೬ ನೇ ತಾರೀ ಪೂರ್ವಗಾಗಿ ಜಾರಿಗೆ ತರಬೇಕೆಂದೂ ಪ್ರಾರ್ಥಿಸುವ ನಿರ್ಣಯಗಳು ಸಭೆಯಲ್ಲಿ ಅಂಗೀಕೃತವಾದವು.

ಹರಿಕಥೆ

ಶಿ. ಸುಬ್ಬರಾಯ ರಸ್ತೆಯಲ್ಲಿರುವ ಶ್ರೀ ಪ್ರಜ್ಞಾನಂದ ಸ್ವಾಮಿಗಳ ಔಷಧಾಲಯದ ಮುಂಭಾಗದಲ್ಲಿ ಈ ದಿನ ರಾತ್ರಿ ೯ ಗಂಟೆಗೆ ವೇ||ಬ್ರ|| ವೆಂಕಟಸುಬ್ಬರಾಯರಿಂದ ಗಿರಿಜಾ ಕಲ್ಯಾಣ ಎಂಬ ಹರಿಕಥೆಯು ನಡೆಯುವುದು.

ಡಾ|| ಹರ್ಡೀಕರ್

ಯುಬ್ಬಳ್ಳಿಯ ಡಾ|| ಎ. ಎಸ್ ಹರ್ಡೀಕರು ನಾಳೆ ರಾತ್ರಿ ಮೈಸೂರಿಗೆ ಬರುವರು. ನಾಡಿನ್ನು ಇಲ್ಲಿನ ಕಾಂಗ್ರೆಸ್ ಕಲಸಗಾರ ರೊಡನೆ ಮಾತುಕತೆ ನಡೆಸಿ ಮೂರನೇ ದಿನ ಹುಬ್ಬಳ್ಳಿಗೆ ತೆರಳುವರು.

ವಿದ್ಯಾರ್ಥಿಗಳಿಗೆ ಕುಸ್ತಿ ಪಂದ್ಯ

ಬೆಂಗಳೂರು ಸೆಂಟ್ರಲ್ ಕಾಲೇಜಿನ ಆವರಣದಲ್ಲಿ ಕಳೆದ ಭಾನುವಾರ ನಡೆದ ವಿದ್ಯಾರ್ಥಿಗಳ ಕುಸ್ತಿ ಪಂದ್ಯದಲ್ಲಿ ಬನುವು ಯ್ಯನವರ ಹೈಸ್ಕೂಲಿನ ಶ್ರೀ ಸಿ. ಕೃಷ್ಣರವರು ಜಯಶೀಲರಾಗಿ ಷೀಲ್ಡನ್ನು ಪಡೆದುವರು ಶಾರದಾವಿಲಾಸ ಹೈಸ್ಕೂಲಿನ ಶ್ರೀ ಎಂ. ಜರ್ ಸುದರ್ಶನರವರಿಗೆ ಪ್ರಥಮ ಬಹುಮಾನವು ದೊರೆತಿದೆ.

ನೂತನ ಕಾರ್ಮಿಕ ಸಂಸ್ಥೆ

ಅಖಿಲ ಭಾರತ ಕಾರ್ಮಿಕ ಕಾಂಗ್ರೆಸ್ ಎಂಬ ನೂತನ ಸಂಸ್ಥೆಯನ್ನು ರಚಿಸಬೇಕೆಂದು ನಾಸಿಕದಲ್ಲಿ ನಡೆದ ಸಮಾವೇಶದ ಟ್ರೇಡ್ ಯೂನಿಯನ್ನಿನ ಸದಸ್ಯರುಗಳ ಸಮ್ಮೇಳನದಲ್ಲಿ ನಿರ್ಧಾರವಾಗಿದೆ.

ಯೂರೋಪ್ ದೇಶಗಳಿಗೆ ೫೦೦ ಲಕ್ಷ ಡಾ|| ಸಹಾಯ

ಅಮೆರಿಕಾ ಸಂಯುಕ್ತ ಸಂಸ್ಥಾನ ಮತ್ತು ಇಟಲಿ ಗಳಲ್ಲಿ ಕಾರ್ಮಿಕ ಸಹಾಯಾರ್ಥವಾಗಿ ಅವಿರತವಾಗಿ ದುಡಿಯುತ್ತಿರುವ ಪ್ರಾಥಮಿಕ ಪ್ರತಿನಿಧಿ ಸಭೆಯು ೫೦೦ ಲಕ್ಷ ಡಾಲರುಗಳನ್ನು ಮಂಜೂರು ಮಾಡಿದೆ.

ಬರ್ಲಿನನ್ನು ಬಿಟ್ಟು ಹೋಗಬೇಕು

ಬರ್ಲಿನ್ ಆಕ್ರಮಿತ ನಾಲ್ಕು ರಾಷ್ಟ್ರಗಳ ಸೈನ್ಯಗಳಲ್ಲಿ ವೃನ್ಯಸ್ಯಯಂ ಈಗ ಬಿದ್ದು ಹೋಗಿರುವುದರಿಂದ, ಬರ್ಲಿನ್ ನಗರವನ್ನು ಅಮೆರಿಕ, ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳು ಬಿಟ್ಟುಹೋಗಬೇಕೆಂದು ರಷ್ಯ ಒತ್ತಾಯ ಮಾಡಬಹುದೆಂದು ಹೇಳಲಾಗಿದೆ

ಉದಯಪುರದಲ್ಲಿ ತಾತ್ಕಾಲಿಕ ಸರ್ಕಾರ

ತಾತ್ಕಾಲಿಕ ಪ್ರಧಾನ ಸರ್ಕಾರವನ್ನು ಸ್ಥಾಪಿಸಲು ಉದಯಪುರದ ಮಹಾರಾಜರು ಪ್ರಯತ್ನಿಸಿದ್ದು ಅದರಲ್ಲಿ ಜನ ಮಂತ್ರಿಗಳಲ್ಲಿ ಒಬ್ಬರಾಗಿದ್ದ ಶ್ರೀ ಎಸ್ ಎ ರಾಮಮೂರ್ತಿಯವರೇ ದಿವಾನರಾಗಿರುವರು.

ಮದರಾಸ್ ಮಂತ್ರಿಗಳ ಆಗಮನ

ಸ್ವಂ ಸು ಪೋ|| ಬೆಂಗಳೂರು ೩೪

ಮದರಾಸಿನ ಪ್ರಧಾನಿ ಶ್ರೀ ಓಮಂದೂರು ರಾಮಸ್ವಾಮಿ ರೆಡ್ಡಿಯವರೂ ಮತ್ತು ಮಂತ್ರಿಮತ್ತು ಸಚಿವರಾದ ಶ್ರೀ ಎಂ. ಭಕ್ತವತ್ಸಲಂರವರೂ ಬರುವ ತಂಗಳು ೨ ನೇ ತಾರೀಖು ಇಲ್ಲಿಗೆ ಆಗಮಿಸಿ ಆ ದಿನ ಇಲ್ಲಿ ಆರಂಭವಾಗಲಿರುವ ರಾಷ್ಟ್ರಾಂಗ ಸಭಾ ಅಧಿವೇಶನವನ್ನು ವೀಕ್ಷಿಸುವರು ಅವರು ನ್ಯಾಯಾಂಗ ಸಚಿವರಾದ ಶ್ರೀ ಕೆ ಬಿ ಥಾಮ್ಮಯ್ಯನವರೊಡನೆ ಮೋಗ್, ಭದ್ರಾ ಅಣೆಕಟ್ಟು ಮೊದಲಾದ ಕಡೆಗಳಿಗೆ ಭೇಟಿ ಕೊಡುವರು ಸಂಸ್ಥಾನದ ವ್ಯವಸಾಯಾಭ್ಯುನ್ನತಿಗಾಗಿ ಪರಿಶೀಲಿಸುವುದನ್ನು ಮತ್ತು ಮೇಕೆದಾಟಿನಲ್ಲಿ ಕಟ್ಟುವಾಗುವ ವಿದ್ಯುಚ್ಛಕ್ತಿ ಕೇಂದ್ರದ ನಿವೇಶನದ ಬಗ್ಗೆಯೂ, ಸಂಸ್ಥಾನದ ಅಧಿಕಾರಿಗಳೊಡನೆ ಮಾತುಕತೆ ನಡೆಸುವರೆಂದು ಗೊತ್ತಾಗಿದೆ (ಈ ನಿವೇಶನವು ಮದರಾಸ್ ಗಡಿ ಪ್ರದೇಶಕ್ಕೆ ಸೇರಿದೆ.)

§ ಒಟ್ಟಿಗಳ ಮೇಲೆ ಅಚ್ಚು ಹಾಕುವ ಬಗ್ಗೆ ಇದ್ದ ಹತೋಟಿ ಆಜ್ಞೆಯನ್ನು ಸರ್ಕಾರದವರು ೧-೧- ೪೮ ರಿಂದ ಎರಡು ವರ್ಷ ಕಾಲ ರದ್ದು ಮಾಡಿದ್ದಾರೆ

ಅತ್ಯುತ್ತಮ ನಟ ನಟಿಯರಿಗೆ ಬಹುಮಾನ

೧೯೪೭ ನೇ ವರ್ಷದ ಅತ್ಯುತ್ತಮ ನಟ ನೆಂಬ ೫೭ ವರ್ಷದ ಬ್ರಿಟಿಷ್ ನಟ ರಿಚರ್ನಾಲ್ಡ್ ಕೋಲ್ಮಾನ್ನಿಗೆ ಹಾಲಿವುಡ್ ಚಿತ್ರ ತೀರ್ಪುದಾರರು ಪ್ರಥಮ ಬಹುಮಾನವನ್ನು ಕೊಟ್ಟಿರುವರು; ಅತ್ಯುತ್ತಮ ನಟಿಯೆಂದು ಲಾರೆಟಾ ಯಂಗ್‌ರವರಿಗೂ ಬಹುಮಾನವನ್ನು ಕೊಡಲಾಗಿದೆ

ತಿಪಟೂರಿನಲ್ಲಿ ಕಾಲಗ್ರೆಸ್ಸಿಗೆ ವಿಜಯ

ತಿಪಟೂರು ೩೪

ರಾಷ್ಟ್ರಾಂಗ ಸಭಾ ಚುನಾವಣೆಗಿಂತಲೂ ಗ್ಗೆಯೆದ್ದಿಯಿಂದ ಕಾಂಗ್ರೆಸ್ ಉಮೇದುವಾರ ರಾದ ಶ್ರೀಗಳು ಹೆಚ್ ಸಿದ್ದಯ್ಯ, ಕೆ ಆರ್ ನಾಥವಾಲ್, ಕೆ ಮಂಜಪ್ಪ ಮತ್ತು ಕಾಂಗ್ರೆಸ್ ಬೆಂಬಲ ಪಡೆದು ಶ್ರೀಗಳಿ ಎಲ್ ಸಿದ್ದಪ್ಪನವರುಗಳು ಜಯಶೀಲರಾಗಿದ್ದಾರೆ ಶ್ರೀಗಳುದ ರಾಮಚಂದ್ರಪ್ಪನವರೆಬ್ಬೆ ಮತ್ತು ಎಂ ಎ ಪಾಟೀಲರವರುಗಳು ಸೋಷಿಜಿಕರಾಗಿರುವರು

○ವಿನಾ ಚೆಮ್ಮ ಲಾಲ್‌ರವರನ್ನು ಟರ್ಕಿಯಲ್ಲಿ ಭಾರತದ ರಾಯಭಾರಿಗಳಾಗಿ ಕೇಂದ್ರ ಸರ್ಕಾರದವರು ನೇಮಿಸಿದ್ದಾರೆ.

ಪ್ರಧಾನ ಸಚಿವರ ಆಗಮನ

ವೈಕೂರು ೩೪

ಪ್ರಧಾನ ಮಂತ್ರಿಗಳಾದ ಶ್ರೀ ಕೆ. ಸಿ. ರೆಡ್ಡಿಯವರು ಈ ದಿನ ಮಧ್ಯಾಹ್ನ ಮೋಟಾರಿನಲ್ಲಿ ಇಲ್ಲಿಗೆ ಆಗಮಿಸಿದರು. ಅವರು ಪ್ರಭುಗಳವರನ್ನು ಭೇಟಿ ಮಾಡಿದ್ದರು.

ಸದ್ಯಕ್ಕೆ ಯುದ್ಧದ ಭಯವಿಲ್ಲ

ದೆಹಲಿಯ ರಾಮಲೀಲಾ ವೈದಾನದಲ್ಲಿ ನಡೆದ ಸೈನ್ಯದ ಕವಾಜಿನಲ್ಲಿ ಸಂಯುಕ್ತ ಸಹಕಾರವು ಭಾಷಣ ಮಾಡುತ್ತ ಸದ್ಯದಲ್ಲಿ ಯುದ್ಧ ನಡೆಯುವ ಸಂಭವವಿಲ್ಲವೆಂದು ತಿಳಿಸುತ್ತಾರೆ ಶಾಂತಿ ಸ್ಥಾಪನೆಗಾಗಿ ಭಾರತವು ಸರ್ವ ಪ್ರಯತ್ನ ಮಾಡುತ್ತಿದೆಯೆಂದೂ, ಯಾವ ರಾಷ್ಟ್ರವನ್ನೂ ಆಕ್ರಮಿಸಬೇಕೆಂದು ಭಾರತಕ್ಕೆ ಯಾವ ದುರಾಸೆಯೂ ಇಲ್ಲವೆಂದೂ, ಆದರೆ ತನ್ನ ಸ್ವಾತಂತ್ರ್ಯವನ್ನು ಮಾತ್ರ ರಕ್ಷಿಸಿಕೊಳ್ಳಲು ಸಮರ್ಥವಾಗಿರುವುದಾಗಿಯೂ ದಿಲ್ಲಿಯಲ್ಲಿ ಹಿಂದುಸ್ಥಾನಿ ಪತ್ರಿಕೆಯ ಸಂಪಾದಕರ ಸಭೆಯಲ್ಲಿ ಹೇಳಿದ್ದಾರೆ

ಇತ್ತಿಹಾದೆ ಗೂಂಡಾಗಳ ದಾಂಧಲೆ

ವಾರಂಗಲ್ ಜಿಲ್ಲೆಯ ಕೊಂಕಪಕ್ಕಹಳ್ಳಿಯ ನೇಜಿ ಇತ್ತಿಹಾದೆ ಮುಸ್ಲಿಮರ್ ಸೈಯಂ ಸೇವಕರು ಮತ್ತು ನಿಜಾಂ ಪೋಲೀಸರು ಧಾಳಿ ಮಾಡಿ ಅದಕ್ಕೆ ಬೆಂಕಿ ಇಟ್ಟರೆಂದೂ, ಓಡಿಹೋಗಲು ಪ್ರಯತ್ನಿಸಿದ ೧೬ ಜನರನ್ನು ಒತ್ತಾಯವಾಗಿ ಹಿಡಿದು ಕೊಂಡು ಹೋಗಿ ಅವರನ್ನು ಕಟ್ಟಿ ಹಾಕಿ ಗುಂಡಿನಿಂದ ಹೊಡೆದು ಸಾಯಿಸಿದರೆಂದೂ ಹೇಳಲಾಗಿದೆ

ಶಸ್ತ್ರಾಸ್ತ್ರಗಳ ತಯಾರಿಗೆ ನಿಜಾಮರ ಪ್ರೋತ್ಸಾಹ

ಹೈದರಾಬಾದಿನಲ್ಲಿ ಹಲವು ಪೂಸಗಿ ಕಂಪನಿಗಳು ಸರ್ಕಾರದ ಸಹಾಯ ಪಡೆದು ಶಸ್ತ್ರಾಸ್ತ್ರಗಳು ಮತ್ತು ಮದ್ದು ಗುಂಡುಗಳನ್ನು, ಸಿಸ್ಕೂಲ್, ರೈಫಲ್ಲುಗಳನ್ನೂ ತಯಾರಿಸುತ್ತಿರುವರೆಂದು ವರದಿ ಬಂದಿರುವುದಾಗಿ ಒ || ನೆಹರೂರವರು ನಿನ್ನೆ ದಿನ ಡೆಮಿಸಿಯಲ್ ಅಸೆಂಬ್ಲಿಯಲ್ಲಿ ತಿಳಿಸಿದರು ಈ ವಿಷಯದಲ್ಲಿ ನಿಜಾಂ ಸರ್ಕಾರದವರೊಡನೆ ಪತ್ರ ವ್ಯವಹಾರ ನಡೆಸಿ ವರದಿ ಮಾಡುವಂತೆ ಬ್ರಿಟಿಷ್ ಪ್ರತಿನಿಧಿಯಾದ ವಿಲಿಯಂ ಫ್ರಾಂಟ್ ಜನರಲ್ಲರವರಿಗೆ ಸೂಚನೆ ಕೊಡಲಾಗಿದೆಯೆಂದೂ ಅವರು ಹೇಳಿದರು

○ಪಂಡಿತ್ ಜವಹರ್ ಲಾಲ್ ನೆಹರೂ ತಂದೆ ಮತ್ತು ಮಗ ಇವರಿಬ್ಬರೂ ಈ ಸಾರಿ ವಿದ್ಯಾರ್ಥಿ ಕಾಂಗ್ರೆಸ್ ಸ್ಥಾನಕ್ಕೆ ಸ್ಪರ್ಧೆಗೆ ಸಿದ್ಧರಾಗಿರುವರು ತಂದೆಗೆ ೬೨ ವರ್ಷ, ಅವರು ವೈಮೂರಿ ಶಾಲಾ ಉಪಾಧ್ಯಾಯರು.

ಗಾಂಧೀ ಸ್ಮಾರಕಕ್ಕೆ ಪೌರಸಭೆಯು ನಿರಾಕರಣೆ

ತಿರುಚನಾಪಳ್ಳಿಯ ಪೌರಸಭೆಯ ವೈಸ್ ಅಧ್ಯಕ್ಷರು ಮದರಾಸ್ ಪ್ರಾಂತ್ಯದಲ್ಲಿ ಮಹಾತ್ಮಾ ಗಾಂಧಿಯವರ ಸ್ಮಾರಕಕ್ಕಾಗಿ ೫೦ ಸಾವಿರ ರೂಗಳ ಬಜೆಟ್‌ನಿಂದ ಸ್ಥಳವನ್ನು ಕೊಡಬೇಕೆಂಬ ನಿರ್ಣಯವು ಅಲ್ಲಿನ ಪೌರಸಭೆಯಲ್ಲಿ ಬಿದ್ದು ಹೋಯಿತು. ಪ್ರಮುಖ ಜೂಬಲಿ ತೋಟವನ್ನು ಗಾಂಧಿ ಪಾರ್ಕ್ ಎಂದೂ, ನಗರದ ಹಲವು ಭಾಗಗಳಲ್ಲಿ ಗಾಂಧೀ ಪ್ರತಿಮೆಗಳನ್ನು ಸ್ಥಾಪಿಸಬೇಕೆಂದೂ ಮತ್ತು ಸರ್ ಆರ್ಥರ್ ಹೋಪ್ ಆಸ್ಪತ್ರೆಯನ್ನು ಗಾಂಧೀ ಸ್ಮಾರಕ ಆಸ್ಪತ್ರೆಯೆಂದೂ ಬದಲಾಯಿಸಬೇಕೆಂದು ಬಂದಿದ್ದ ಎರಡು ತಿದ್ದುಪಡಿಗಳೂ ಸಹ ಬಿದ್ದುಹೋದವು

ಜರ್ಮನಿಯಲ್ಲಿ ಕಮ್ಯೂನಿಸ್ಟರ ಆಡಳಿತವೇ ?

ಜರ್ಮನ್ ಆಕ್ರಮಿತ ನಾಲ್ಕು ರಾಷ್ಟ್ರಗಳ ಆಡಳಿತ ಸಮಿತಿಯ ಸಂಧಾನದ ಮಾತುಕತೆಗಳು ಸಂಪೂರ್ಣವಾಗಿ ಮುರಿದು ಹೋಗುವುದಾದರೆ ಅಲ್ಲಿ ಕಮ್ಯೂನಿಸ್ಟ್ ಸರ್ಕಾರವನ್ನು ಸ್ಥಾಪಿಸಲು ಜನರಿಯಾ ಬುಷ್ಯ ನಿಸ್ಟರು ಹಂಚಿಕೆ ಹಾಕಿರುವರೆಂದು ಹೇಳಲಾಗಿದೆ.

ಪ್ಯಾಲೆಸ್ಟೀನಿನಲ್ಲಿ ಅಗತ್ಯ ೧೬ ರಿಂದ ಯಹೂದ್ಯ ಸರ್ಕಾರವೆ ?

ಬ್ರಿಟಿಷರು ಪ್ಯಾಲೆಸ್ಟೀನಿನಲ್ಲಿ ತಮ್ಮ ಆಡಳಿತವನ್ನು ಅಗತ್ಯ ೧೫ ನೇ ತಾರೀ ಮುಂ ಕ್ರಿಯಾಗೊಳಿಸಿ ಅವನ್ನು ಬಿಟ್ಟು ಹೋದ ನೂರನೇ ದಿನವೇ ಯೆಹೂದ್ಯರು ಜಿಷ್ಟ ತಮ್ಮ ಸಾರ್ವಭೌಮ ಸ್ವಾಮ್ಯವನ್ನು ಸ್ಥಾಪಿಸುವುದಾಗಿ ಘೋಷಣೆ ಮಾಡಿರುವರೆಂದು ಜೆರುಸಲೇಮಿನಿಂದ ವರದಿ ಬಂದಿದೆ.

ಹೈದರಾಬಾದ್ ಪೊಲೀಸರ ಸಂಚಲನೆ

ಹೈದರಾಬಾದಿನ ಪರ್ಯಾಸಿ ಎಂಬಲ್ಲಿನ ಒಬ್ಬ ನಿವಾಸಿಯು ತನ್ನ ೧೪ ವರ್ಷದ ದುಗಳು ಅಪಹರಿಸಲ್ಪಟ್ಟಿಳೆಂದು ಅಳುವಿಕೆ ಈ ಸಂಬಂಧದಲ್ಲಿ ಇತ್ತಿಹಾದ್ ಸಂಸ್ಥೆಯ ಒಬ್ಬ ಗೂಂಡಾವನ್ನು ಹಿಡಿದು ಪೊಲೀಸರ ವಶಕ್ಕೆ ಒಪ್ಪಿಸಿ ದೂರು ಕೊಟ್ಟರು. ಪೊಲೀಸರು ಆ ಗೂಂಡಾವನ್ನು ಬಿಟ್ಟುಬಿಟ್ಟು ದೂರು ಕೊಡಲು ಹೋಗಿದ್ದವನನ್ನೇ ಬಂಧಿಸಿದ್ದಾರೆ

ಮದರಾಸಿಗೆ ಕಾಫಿ ಸರಬರಾಜು

ಬೆಂಗಳೂರಿನಲ್ಲಿರುವ ಟೀಕ್ಷ್ ಬಫಿ ಕಂಟ್ರೋಲರವರು ಮದರಾಸಿಗೆ ಸಾಕಾಗುವಷ್ಟು ಕಾಫಿಯನ್ನು ಸರಬರಾಜು ಮಾಡುವುದಾಗಿ ತಿಳಿಸಿದ್ದಾರೆಂದೂ ಅವರ ತಿಂಗಳಿನಲ್ಲಿ ಮದರಾಸಿಗೆ ಬೇಕಾದ ಬಫಿಯಲ್ಲಿ ಅರ್ಧಾಸನ್ನವನ್ನು ಮಾತ್ರ ಸರಬರಾಜು ಮಾಡಿದ್ದಾರೆಂದೂ ತಿಳಿದು ಬಂದಿದೆ.

Modern
UP-TO-DATE HOUSE
For Sale
Light, Two Rooms and 2 sides in ord wooden yard
No 2100 built in 1918
Price Rs 20 000
City Auctioneering Co.
3 M Palace View Mysore

ವಯಸ್ಕರ ಶಿಕ್ಷಣ ಸಮ್ಮೇಳನ

ಮೈಸೂರು ೨೪

ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ ಕಾರ್ಯಕರ್ತರುಗಳ ಸಮ್ಮೇಳನವು ಇದೇ ೨೬, ೨೭ ಮತ್ತು ೨೮ ನೇ ತಾರೀಖುಗಳಲ್ಲಿ ಕ್ವೀನ್ಸ್‌ಪೇಟೆಯ ಮಾಧ್ಯಮಿಕ ಪಾಠಶಾಲೆಯಲ್ಲಿ ನಡೆಯುವುದು. ಇದರ ಅಂಗವಾಗಿ ಶಿಕ್ಷಣ ಪ್ರದರ್ಶನ, ಸುಸಂಘ ಸಮ್ಮೇಳನ ಮತ್ತು ಒಣಕಲ ಕಲಾ ಪ್ರದರ್ಶನಗಳನ್ನೂ ಏರ್ಪಡಿಸಲಾಗಿದೆ. ೨೬ ನೇ ತಾರೀಖು ಬೆಳಿಗ್ಗೆ ೮-೩೦ ಗಂಟೆಗೆ ಗೃಹ ಸಚಿವರಾದ ಶ್ರೀ ಟಿ. ಮರಿಯಪ್ಪನವರು ವಸ್ತುಪ್ರದರ್ಶನವನ್ನೂ ಮತ್ತು ಸಮ್ಮೇಳನದ ಸ್ವಾರಂಭೋತ್ಸವವನ್ನು ನೆರವೇರಿಸುವರು. ೨೭ ನೇ ತಾರೀಖು ಬೆಳಿಗ್ಗೆ ೮-೩೦ ಗಂಟೆಗೆ ಶ್ರೀಮತಿ ಯಶೋಧರಾ ದಾಸಪ್ಪನವರ ಅಧ್ಯಕ್ಷತೆಯಲ್ಲಿ ಮಹಿಳೆಯರ ಸಮ್ಮೇಳನ ಸಂಜೆ ೪-೩೦ ಗಂಟೆಗೆ ವಿದ್ಯಾ ಮಂತ್ರಿ ಘನ ಶ್ರೀ ಕೆ. ವೆಂಕಟಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ೭-೪೫ ನೇ ತಾರೀಖು ಮಧ್ಯಾಹ್ನ ೨ ಗಂಟೆಗೆ ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸಮ್ಮೇಳನದ ಮುಕ್ತಾಯ ಸಮಾರಂಭವು ನಡೆಯುವುದು.

ಋಗ್ವೇದ ಸಂಹಿತಾ ಹೋಮ

ರಾಜಧಾನಿಯ ಚಾಮುಂಡೀಪುರದ ಶ್ರೀ ಶಂಕರನಾರಾಯಣ ಸ್ವಾಮಿಯವರ ದೇವಸ್ಥಾನದಲ್ಲಿ ಕಳೆದ ೧೪ ನೇ ತಾರೀಖು ಪ್ರಾರಂಭವಾದ ಋಗ್ವೇದ ಸಂಹಿತಾ ಹೋಮವು ನಿನ್ನೆ ೨೩ ನೇ ತಾರೀಖು ಮುಕ್ತಾಯವಾಯಿತು. ಅನಂತರ ಪೂರ್ಣಾಹುತಿ ಕಲಶವಸ್ತ್ರ ಪ್ರತಿಮಾದಾನ ಮತ್ತು ದಶದಾನಗಳಾದ ನಂತರ ಸಹಸ್ರಾರು ಜನಗಳಿಗೆ ಅನ್ನ ಸಂತರ್ಪಣೆ ನಡೆಯಿತು. ಮೈಸೂರು ಸಿಲ್ಕ್ ಫಿಲೇಚರ್ ಕಂಪೆನಿಯ ಸ್ಥಾಪನೆಯಲ್ಲಿ ಮುಖ್ಯವಾದ ಪಾತ್ರವಹಿಸಿದ್ದ ಶ್ರೀ ಜಿ. ಸ್ವಾಮಿಯವರು ಮೇಲ್ಕಾಣಿಸಿದ ಯಾಗವನ್ನು ಯಶಸ್ವಿಯಾಗಿ ನಡೆಸಿದರು.

ಬೆಳಗಿನ ಪ್ರದರ್ಶನ

೮೯-೩-48 ರಿಂದ

೫ ದಿನಗಳು ಮಾತ್ರ

ಔರತ್-

ಮುಖ್ಯ ಪಾತ್ರ:-ಸಿದ್ದಾರ್ ಅಕ್ತರ್, ಯಾಕೂಬ್, ಸುರೇಂದ್ರ

ಬಲಂಸಿಯಾ ಟಾಕೀಸ್

ಕುದುರೆ ಗಾಡಿ ಹೊಡೆಯುವ ನಿರಾಶ್ರಿತ ಮಹಿಳೆ

ಭಾರತದ ಇತಿಹಾಸದಲ್ಲಿ ಮೊಟ್ಟ ಮೊದಲನೇ ಬಾರಿ ಮಹಿಳೆಯೊಬ್ಬಳು ಕುದುರೆ ಗಾಡಿಯನ್ನು ಹೊಡೆಯುತ್ತಿರುವುದು ಇದೇ ದಿನ ಕಂಡುಬಂದಿದೆ. ಪಶ್ಚಿಮ ಪಂಜಾಬಿನ ನಿರಾಶ್ರಿತರೊಬ್ಬಳು ನವದೆಹಲಿಯ ಪಾರ್ಲಿಮೆಂಟ್ ಮೊಹಲ್ಲೆಯಲ್ಲಿ ಪ್ರಯಾಣಿಕರನ್ನು ಕರೆಯುತ್ತ ನಿಂತಿದ್ದ ಆಪೂರ್ವ ದೃಶ್ಯವನ್ನು ಕಂಡು ಬಂದಿತು. ಅವಳ ಕುದುರೆ ಮತ್ತು ಗಾಡಿಯನ್ನು ಪೌರ ಸಭೆಯು ಒಪ್ಪಿಸಿದ್ದರೂ, ಆಳುಗಾಡಿ ಹೊಡೆಯುವುದಕ್ಕೆ ಒಪ್ಪಿಗೆ ಕೊಡಲಿಲ್ಲವಾದುದರಿಂದ, ಪೊಲೀಸರು ಅವಳಿಗೆ ತಾಗಿ ಮಾಡಕೂಡದೆಂದು ಎಚ್ಚರಿಕೆ ಕೊಟ್ಟಿರುವುದು ಹೇಳಲಾಗಿದೆ.

ಮುಂದಿನ ಮಹಾ ಯುದ್ಧದಲ್ಲಿ ಭಾರತದ ತಾಟಸ್ಥ್ಯ

ಮೂರನೇ ಮಹಾಯುದ್ಧ ಸಂಭವಿಸುವುದಾದರೆ ಭಾರತವು ತಾಟಸ್ಥ್ಯವಾಗಿರುವುದು. ಆದರೆ ತನ್ನ ಸ್ವಾತಂತ್ರ್ಯವನ್ನು ರಕ್ಷಿಸಲು ಶಕ್ತಿಯ ಸೇನಾ ಸಾಧನವನ್ನು ಪಡೆಯಲು ಕಟಿಬದ್ಧವಾಗಿರುವುದು-ಎಂದು ಕೇಂದ್ರ ಸರ್ಕಾರದ ಸಚಿವರಾದ ಶ್ರೀ ಗಾಡ್ಗಿಲ್ಲರವರು ಹೇಳಿದ್ದಾರೆ.

ಪ್ರತಿದಿನ ೩ ಆಟಗಳು

24-3-48 ರಿಂದ

ಪಹಿಲಿ ನಜರ್

ಮುಖ್ಯ ಪಾತ್ರ:- ಮೋತಿಲಾಲ್, ವೀಣಾ, ಮುನಾವರ್ ಸುಲ್ತಾನ

ಬಲಂಸಿಯಾ ಟಾಕೀಸ್

ಪ್ರಭಾತ್ ಕಾಂಸಿಟೆರ್ಷ್

ನಂ ೨೪

ಸರಿಯುತ್ತರ

ಎಡದಿಂದ ಎಲಕ್ಕೆ:- ೧ ಹೋಳಿಹಬ್ಬ ೪ ಗುಣಾ ೬ ನಿವೇದಂ ೯ ಚಿತ್ತಿ ೧೦ ವಾಕ್ ೧೧ ಕಗಯಂಬಿ ೧೩ ಕಂ ೧೫ ಗುಡಾಣ

ಮೇಲಿಂದ ಕೆಳಕ್ಕೆ:- ೧ ಹೋಳಿ ೨ ಹುಣ ೩ ಗುಡವಂಕ ೫ ಸಾಚಕರಿ ೭ ದವಾಲಿ ೮ ಕದಕ

ಫಲಿತಾಂಶಕ್ಕೆ ೨೪-೩-೪೮ ರ ಸಾಧ್ವಿ ಪತ್ರಿಕೆ ನೋಡಿ.

ಮ್ಯಾನೇಜರ್

ಒರಿಸ್ಸಾಕ್ಕೆ ಮೈಸೂರು ಇಂಜಿನಿಯರು

ಮೈಸೂರಿನ ನೀರಾವರಿ ಚೀಫ್ ಇಂಜಿನಿಯರಾದ ಶ್ರೀ ಎಂ. ನರಸಿಂಹಯ್ಯನವರ ಸೇವೆಯನ್ನು ಮುಂದಿನ ತಿಂಗಳು ೧೫ ನೇ ತಾರೀಖಿನಿಂದ ತಿಂಗಳ ಕಾಲ ಭಾರತ ಸರ್ಕಾರಕ್ಕೆ ಎರವಲಾಗಿ ಕೊಡಲಾಗುವುದು ಅವರು ಒರಿಸ್ಸಾ ರಾಜ್ಯದಲ್ಲಿ ನಿರ್ಮಾಣವಾಗಲಿರುವ ಹಿರಾಕಡ್ ಅಣೆಕಟ್ಟಿನ ಸಲಹೆಗಾರರಾಗಿರುವರು

೧೩ ಗಂಟೆ ಸಮಾಧಿ

ಮಾಯಾನಗರದ ೫೬ ವರ್ಷದ ಪ್ರೊಫೆಸರ್ ಕೃಷ್ಣಾ ಸ್ಯಾಂಡೋ ರವರು ೧೩ ಗಂಟೆಗಳ ಪರ್ಯಂತ ಸಮಾಧಿಯಲ್ಲಿ ಇರುವ ಪ್ರದರ್ಶನವನ್ನು ಮಾಡಿದರು. ೧೬ ಅಡಿಯ ಒಂದು ಗುಂಡಿಯಲ್ಲಿ ಇವರನ್ನು ಸಂಪೂರ್ಣವಾಗಿ ಹೂಳಲಾಗಿತ್ತು. ೧೩ ಗಂಟೆಗಳ ನಂತರ ಗುಂಡಿಯನ್ನು ತೆರೆದಾಗ ಅವರು ಇನ್ನೂ ಸಮಾಧಿ ಸ್ಥಿತಿಯಲ್ಲಿಯೇ ಇದ್ದರು. ೧೩ ನಿಮಿಷಗಳ ನಂತರ ಅವರಿಗೆ ಪ್ರಜ್ಞೆ ಬಂದಿತು.

ಶ್ರೀ ಗಣೇಶ ಟಾಕೀಸ್

23-3-48 ರಿಂದ

ಪ್ರತಿದಿನ ೩ 15, 6-30, ಮತ್ತು 9 15 ಗಂಟೆಗೆ

ಅರೈಚಿಮಣಿ

[ಪುಟ ೪]

ಭೂಮಿಕೆ—ಎಂ. ಆರ್. ಸಂತಾನಲಕ್ಷ್ಮಿ, ಎಸ್. ಎಸ್. ಕೃಷ್ಣ, ಟಿ ಎ ಪದ್ಮಂ

Edited printed and published by A. R. Nagarajan at the Sadhvi Press D. Subbaiah Road Mysore

ಬ್ರಿಟಿಷ್ ಸಾಮ್ರಾಜ್ಯದ ಅಂತ್ಯ

ಭಾರತ, ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಮತ್ತು ಈಜಿಪ್ಟ್ ದೇಶಗಳಲ್ಲಿರುವ ಬ್ರಿಟಿಷ್ ನ ಅಧಿಕಾರ ಜವಾಬ್ದಾರಿಗಳನ್ನು ಅಮೆರಿಕವು ವಹಿಸಿಕೊಳ್ಳುವ ಒಂದು ಯೋಜನೆಯನ್ನು ಆಲ್ಡಿನ ಸ್ಟೇಟ್ ಇತಿಹಾಸಜ್ಞ ಸಿವಿಸಿರುವರೆಂದೂ, ಅದು ಕಾರ್ಯರೂಪಕ್ಕೆ ಬರುವುದಾದರೆ ಬ್ರಿಟಿಷ್ ಸಾಮ್ರಾಜ್ಯವು ಸಂಪೂರ್ಣವಾಗಿ ಕೊನೆಗಾಣುವುದೆಂದೂ ಲಂಡನ್ನಿನ ಡೇಲಿ ಎಕ್ಸ್‌ಪ್ರೆಸ್ ಪತ್ರಿಕೆಯು ವರದಿ ಮಾಡಿದೆ

ಸತ್ಯನಾರಾಯಣ ವ್ರತ

ರಾಜಧಾನಿಯ ಚಾಮುಂಡಿ ಒಡ್ಡಿನಲ್ಲಿಯ ವೆಂಕಟದಾಸಪ್ಪನವರ ಅಗ್ರಹಾರದಲ್ಲಿ ೧೩ ನೇ ಬ್ಲಾಕಿನ ರಾಜಮಂತ್ರಿಯವರ ನಿವಾಸದಲ್ಲಿ ನಾಳೆ ದಿನ ಪೌರ್ಣಮಿ ಪ್ರಯುಕ್ತ ಶ್ರೀ ಸತ್ಯನಾರಾಯಣ ವ್ರತವು ನಡೆಯಲಿದೆ. ಪುಣ್ಯಾರಾಧನೆಗಳು ನಡೆಯಲಿವೆ. ಸ್ವಾಧಿಗೆಳ್ಳೂ ಆಧ್ಯಾತ್ಮಿಕ ಶಕ್ತಿ ಸೇವೆ ಸಲ್ಲಿಸಬೇಕೆಂದು ಕೋರಲಾಗಿದೆ

ಅಪೇರಾ ಟಾಕೀಸ್

19-3-48 ನೇ ಶುಕ್ರವಾರದಿಂದ

ಪ್ರತಿದಿನ 3 ಆಟಗಳು

ನಕಟಯೋಗಂ

[ತಮಿಳು]

— ಮುಖ್ಯ —

ಎಂ ಆರ್ ಸ್ವಾಮಿನಾಥನ್, ಡಿ ರಾಮಚಂದ್ರ, ಪಿಯೆ ಪೆರಿಯ ನಾಯಕಿ, ಏ ಎಸ್ ಜಾನಕಿ, ವಿದ ಶ್ರೀನಿವಾಸನ್, ಶೀನು, ಮೊದಲಾ ಕಾಳಿ ಎನ್ ರತ್ನಂ ನಾಜಕಾಂತ

ನಾಗರಿಕ ನಡವಳಿಕೆಗೆ ಅತ್ಯನುಚ್ಚಾದ ಜವಳಿ

ಮೈಸೂರು ಸಿಲ್ಕ್

ಬಾಯಿಕೆ ಬರುತ್ತದೆ

ಗವರ್ನಮೆಂಟ್ ಸಿಲ್ಕ್ ವೀವಿಂಗ್ ಸ್ಕಾಕ್ಟರಿ, ಮೈಸೂರು.

ಇದು ಕೇಳಿರುವಿರಾ?

ಪ್ರಭುದೇವಾ ಟಾಕೀಸಿನಲ್ಲಿ

21-3-48 ರಿಂದ ಆಮೋಘ ಪ್ರಾರಂಭ

ಪ್ರತಿ ದಿನ 3 ಆಟಗಳು

ಇದು ನಿಜವಾ?

ಈ ಚಿತ್ರದಲ್ಲಿ ಬರುವ ಲಂಡನ್ ನಗರದ ದೃಶ್ಯಗಳೆಲ್ಲವೂ ಕೃತ್ರಿಮವಾಗಿ ತೆಗೆಯಲ್ಪಟ್ಟವು

ಮನಸ್ಸಿಗಾನಂದವನ್ನು ಒದಗಿಸುವುದು.

ಸಂಪುಟ ೭] ಗುರುವಾರ ೨೫-೩-೪೬ [ಸಂಚಿಕೆ ೧೯೬

ಹೈದರಾಬಾದಿನಲ್ಲಿ ಜವಾಬ್ದಾರಿ ಸರ್ಕಾರ ?

ಕಾಂಗ್ರೆಸ್ ಕಾರ್ಯ ಕರ್ತರುಗಳ ಸಭೆ

ಮೈಸೂರು. ೨೫

ಭಾರತದಲ್ಲಿ ಸೇವಾ ದಳವನ್ನು ಸ್ಥಾಪಿಸಲು ನಿರ್ಧಾರ ಮಾಡುವಂತೆ ನೇಮಿಸಲ್ಪಟ್ಟಿರುವ ಡಾ॥ ಎ ಎಸ್ ಹರ್ಡಿಕರ್‌ರವರನ್ನು ಭೇಟಿ ಮಾಡಲು ಇದೇ ೨೬ ನೇ ತಾ॥ ಶುಕ್ರವಾರ ಸಂಜೆ ೬.೩೦ ಗಂಟೆಗೆ ಕಾಂಗ್ರೆಸ್ ಕಛೇರಿಯಲ್ಲಿ ಕಾಂಗ್ರೆಸ್ ಕಾರ್ಯ ಕರ್ತರುಗಳ ಸಭೆಯನ್ನು ಏರ್ಪಡಿಸಿದೆಯೆಂದೂ, ಎಲ್ಲರೂ ಸಕಾಲಕ್ಕೆ ದಯಮಾಡಿಸಬೇಕೆಂದೂ ನಗರ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳು ಕೋರಿರುತ್ತಾರೆ.

ನಾಡ ಹಬ್ಬ

ರಾಜಧಾನಿಯ ಟೌನ್ ಹಾಲ್‌ನಲ್ಲಿ ಸಂಘದವರು ನಿನ್ನೆ ಸಂಜೆ ನಾಡ ಹಬ್ಬವನ್ನು ಧಾರ್ಮಿಕರ ವ್ಯೋ॥ ಇನಾಮದಾರ್ ಅಧ್ಯಕ್ಷತೆಯಲ್ಲಿ ಆಚರಿಸಿದರು. ಶ್ರೀ ಶಿವರಾಮ ಕಾಖಾಸ್ತ್ರಿಗಳು ಶ್ರೀ ಬೇಂದ್ರೆಯವರ ಕವನಗಳನ್ನು ಪಠಿಸಿದರು. ನಾಡಹೆಚ್ಚಳಕ್ಕೆ ಎಂಬ ದೃಶ್ಯಾವಳಿಯನ್ನು ಪ್ರದರ್ಶಿಸಲಾಯಿತು.

ವಂದನಾ ಸಭೆ

ಮೇಲ್ಕಂಡ ಶಿರೋನಾಮೆಯಲ್ಲಿ ಫಲ್ಗುನ ನಿನ್ನೆಯ ದಿವಸದ ಪತ್ರಿಕೆಯಲ್ಲಿ ಪ್ರಕಟವಾಗಿರುವ ಅಂಶವನ್ನು ಕುರಿತು ಮೈಸೂರು ಸ್ಟೇಟ್ ರೈಲ್ವೆ ಕಲಸಗಾರರ ಸಂಘದ ಮೈಸೂರು ಶಾಖೆಯ ಅಧ್ಯಕ್ಷರು ನಮಗೆ ಪತ್ರ ಬರೆದು ಸದರಿ ಸುದ್ದಿಯು ಸರಿಯಲ್ಲವೆಂದೂ ಈಗಿನ ಸೋಮವಾರ ನಡೆದ ವಂದನಾ ಸಭೆಯಲ್ಲಿ ತಾವು ಕಳೆದ ೨೦ನೇ ತಾರೀಕು ರೈಲ್ವೆ ವರ್ಕ್‌ಶಾಪಿಗೂ ರಜಾ ಕೊಡಬೇಕಾಗಿತ್ತೆಂದು ವಂದನಾದಿದೆ ದೆಂದೂ ಮತ್ತು ಶ್ರೀ ಎಂ ಶ್ರೀನಿವಾಸ್‌ರವರು ಭಾಷಣ ಮಾಡಲಿಲ್ಲವೆಂದೂ ತಿಳಿಸಿರುತ್ತಾರೆ

ಏಪ್ರಿಲ್ ೧ ರಿಂದ ಪಶುವಾರಿಗೆ ಉಚ್ಚಾಟನೆ

ಭಾರತದಲ್ಲಿರುವ ಪಶುವಾರನ್ನು ಹೊರಕ್ಕೆ ಯಸಿರಲು ಮುಂದಿನ ತಿಂಗಳು ೧ ನೇ ತಾ॥ ನಿಂದ ಭಾವಿಸಲಾಗುವುದೆಂದು ಭಾರತ ಸರ್ಕಾರವು ನಿರ್ಧರಿಸಿದೆ ಗಡಿನಾಡಿನ ಪಶುವಾರು ಪ್ರಾಂತ್ಯಗಳಲ್ಲಿ ಬಂಡುನೆಲೆಸಲು ಅವಕಾಶ ಕೊಡಕೂಡದೆಂದು ಕೇಂದ್ರ ಸರ್ಕಾರದವರು ಪ್ರಾಂತ್ಯಗಳಿಗೆ ಸೂಚನೆ ಕೊಟ್ಟಿರುವರು.

ರಾಜ್ಯಾಂಗ ಸಭೆಯ ಕಾರ್ಯಕ್ರಮ

ಬೆಂಗಳೂರು ೨೫

ನೈಸೂರು ರಾಜ್ಯಾಂಗ ಸಭೆಯು ಮುಂದಿನ ತಿಂಗಳು ೨ ನೇ ತಾ॥ ದಂತಿನ ರಿಸಿಸ್ಸಿ ಭವನದಲ್ಲಿ ಪ್ರಾರಂಭವಾಗುವುದು ಪ್ರಧಾನ ವಂತ್ರಿ ಶ್ರೀ ಕೆ ಸಿ ರೆಡ್ಡಿಯವರು ೊದಲು ಭಾಷಣ ಮಾಡಿ, ಅನಂತರ ಅ ದಿನದ ಅಧ್ಯಕ್ಷತೆಯನ್ನು ವಹಿಸಲು ಒಬ್ಬ ಸದಸ್ಯರ ಹೆಸರನ್ನು ಸೂಚಿಸುವರು. ಹಾಯಂ ಅಧ್ಯಕ್ಷರ ಚುನಾವಣೆಯು ನಡೆದ ನಂತರ ವಿವಿಧ ಸಮಿತಿಗಳ ರಚನೆಯು ಆ ಗುವುದು. ಸದಸ್ಯರುಗಳು ಇಳಿದು ಕೊ ಳ್ಳಲು ರಿಸಿಸ್ಸಿ ಭವನದಲ್ಲೇ ವ್ಯವಸ್ಥೆ ಮಾ ಡಲಾಗುವುದೆಂದು ಹೇಳಲಾಗಿದೆ

ಆರೋಗ್ಯ ಕೇಂದ್ರಗಳ ಸ್ಥಾಪನೆ

ಸಂಸ್ಥಾನದಲ್ಲಿ ೭೭ ಆರೋಗ್ಯ ಕೇಂದ್ರ ಗಳನ್ನು ಕೂಡಲೇ ಸ್ಥಾಪಿಸಲಾಗುವುದೆಂದು ಆರೋಗ್ಯ ಸಚಿವರಾದ ಹಿ॥ ಮಹಮದ್ ಪರೀಕ್ಷರವರು ಹಾಸನದಲ್ಲಿ ನಡೆದ ಜಿಲ್ಲಾ ಬೋರ್ಡಿನ ಸಾಮಾನ್ಯಕೂಟ ಸಭಾ ರಂಭದಲ್ಲಿ ತಿಳಿಸಿರುವರು. ಗ್ರಾಮಾಂತರ ಗಳ ಹಿತಕ್ಷಣಾ ಕೇಂದ್ರಗಳನ್ನು ಸ್ಥಾಪಿ ಸಲು ಸರ್ಕಾರದವರು ಆಲೋಚಿಸುತ್ತಿದ್ದಾ ರೆಂದೂ ಅವರು ತಿಳಿಸಿರುತ್ತಾರೆ

ಮದರಾಸಿನಲ್ಲಿ ಕೊಚ್ಚಿಯು ಏಕ್ಯವಾಗುವುದೇ ?

ಕೊಚ್ಚಿ ಸಂಸ್ಥಾನವನ್ನು ಮದರಾಸ್ ಸ್ಟ್ರಾಂತ್ಯದೊಗೆ ಸೇರಿಸಲು ಸಾಧ್ಯವೇ ಎಂಬ ಒಂದು ವಿಚಾರವನ್ನು ಧಾರವಡ ಗವರ್ನರ್ ಜನರಲ್‌ರವರ ಲಾರ್ಡ್ ಮೌಂಟ್ ಬ್ಯಾ ಟನ್‌ರವರು ಆಲ್ಲಿಗೆ ಮುಂದಿನ ತಿಂಗಳು ಭೇ ಟಿ ಇತ್ತಾಗ, ಪ್ರಧಾನಾಧಿಕಾರಿಯೊಂದಿಗೆ ಚರ್ಚ ಸುವರೆಂದು ಹೇಳಲಾಗಿದೆ.

ಒಂದೇ ಗುಂಡಿನಿಂದ ಇಬ್ಬರನ್ನು ಕೊಂದರು

ಮಂಗಳೂರಿನ ಜಟ್ಟಿಯ ಚುಟ್ಟಪಲ್ಲಿ ಗ್ರಾಮದ ನೇಲೆ ಹತ್ತಿರವಿರುವ ಮುಸ್ಲಿಮರ ಸಂಸ್ಥೆಯ ಪೂಜೆಯ ಧ್ವಜ ಪೂಜೆ, ಅನೇಕ ವರ್ಷಗಳನ್ನು ಸುಟ್ಟು ಕೊಳ್ಳೆ ಹೊಡೆದರೆಂದು ಹೇಳಲಾಗಿದೆ ಎದ್ದು ಗುಂಡಿನ ಚುರುಕನ್ನು ಕಡಿಮೆ ಮಾಡಲು, ಇಬ್ಬರನ್ನು ಬೆನ್ನಿಗೆ ಒಟ್ಟಿಗೆ ಕಟ್ಟಿ ಗುಂಡಿನಿಂದ ಹೊಡೆದು ಸಾಯಿಸಿದರೆಂದೂ, ಇದೇ ರೀತಿ ೩೦ ಜನಗಳನ್ನು ಕೊಂದು ಉರಿಯುವ ಮನೆಗಳಲ್ಲಿ ಶವಗಳನ್ನು ಎಸೆದರೆಂದೂ ಹೇಳಲಾಗಿದೆ.

ಜವಾಬ್ದಾರಿ ಸರ್ಕಾರದ ಬಗ್ಗೆ ಹೈದ್ರಾಬಾದಿನಲ್ಲಿ ಸಂಧಾನ

ಹೈದರಾಬಾದಿನಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವ ವಿಚಾರದಲ್ಲಿ ಮಾತುಕತೆ ನಡೆಸಲು ಬಂಧನಲ್ಲಿರುವ ಕಾಸ್ ಅಧ್ಯಕ್ಷರಾದ ಸ್ವಾಮಿ ರಮಾನಂದ ತೀರ್ಥರವರನ್ನು ಹೈದರಾಬಾದಿಗೆ ಕರೆತರಲು ಬೇಗಂಪೇಟೆಯ ಒಂದು ಬಂಗಲೆಯು ಇಡಲಾಗಿದೆಯೆಂದು ಹೇಳಲಾಗಿದೆ

ಧಾನಿ ಹಿ॥ ವಿಸಾರ್ ಲಯಾಕ್ ಅಲಿಯು ದು ಜವಾಬ್ದಾರಿ ಸರ್ಕಾರವನ್ನು ರಚಿಸು ಬಗ್ಗೆ ಶ್ರೀ ತೀರ್ಥರವರಿಗೆ ಪತ್ರವೊಂದನ್ನ ಬರೆದಿರುವುದಾಗಿ ಹೇಳಲಾಗಿದೆ ಸೂತ ಸರ್ಕಾರದಲ್ಲಿ ೧೪ ಜನ ಮಂತ್ರಿಗಳಿದ್ದು ದರ ಪೈಕಿ ೫ ಜನ ಕಾಂಗ್ರೆಸ್ ಪ್ರತಿನಿಧಿಗಳ ಮಜಲಿ ಸಂಸ್ಥೆಯವರಿಂದ ಸ್ವಾಮಿಜಿಯ ಸ್ಥಿನುರಿಂಗ ೨ ಮಂತ್ರಿ ನಿಮ್ಮ ಕರಗಡಿ ವರಿಂದ ೨ ಪ್ರತಿನಿಧಿಗಳಿರುವುದಾಗಿ ಪಸರ ಸಲಹೆ ಮಾಡಿದ್ದಾರೆಂದು ತಿಳಿಯುಬಂದಿದೆ

ಕಲ್ಕತ್ತೆ ಕಾರ್ಪೊರೇಷನ್ ಆಡಳಿತ ಸರ್ಕಾರಕ್ಕೆ

ಪಶ್ಚಿಮ ಬಂಗಾಳ ಸರ್ಕಾರದವರು ನ್ಯೆಯಿಂದ ಕಲ್ಕತ್ತ ಕಾರ್ಪೊರೇಷನ್ನಿನ ಆಡಳಿತವನ್ನು ತೆಗೆದುಕೊಂಡಿರುವರು ಇದು ಸ ವರ್ಷದ ಮಾರ್ಚ್ ೩೧ ರವರೆಗೆ ಅಡಳಿತ ಸರ್ಕಾರಕ್ಕೆ ಸೇರಿರುವುದು

ಬಟೇವಿಯಾದಲ್ಲಿ ಭೂಕಂಪ

ನೆನ್ನೆ ದಿವಸ ಬಟೇವಿಯಾಗೆ ಸಂ ನೈಲಿ ದೂರದಲ್ಲಿ ಒಂದು ಭಾರಿ ಭೂಕಂಪ ಆಯಿತೆಂದೂ ಇದರ ಪರಿಣಾಮ ಜಾಗಾ ಟೇವಿಯಾದಲ್ಲಿ ಹಲವು ಕಟ್ಟಡಗಳು ಅದು ರಿದುವೆಂದೂ ವರದಿಯಾಗಿದೆ

ತಿರುವಾಂಕೂರಿನಲ್ಲಿ ತಾತ್ಕಾಲಿಕ ಸರ್ಕಾರ

ಹೊಸದಾಗಿ ರಚಿಸಲಾಗಿರುವ ರಾಜ್ಯಾಂಗ ಸಭೆಯು ಒಮ್ಮತಾಭಿಪ್ರಾಯದಿಂದ ತಿರುವಾಂಕೂರಿನಲ್ಲಿ ತಾತ್ಕಾಲಿಕ ಸರ್ಕಾರವನ್ನು ನಿನ್ನೆಯಿಂದ ಸ್ಥಾಪಿಸಲು ಒಪ್ಪಿ ಅದಿನ ಮಹಾರಾಜರು ಒಂದು ಘೋಷಣೆಯನ್ನು ಹೊರಡಿಸಿರುವರು ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಪಟ್ಟಂ ತಾನು ಪಿಳ್ಳೆಯವರ ನಾಯಕತ್ವದಲ್ಲಿ ಹೊಸ ಮಂತ್ರಿ ಮಂಡಲವನ್ನು ರಚಿಸಲಾಗಿದೆ. ಇವರವರಿಗೆ ದಿವಾನರಾಗಿದ್ದ ಶ್ರೀ ನಾರಾಯಣ ಅಯ್ಯಾ ತಾರ್‌ರವರು ತಮ್ಮ ಸ್ಥಾನಕ್ಕೆ ರಾಜೀನಾಮೆಯಿತ್ತಿದ್ದಾರೆ. ತಿರುವಾಂಕೂರು ತ್ರಿವೇಣಿ ವಿಧಗಳಲ್ಲಿ ಮುಂದುವರಿಯುತ್ತಿರುವ ಇತರ ಸಂಸ್ಥಾನಗಳಿಗೆ ಮಾದರಿಯಾಗುವಂತೆ ರಾಜ್ಯಾಂಗವನ್ನು ರಚಿಸಲಿದ್ದಾರೆಂದು ಹೇಳಲಾಗಿದೆ. ಹಿಂದೆ ಹಾಗೂ ಸಂಸ್ಥಾನದಲ್ಲಿ ಮುಂದಾದವರು ಸಂಪೂರ್ಣವಾಗಿ ಕುಸಿದಿರುವರು

ಜಿನಿವಾದಲ್ಲಿ ನರಾಕರ್ಷಾಟರಿಗೆ ಸೋಲು

ಕಳೆದ ಮಂಗಳವಾರ ಜಿನಿವಾದಲ್ಲಿ ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಮಂಡಲಿಯ ಆರಂಭವಾದ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸ್ವಾತಂತ್ರ್ಯ ಪಡೆಯಲಿರುವ ಇಂಡೋನೇಷಿಯಾ ಪ್ರತಿನಿಧಿಯು ಆಡಿದ ಮಾತುಗಳು ಪೆಟ್ಟಾಗಿ ಡಚ್

ತುಮಕೂರಿನಲ್ಲೂ ಕಾಂಗ್ರೆಸ್ಸಿಗೆ ಸಂಪೂರ್ಣ ವಿಜಯ

ರಾಜ್ಯಾಂಗ ಸಭೆಗೆ ತುಮಕೂರು ಜಿಲ್ಲೆಯಿಂದ ಕಾಂಗ್ರೆಸ್ ಉಮೇದುವಾರರಾದ ಶ್ರೀಗಳು ಸಿ ಆರ್ ಅರಸ್, ಕೆ ಹೆಂಚಾಂಜ್ಜ, ಎ ಹುಚ್ಚಮಾಸ್ತಿಗೌಡ, ಮಾಲಿ ಪುರಿಯಪ್ಪ, ಬಿ ಸಿ ನಂಜುಂಡಯ್ಯ, ಎಂ ವಿ ರಾಮಾಂಜಿನಪ್ಪ, ಟಿ ಸುಬ್ರಹ್ಮಣ್ಯಂ ಮತ್ತು ಸ್ವತಂತ್ರರಾದ ಶ್ರೀ ಎ ಚನ್ನಪ್ಪನವರು ಚುನಾಯಿತರಾಗಿದ್ದಾರೆ. ಶ್ರೀ ಟಿ ಎಸ್ ಮಲ್ಲಪ್ಪನವರು ಪರಾಜಿತರಾದರು.

೭ ದಿನಗಳ ಸೈಕಲ್ ಪಂದ್ಯ

ಇಂಗ್ಲೆಂಡಿನಲ್ಲಿ ಬರುವ ಆಗಸ್ಟ್ ತಿಂಗಳು ೨೩ನೇ ತಾರೀಖಿಂದ ಸೈಕಲ್ ಪಂದ್ಯಗಳು ಆರಂಭವಾಗಲಿವೆ. ಅಲ್ಲಿ ಸತತವಾಗಿ ೭ ದಿನಗಳು ಸೈಕಲ್ ಪ್ರಯಾಣ ಮಾಡುವ ಪಂದ್ಯದಲ್ಲಿ ಫ್ರೆಂಚ್ ಮತ್ತು ಸ್ವಿಸ್ ಸೈಕಲ್ ಸವಾರರು ಭಾಗವಹಿಸುವರೆಂದೂ ಇದು ಅತ್ಯಂತ ಭಾರಿಯ ಸೈಕಲ್ ಪಂದ್ಯವೆಂದೂ ಹೇಳಲಾಗಿದೆ

ಭದ್ರಾಚಲ ದೇವಸ್ಥಾನಕ್ಕೆ ದ್ರವ್ಯ ಸಹಾಯವಿಲ್ಲ

ಫಿಜಾಂ ಸರ್ಕಾರದವರು ಭದ್ರಾಚಲ ದೇವಸ್ಥಾನದ ಮೇಲ್ವಿಚಾರಣಾಧಿಕಾರವನ್ನು ಸರ್ಕಾರ್ ಮಾಡಿ, ಅದಕ್ಕೆ ಕೊಡುತ್ತಿದ್ದ ದ್ರವ್ಯ ಸಹಾಯವನ್ನು ಮುಕ್ತಿ ಬಿಟ್ಟಿರುವರೆಂದು ತಿಳಿದುಬಂದಿದೆ.

ಸಿನಿಮಾ

ಚಲನ ಚಿತ್ರ ಮಂದಿರದೊಳಿಹುದಾಗ ದೀಕಾದರೆ ನಮ್ಮಲ್ಲಿ ಪಾಲಿ ಜಾಗಗಳವೆ. ಬಂಗ್ಲೆಗಳನ್ನಾದರೂ ಕಟ್ಟಬಹುದು ಅದೃಷ್ಟವಂತರಿಗೆ ಮಾತ್ರ ಸಾಧ್ಯ

— ಹ ರಾ ಜು —

ಆಗುವ ತಾರೀಖನ್ನು ಗಮನಿಸಿ
ಎಲ್ಲಿ ? ಏನು ?? ಎಷ್ಟು ???
ಸಿಟಿ ಅಕ್ಷನಿಯರಿಂಗ್ ಕೋ,
ಜಗನ್ಮೋಹನ ಬಂಗ್ಲೆ ಬಳಿ, ಮೈಸೂರು.

ರಾಜಕಮಲ್, ಮೈಸೂರು

ತಾ॥ 20-3-48 ರಿಂದ :: ಅಮೋಘ ಪ್ರಾರಂಭ

ಪ್ರತಿ ದಿನ ಮೂರು ಆಟಗಳು ೩-೩೦; ೬-೩೦ ಮತ್ತು ೯-೩೦ ಕ್ಕೆ

ಚಂದ್ರಮೋಹನ್, ಜಯಶ್ರೀ ಪಾತ್ರವಹಿಸಿರುವ, ರಾಜಕಮಲ್‌ರವರ

★ ಶಾಕುಂತಲ ★

(ಹಿಂದಿ)

Morning Shows from 26-3-48 for 4 days
Daily at 10-30 a. m.

Stage Door Canteen

With :—PAULMUNI, COUNT BASIK, BENNYGOODMAN

ನೆನಪಿರಲಿ ! ಯುಗಾದಿ ಹಬ್ಬ ಬಂತು ನೆನಪಿರಲಿ !

Truthful READY MADE CLOTHES

ನವೀನ ಮಾದರಿಗಳಲ್ಲಿ ಮಿಲ್ ಬಟ್ಟೆಯಿಂದ ತಯಾರಿಸಲ್ಪಟ್ಟ

— ರೆಡಿ ಮೇಡ್ ಉಡುಪುಗಳು —

ಈಗ ತಾನೆ ಬಂದಿವೆ. ಈ ದಿನವೇ ಭೇಟಿ ಕೊಡಿ.

ಸ್ವಾಸ್ತಿಕ್ ಸ್ಟೋರ್ಸ್
೨೧, ಡಾಸ ಪ್ರಕಾಶ್ ಬಿಲ್ಡಿಂಗ್ಸ್,
(ಪೂರ್ತಿ ಕೆಳಿ)
ಬೆಂಗಳೂರು.

ಬ್ರಾಂಚ್‌ಗಳು:—
ದೊಡ್ಡಪೇಟೆ, ಚಿಕ್ಕಪೇಟೆ, ಮಂಡ್ಯ, ಚನ್ನಪಟ್ಟಣ, ನಂಜನಗೂಡು, ಟಿ. ನರಸೀಪುರ

೨೬-೩-೪೮ ರಿಂದ :: ಅಮೋಘ ಪ್ರಾರಂಭ

ವಿನೂತನ ಮೂರು ಆಟಗಳು

ಪ್ರಭಾ ಪಿಕ್ಚರ್ ಹೌಸ್

ವಾತಿನೈಕ್ಯನಾದ ಎಸ್.ಕೆ.ಎಲ್. ಪ್ರಸಾದ್ ಬಿ.ಎಲ್. ಬಿದ್ದಪ್ಪನವರ ಓದಿ ಕಳ್ಳಾಪುರಿನಿಯ ಸೃಷ್ಟಿಯ ವಿಶಿಷ್ಟ ಚಿತ್ರ

ನೇರ ಪ್ರವೇಶ

(ಕನ್ನಡ)

ಭೂಮಿಕೆಯಲ್ಲಿ— ರಾಗಿಣಿ, ಉಲ್ಲಾಸ್, ಯೂಕೂಬ್

ಸುದ್ದಿಗಳನ್ನು ಬರೆದಿಡುವ ಟೆಲಿಫೋನ್

ಟೆಲಿಫೋನ್ ಮೂಲಕವು ಶಬ್ದದಿಂದಾಗಿ ಯಾರಾದರೂ ಫೋನ್ ಮಾಡಿ ಯಾವ ಸುದ್ದಿಯನ್ನು ಹೇಳಿದರೆ ಅದನ್ನು ಬರೆದಿಡುವಂತಹ ನೂತನ ಮಾದರಿಯ ಟೆಲಿಫೋನ್‌ಗಳನ್ನು ಇಂಗ್ಲೆಂಡಿನ ಕಂಪೆನಿಯೊಂದು ತಯಾರಿಸುತ್ತಿದೆ.

ಪ್ರತಿ ದಿನ ೩ ಆಟಗಳು

24-3-48 ರಿಂದ

ಪಹಿಲಿ ನಜರ್

ಪಾತ್ರ :— ನೋತಿಲಾಲ್, ವೀಣಾ, ಮುನಾವರ್ ಸುಲ್ತಾನ

ಬಲಂಪಿಯಾ ಟಾಕೀಸ್

ಅಪೇರಾ ಟಾಕೀಸ್

26-3-48 ರಿಂದ

ಪ್ರತಿ ದಿನ 3 ಆಟಗಳು

Drums of Fumanchu

(ಡ್ರಮ್ಸ್ ಆಫ್ ಫ್ಯೂಮಾರ್ಚು)

(Full serial)

With:-Henry Brandon, William Royle, Robert Kellard

(A Republic Serial)

Edited printed and published by A. R. Nagarajan at the Sadhvi Press D. Subbaiah Road Mysore

ಮನೆಬಾಡಿಗೆಗೆ ಇದೆ

ರಾಮಾನುಜಾ ರಸ್ತೆಯಲ್ಲಿರುವ ೬೫ ನಂ ಮಾಡಲ್ ಹೌಸ್ ಬಾಡಿಗೆಗೆ ಮೊದಲಯತ್ತದೆ ಈ ಕೆಳಗೆ ಕಂಡ ವಿಳಾಸಕ್ಕೆ ವಿಚಾರಿಸಿರಿ.

C/o
ಸಾಧ್ವಿ ಆಫೀಸ್, ಮೈಸೂರು.

MYSORE CITY MUNICIPALITY

NOTIFICATION

Sealed tenders will be received up to 4 p. m. on 1-4-48 by the Municipal Engineer, for providing 7½ H P. Electric Pump for the stop well near dry Cattle Shed in Municipal Farm.

Each tender must be accompanied with a challan for having remitted Rs 60/- in the Municipal Treasury as earnest money. For full particulars please see the Notification on the Office Notice Board.

(Sd) R. SRINIVASA RAO,
Municipal Engineer I/c.

ಇದು ಗಿಜಿಗಾ?

ಪ್ರಭುದೇವಾ ಟಾಕೀಸಿನಲ್ಲಿ

21-3-48 ರಿಂದ ಅಮೋಘ ಪ್ರಾರಂ

ಪ್ರತಿ ದಿನ 3 ಆಟಗಳು

ಇದು ನಿಜವಾ?

ಈ ಚಿತ್ರದಲ್ಲಿ ಬರುವ ಲಂಡನ್ ನಗರದ ಮನೋಹರ ದೃಶ್ಯಗಳನ್ನೆಲ್ಲವೂ ಪ್ರತ್ಯೇಕವಾಗಿ ತೆಗೆದಿರುವುದು ಪ್ರೇಕ್ಷಕರಿಗೆ ಆನಂದವನ್ನುಂಟುಮಾಡುವುದು.

ಫೋನ್ನಂ. 792 ॥ ವಂದೇಮಾತರಂ ॥ ಇಂದಿನ ಪತ್ರಿಕೆ 3 ಕಾಸು



ಸಂಪುಟ ೬] ಶುಕ್ರವಾರ ೨೬-೩-೪೬ [ಸಂಚಿಕೆ ೧೯೬

ಹೈದ್ರಾಬಾದಿನಲ್ಲಿ ೨೦೦೦ ಸ್ತ್ರೀಯರ ಉಪವಾಸ

ಡಾ|| ಪಾರ್ಥನಾರಾಯಣ ಪಂಡಿತರು ಅಮೆರಿಕಕ್ಕೆ

ಮೈಸೂರು ೨೬

ವಾಷಿಂಗ್‌ಟನ್ನಿನಲ್ಲಿ ಮುಂದಿನ ಮೇ ತಿಂಗಳು ನಡೆಯುವ ಏಂಕರ ರಾಷ್ಟ್ರೀಯ ಮಲೇರಿಯಾ ನಿವಾರಣಾ ಸಮ್ಮೇಳನಕ್ಕೆ ಮೈಸೂರಿನ ಆಧಿಪಾ ಆಗಿ ಸಂಶೋಧನಾಲಯದ ಡಾ||ವಿಠಾರ್ಥನಾರಾಯಣ ಪಂಡಿತರಿಗೆ ಆಹ್ವಾನ ಬಂದಿದೆಯೆಂದು ತಿಳಿದುಬಂದಿದೆ. ಆ ಸಮ್ಮೇಳನವು ೧೦ ವರ್ಷಕ್ಕೆ ಒಂದಾನ ತಿ ಸೇರುವುದು ಈ ಬಾರಿ ಆದು ಮೇ ೧೦ ನೇ ತಾ|| ನಿಂದ ೨೦ ನೇ ತಾ|| ವರೆಗೆ ನಡೆಯುವುದು ೬೦ ರಾಷ್ಟ್ರಗಳು ಭಾಗ ವಹಿಸುವುವು. ವೈಸೂರು ಪ್ರತಿನಿಧಿಗಳು ಆ ನೆ ರಿಕಕ್ಕೆ ಹೋಗಲು ಕಕ್ಕೆ ಸೌಲಭ್ಯವನ್ನು ಒದಗಿಸಬೇಕೆಂದು ವೈಸೂರು ಸರ್ಕಾರದ ನ್ನು ವ್ಯಕ್ತಿಸಲಾಗಿದೆಯೆಂದು ಗೊತ್ತಾಗಿದೆ.

ಫೋಟೋಗ್ರಾಫಿಕ್ ಪ್ರದರ್ಶನ

ಪ್ರೆಸ್ಟಿಡೆನ್ಸಿ ಕಾಲೇಜು ಯೂನಿಯನ್ನಿನಲ್ಲಿ ವಿದ್ಯಾರ್ಥಿಗಳು ಏರ್ಪಡಿಸಿರುವ ಫೋಟೋಗ್ರಫಿ ಪ್ರದರ್ಶನವನ್ನು ಇಂದೇ ಧಾನಾವಾದನವರೆಗೆ ವಂಜುವರೆಸಲಾಗಿದೆ. ಅಲ್ಲಿಯವರೆಗೂ ಪ್ರೇಕ್ಷಕರಿಗೆ ವರ್ಜಿಸಿರುವ ಪಾರಿತೋಷಣಾ ಪ್ರಧೇಯವನ್ನೂ ಮುಂದುವರಿಸಲಾಗಿದೆ

೫೦ ಸಾವಿರ ಹಿಂದುಗಳು ಹೈದರಾಬಾದನ್ನು ಬಿಟ್ಟಿರು

ಹೈದರಾಬಾದಿನ ಇತ್ತೀಚಿನ ಮುಸ್ಲಿಂ ವಿರೋಧ ಸಂಸ್ಥೆಯವರು ನಡೆಸುತ್ತಿರುವ ದಾಂಧಲೆಯನ್ನು ಕಡೆಯಲಾರದೆ, ೫೦ ಸಾವಿರ ಹಿಂದೂಗಳು ಕಳೆದ ಒಂದು ವಾರದಲ್ಲೇ ಸಂಸ್ಥಾನವನ್ನು ಬಿಟ್ಟು ಭಾರತ ಡೊಮಿನಿಯನ್ನಿಗೆ ಬಂದಿರುವರೆಂದು ಹೇಳಲಾಗಿದೆ

ಹೈದರಾಬಾದ್ ಮಹಿಳೆಯರ ೨೪ ಗಂಟೆಗಳ ಉಪವಾಸ

ಹೈದರಾಬಾದಿನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಕೈಕಸಗಳ ಆದೆಗೆ ಸಂಸ್ಥಾನದ ಮತ್ತು ನೊರಿನ ಜನರ ಗಮನವನ್ನು ಸೆಳೆದು ಅಧಿಕಾರಿಗಳ ಹೃದಯ ಪರಿವರ್ತನೆಯನ್ನು ಉಂಟು.ಮಾಡುವ ಉದ್ದಿಶ್ಯದಿಂದ ಅಲ್ಲಿನ ಎಂದು ಸಾವಿರ ಜನ ಮಹಿಳೆಯರು ಇದೇ ೨೮ ನೇ ತಾ|| ಭಾನುವಾರ ೨೪ ಗಂಟೆಗಳ ಕಾಲ ಉಪವಾಸವನ್ನು ಕೈಗೊಳ್ಳಲು ನಿರ್ಧರಿಸಿರುವರೆಂದು ಗೊತ್ತಾಗಿದೆ

ಈಸ್ಟಿಡಿ ಜಾತ್ರೆಯಲ್ಲಿ ಅಕ್ರಮ ಸುಂಕ ವಸೂಲಿ

ಕೃಷ್ಣರಾಜನಗರ ತಾ|| ಕಸ್ತವಿಯಲ್ಲಿ ಬಹು ದೊಡ್ಡ ಜಾತ್ರೆ ನಡೆಯುತ್ತಿದೆ ಇದು ಸರ್ಕಾರದಿಂದ ಆರೋಗ್ಯ ಶಾಸನದ ಕಲಂ ೧೧೬ ಪ್ರಕಾರ ಪ್ರಕಟಿಸಲಾಗಿದೆ ಆದ ಕಾರಣ ಸಮ್ಮಾರದ ವಿಶೇಷಾಧಿಕಾರಿಯು ಅಧಿಕಾರ ಪಡೆದ ದೆ ಅಲ್ಲಿ ಸುಂಕವಸೂಲುಮಾಡುವಂತಿಲ್ಲ ಆದಾಗ್ಯೂ ಈ ಜಾತ್ರೆಯಲ್ಲಿ ಕೈದಾರು ಭೇದಕವಾದ ಅನ್ಯಾಯಗಳು ನಡೆದಿರುವುದಾಗಿ ತಿಳಿದುಬಂದಿದೆ. ನೂರಾರು ಮೈಲಿಯಿಂದ ಬರುವ ವಾಹನಿಗರು ಯಾತ್ರಾರ್ಥಿಗಳ ಅಜ್ಞಾನ ಮತ್ತು ಮುಗ್ಧ ಮನೋಭಾವಗಳನ್ನು ಸ್ವಾರ್ಥಕ್ಕಾಗಿ ಶೋಷಣೆ ಮಾಡಲಾಗುತ್ತಿದೆ. ಸುಂಕ ವಸೂಲಿ ನೈಜವಾ ಈ ರೀತಿ ಇದೆ :–೧ ಚಿಂಬು ಯಿಲಿಗೆ ೨ ಆಣೆ, ೧ ಪೊಣಿ ಸೌದೆಗೆ ೨ ಆಣೆ, ಒಂದು ಗಾಡಿ ಸೌದೆಗೆ ೨ ರೂ, ೧ ಗಾಡಿ ಪಡಿಗೆ ೬ ರೂ, ೧ ತಲೆ ಕತ್ತೆಕ್ಕೆ ೫ ಆ, ಆಡಿಗೆ ಮಾಡಲು ಹಾಲುವ ಒಲೆ ೧ ಕ್ಕೆ ೪ ಆ, ಪಣ್ಣು ಕಾಯಿ ಹಟ್ಟಿ ೧ ಕ್ಕೆ ೧೦ ಆ, ಅಂಗಡಿ ಇಡುವ ನೆಲ ಗಜ ೧ ಕ್ಕೆ ೧೨ ರೂ ಈ ಅನಾನುಷ ರೀತಿಯ ಸುಂಕ ವಸೂಲಿಯು ಸರ್ಕಾರದ ಅನುಮತಿಯಿಲ್ಲದೆ ಕೇವಲ ವ್ಯಕ್ತಿ ಪ್ರಭಾವದಿಂದಲೂ ದಬ್ಬಾಳಿಕೆಯಿಂದಲೂ ನಡೆಯುತ್ತಿರುವುದು ಪ್ರಜಾ ಸರ್ಕಾರಕ್ಕೆ ಭೂಷಣವಲ್ಲ. ಈ ಬೋಗಿ ಅಧ್ಯಕ್ಷತೆಯಲ್ಲಿ ನಡೆಯಿಸಿದ ನಡವಳಿಕೆ ಪರಿಣಾಮವಾಗಿ ಜಿಲ್ಲಾಧಿಕಾರಿಗಳು ಈ ರೀತಿ ಸುಂಕ ವಸೂಲಿ ಕಾನೂನುಬಾಹಿರವೆಂದು ತಿಳಿಸಿ ಅಧ್ಯಕ್ಷರಿಗೆ ವರ್ತನೆ ದೊರಕಲಿಸಿದ್ದಾರೆಂತೆ, ಕಾರಣ ಸುಮಾರು ಅನ್ಯಾಯವನ್ನು ತಡೆಗಟ್ಟಲು ಜರೂರು ಕಾರ್ಯಕ್ರಮವನ್ನು ಸರ್ಕಾರವು ತೆಗೆದುಕೊಳ್ಳಲೆಂದು ಆಶಿಸಲಾಗಿದೆ

ರಾಜ್ಯಾಂಗ ಸಭೆಯ ಉಪ ಕಾರ್ಯದರ್ಶಿ

ಸ್ವಂ.ಸು.ಪ್ರೇ.] ಬೆಂಗಳೂರು ೨೬

ಸ್ವಾಯತ್ತವಿಧಾಯಕ ಸಭೆಯ ಬೆಂಗಳೂರು ದರ್ಶಿಗಳಾದ ಶ್ರೀ ಬಿ ಎಸ್ ನೆಂಟೋನಿ ಅ ನಾರಾಯಣನ್ನು ರಾಜ್ಯಾಂಗ ಸಭೆಯ ಉಪ ಕಾರ್ಯದರ್ಶಿಗಳಾಗಿ ನೇಮಿಸಲಾಗಿದೆ ಆದರೆ ಸ್ಥಾನಕ್ಕೆ ಶ್ರೀ ಎಂ ಕೆ ವಪಿಸಾರಿಯವರನ್ನು ನೇಮಿಸಲಾಗಿದೆ

ಪ್ರಕಾಶಂ ಪೆನಲು ಮತ್ತೆ ಮದರಾಸು ಪ್ರಧಾನಿಯೇ ?

ಮದರಾಸು ಶಾಸನ ಸಭೆಯು ಕಾಂಗ್ರೆಸ್ ಪಕ್ಷದ ನಾಯಕರ ಚುನಾವಣೆ ಇಂದು ನಡೆಯುವುದಾಗಿದೆ. ಶ್ರೀ ಟಿ ಪ್ರಕಾಶಂರವರೂ ಪ್ರಧಾನಿ ಶ್ರೀ ಓಮಂದೂರು ರಾಮಸ್ವಾಮಿ ರೆಡ್ಡಿಯವರೂ ತೀವ್ರ ಸ್ಪರ್ಧೆ ನಡೆಯುತ್ತಿದೆ ಶ್ರೀ ಟಿ ಪ್ರಕಾಶಂರವರು ಜಯಶೀಲರಾಗುವ ಸೂಚನೆಗಳು ಬಂದು ಬರುತ್ತಿವೆ

ಪೌರಸಭಾ ಮಹಿಳಾ ಸದಸ್ಯರಿಗೆ ತರಬೇತಿ

ಬೊಂಬಾಯಿನ ಪೌರಸಭೆಯು ಪದಸ್ಯರೂ ಮತ್ತು ಸಾಮಾಜಿಕವಾಗಿ ಆಸಕ್ತರೂ ಆದ ಡಾ|| ಶ್ರೀಮತಿ ಎ ವಲಿಪಾಯಿ ಅವರ ಕಾರ್ಯದರ್ಶಿತ್ವದಲ್ಲಿ ಪೌರಸಭೆಯ ಮಹಿಳಾ ಸದಸ್ಯರಿಗೆ ತರಬೇತಿಗಳನ್ನು ಏರ್ಪಾಡಿಗೆ ಮಾಡಲು ನಿರ್ಧರಿಸಿದೆ. ಈ ಸಂಸ್ಥೆಯ ಕಾರ್ಯದರ್ಶಿಗಳು ಪೌರಸಭೆಗಳ ಮಹಿಳಾ ಸದಸ್ಯರಿಗೆ ಪತ್ರ (ಲೆಂಚ) ಮುಖಾಂತರ ಶ್ರೀಮತಿ ವಲಿಪಾಯಿಯವರ ಆಲೋಚನೆಯ ಬೇಕೆಂದು ಅಭಿಪ್ರಾಯ ಕೇಳಿದ್ದಾರೆ. ಈ ಸಂಸ್ಥೆಯ ಕಾರ್ಯದರ್ಶಿಗಳು ಪೌರಸಭೆಗಳ ಮಹಿಳಾ ಸದಸ್ಯರಿಗೆ ತರಬೇತಿಯನ್ನು ವಿಧಿಸಲಾಗಿದೆ.

ಮೌಂಟ್‌ಬ್ಯಾಟನ್ನಿನ್ನರು ಜಮೆರಿಕವೆಲ್ಲಿ ರಾಯಭಾರಿ

ಭಾರತದ ಗವರ್ನರ್ ಜನರಲ್ ಆರ್ಡ್ ಮೌಂಟ್ ಬ್ಯಾಟನ್ನರ ಕಿರಿಯ ಮಗಳು ಯಿಂದ ಸ್ವಿತ್ಸರ್ಲಂಡಿನ ಮೇಲೆ ಅಮೆರಿಕದ ಬ್ರಿಟನ್ನಿನ ರಾಯಭಾರಿಯಾಗಿ ನೇಮಿಸಲ್ಪಡಬಹುದು ಹೇಳಲಾಗಿದೆ.

ಟರ್ಕಿಯಲ್ಲಿ ಭೂಕಂಪ ಎ. ಆರ್. ಪಿ. ಸೈನ್ಯಸ್ಥಿ

ಟರ್ಕಿಯ ಇರ್ಜಿಂಜಲ್ ಮತ್ತು ಬಾಬರ್ದಾ ಪ್ರದೇಶಗಳಲ್ಲಿ ಇಂದ್ರಾಣಿಯ ಎ ಆರ್ ಪಿ ವೆಂಡಲಾದ ಸೈನ್ಯಕ್ಕೆಗಳನ್ನು ಕೂಡಲೇ ಬಾಗಿ ತೊಲಗಲು ವುದು.

ಕಾತೇಜು ಹಾಸ್ಟಲಿನ ದಿಗ್ಬಂಧನೆ

ಮಹಾರಾಜಾ ಕಾಲೇಜ್ ವಿದ್ಯಾರ್ಥಿನಿ ನಾಚಕಸೆಯು ನಿನ್ನೆ ಸಂಜೆ ಪೌರಾಭ್ಯಕ್ಷರಾದ ಶ್ರೀ ಪಿ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿ.ಯು. ಸಾಯಂಸಾ ಹೆನ್ ಶ್ರೀ ಟಿಸ್ವಸ್ವಾಮಿಯವರು ಸ್ವಾಗತ ಭಾಷಣ ಮಾಡಿದ ನಂತರ, ವಿದ್ಯಾರ್ಥಿಗಳಿಗೆ ಬಹುಮಾನವನ್ನು ಒಪ್ಪಿಸಿದ ಪ್ರಸಿದ್ಧ ಬಹುಮಾನಗಳನ್ನು ವಿತರಿಸಿದರು. ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಸಾರ್ವಜನಿಕ ಗ್ರಂಥಾಲಯವನ್ನು ಏರ್ಪಡಿಸಲು ಸಾಧ್ಯವಿದೆಯೆಂದು ಅಧ್ಯಕ್ಷರು ಹೇಳಿದರು. ಸಾಯಂಕಾಲ ೪ ಗಂಟೆಗೆ ಪ್ರದರ್ಶನ ನಡೆಯಿತು.

ನಿನ್ನೆ ರಾತ್ರಿ ಇದೇ ಸಂಬಂಧವಾಗಿ ಕೆಲವು ಜನ ಕಾಲೇಜಿನ ಮೇಲೆ ಕಲ್ಲೆಸೆದರೆಂದೂ, ಪರಿಣಾಮವಾಗಿ ಕೆಲವು ಕಿಟಕಿಯ ಗಾಜುಗಳು ಒಡೆದುಹೋದವೆಂದೂ ಗೊತ್ತಾಗಿದೆ. ಇಂದು ಬೆಳಿಗ್ಗೆ ಸಹ ಕೆಲವು ಜನ ಕಾಲೇಜಿನ ಮೇಲೆ ಕಲ್ಲೆಸೆದರೆಂದು ಹೇಳಲಾಗಿದೆ. ಈ ಸಂಬಂಧವಾಗಿ ಪೊಲೀಸರು ಕೆಲವರನ್ನು ಬಂಧಿಸಿದ್ದಾರೆಂದು ಗೊತ್ತಾಗಿದೆ.

ಅಲ್ಪ ಸಂಖ್ಯಾತರು ತಮ್ಮ ಮನೆಗಳನ್ನು ಬಿಡಕೂಡದು

ಭಾರತ ಮತ್ತು ಪಾಕಿಸ್ತಾನದ ಮುಖ್ಯ ಮಂತ್ರಿಗಳಾದ ಪಂಡಿತ ನೆಹ್ರೂ ಮತ್ತು ಹಾ ಲಿಯಾಖತ್ ಅಲಿ ಖಾ ರವರು ಅಲ್ಪ ಸಂಖ್ಯಾತರ ಹಿತ ರಕ್ಷಣೆಯ ಬಗ್ಗೆ ಒಂದು ಆಂಟಿ ಹೇಳಿಕೆಯನ್ನಿತ್ತು ಅಲ್ಪ ಸಂಖ್ಯಾತರು ತಮ್ಮ ಮನೆಗಳಲ್ಲೇ ಇರಬೇಕೆಂದೂ ಅವರ ರಕ್ಷಣೆಗಾಗಿ ಸರ್ಕಾರಗಳು ಎಲ್ಲ ಪ್ರಯತ್ನಗಳನ್ನು ಮಾಡುವುದೆಂದೂ ಇದರಿಂದ ಎಲ್ಲರಿಗೂ ಕ್ಷೇಮವೆಂದೂ ಸೂಚಿಸಿರುತ್ತಾರೆ ಆದರೆ ಕಾಮಾಗಿಯೇ ಒಂದು ಡೊಮಿನಿಯನ್ ಸ್ಥಾನದ ಮಟ್ಟಿಗೆ ಅಂತಹ ಹೇಳಿಕೆಯನ್ನು ನಂಬುವವರಿಗೆ ಸರ್ಕಾರವು ಯಾವ ತೊಂದರೆಯನ್ನೂ ಉಂಟುಮಾಡುವುದಿಲ್ಲವೆಂದೂ ಅವರು ತಿಳಿಸಿರುತ್ತಾರೆ.

TYPEWRITERS FOR SALE
One Remington 12
& One Oliver
Contact- The Mysore Cotton Company, Mysore.
Next to MYSORE POWER & LIGHT OFFICE.

ಯುದ್ಧ ನಡೆಯುವ ಸಂಭವವಿಲ್ಲ

ವಿಶ್ವದ ಜನಸ್ತೋಮಕ್ಕೂ ಯುದ್ಧ ಬೇಕಾಗಿಲ್ಲವೆಂದು ಇತ್ತೀಚೆಗೆ ಚೈನಾ ಯುದ್ಧ ನಡೆಯುವ ಸಂಭವವಿಲ್ಲವೆಂದು ಲಂಡನ್ನಿನಲ್ಲಿ ರಷ್ಯಾ ರಾಯಭಾರಿ ಮಿಖಾಯಲೊವರು ತಿಳಿಸಿರುತ್ತಾರೆ

ಅಪೇರಾ ಟಾಕೀಸ್
26-3-48 ರಿಂದ
ಪ್ರತಿ ದಿನ 3 ಆಟಗಳು
Drums of-
-Fumanchu
(ಡ್ರಮ್ಸ್ ಆಫ್ ಫ್ಯುಮಾಂಚು)
(Full serial)
With-Henry Brandon, William Royle, Robert Kellard
(A Republic Serial)

Edited printed and published by A. R. Narasiah at the Sadhvi Press D Subbaiah Road Mysore

UNIVERSITY OF MYSORE
NOTIFICATION
Dated 17th March 1948
No A 3. 663/47-48

1. Applications are invited from duly qualified candidates for the post of Professor of Education, in the University of Mysore The salary attached to the post is Rs 400-25-700. The post is permanent The selected candidate will be started on the minimum salary of Rs 400 and will be on probation for two years A higher starting salary according to qualifications will also be considered. The minimum academic qualification required is a good Master's (or corresponding) Degree in Education Preference will be given to candidates who have had experience in teaching and organisation and have done original research work.

2. The post is pensionable. It is subject to the Mysore Service Regulations as regards salary, leave, pension, etc, and subject also to the rules of the University as regards discipline. The person selected will be required to join duty immediately after the receipt of order of appointment

3. Applications should contain the following informations:—

Age, caste or community, qualifications (including examinations passed and name of University, date of passing and class) present position, salary and previous service, if any, as well as works published and other particulars, if any

Copies of testimonials (which will not be returned) should accompany the application Six sets of the applications and of testimonials are required. Applicants already in service must forward their applications through their official superiors.

4 If required, candidates should be prepared to be interviewed at their own expense.

5. Applications should be addressed to the Registrar, University of Mysore, Mysore and sent so as to reach him on or before 1st May 1948

D S GORDON, Registrar.

ಪ್ರೌಢಶಾಲಾ ಉಪಾಧ್ಯಾಯರುಗಳ ವಾರ್ಷಿಕ ಸಭೆ

ಮೈಸೂರು ಜಿಲ್ಲೆಯ ಪ್ರೌಢಶಾಲಾ ಉಪಾಧ್ಯಾಯರ ಸಂಘದ ವಾರ್ಷಿಕೋತ್ಸವವು ಮುಂದಿನ ತಿಂಗಳು ೬ ನೇ ತಾರೀಖು ಸಂಜೆ ೫ ಗಂಟೆಗೆ ನಜರ್‌ಬಾದ್ ಪ್ರೌಢಶಾಲೆಯಲ್ಲಿ ಪ್ರೌಢಶಾಲಾ ಶಿಕ್ಷಣ ಸಮಿತಿಯ ಮಾಧ್ಯಮಿಕ ವಿಭಾಗದ ಶ್ರೀ ಎಸ್ ದೇವೇಗೌಡರ ಅಧ್ಯಕ್ಷತೆಯಲ್ಲಿ ನಡೆಯುವುದು

ಶ್ರೀ ಗಣೇಶಾ ಟಾಕೀಸ್
Morning Shows
For 4 Days
From 26-3-48
at 10-45 a.m.
TEXAS TO TOKYO

ಪ್ರಭುದೇವಾ ಟಾಕೀಸಿನಲ್ಲಿ
21-3-48 ರಿಂದ :: ಅಮೋಘ ಪ್ರಾರಂ
ಪ್ರತಿ ದಿನ 3 ಆಟಗಳು
ಇದು ನಿಜವಾ?
ತಮಿಳು ಸಾಮಾಜಿಕ ಚಿತ್ರಗಳಲ್ಲಿ ಇತಿಹಾಸ ಬುನಾದಿ ಚಿತ್ರವೆಂಬ ರಾಷ್ಟ್ರಾದ್ಯಂತ ಪ್ರಶಂಸೆಗಳಿಸಿರುವುದು ಇದೇ ನೋಡಲು.
—:ತಡಾ ಸಾರಾಂಶ:—
ಮಾಧು ಮತ್ತು ಗೋಪಾಲ್ ಅವಳಿ ಜವಳಿ ಮಕ್ಕಳು. ಮಾಧು ಇನ್ನೂ ಗೆ ವಿದ್ಯಾ ವ್ಯಾಸಂಗ ಗಳಿಸಿ ಇಂಗ್ಲೀಷ್ ಸಂಗೀತದಲ್ಲಿ ಪ್ರವೀಣನಾಗುತ್ತಾನೆ. ಗೋಪಾಲ್ ಇಂಡಿಯಾಗೆ ಬಂದು ಸಂಗೀತದಲ್ಲೇ ಪ್ರವೀಣನಾಗುತ್ತಾನೆ. ಗ್ಲೆಂಡಿನ್ನಲ್ಲಿದ್ದ ಮಾಧುವಿಗೆ ಎಂಬುದನು ಮಾಧುವಿನ ಪೀತಿಗೆ ಪಾತ್ರಳಾದ ನಿಮಿ ಎಂಬುವಳ ವಿಲಿಯ ವ್ಯವಹಾರಕ್ಕಾಗಿ ಮೂಗನನ್ನು ಕೆಲಸ ಮಾಡಿಸಿ ಬಿಡುವ ಸತ್ಯ ಹೊಂದಿ ಮಾಧು ವಿಶಾಖಪಟ್ಟಣಕ್ಕೆ ಇಂಡಿಯಾಕ್ಕೆ ಬಂದು ತನ್ನ ಸಹೋದರ ಗೋಪಾಲನ ಸಮಾಗಮ ವಿ ಮೂಗಿನ ಸೇಡನ್ನು ತೀರಿಸಿಕೊಳ್ಳುವ ಈ ಸಂದರ್ಭದಲ್ಲಿ ಲಂಡನ್ ಮತ್ತು ನಗಾದ ದೃಶ್ಯಗಳನ್ನು ಶಿಲ್ಪಿಯು ಪ್ರೇಕ್ಷಕರಿಗೆ ಮನೋಹರವಾದ ದೃಶ್ಯವನ್ನೂ ನೋಡಬಹುದು.

CHAMUNDESWARI TALKIES
FROM FRIDAY THE 19TH MARCH 1948 DAILY 3 SHOW
M G M'S
Technicolour Musical Spectacle
BATHING BEAUTY
—:With:—
Red Skelton and the swimming champion, Esther Williams supported by Basil Rathbone, Bill Goodwin and several others
EXTENDED UPTO 29TH MARCH
If you have missed to see the picture take your chance to-day

26-3-48 ರಿಂದ :: ಅಮೋಘ ಪ್ರಾರಂ
ದಿನವಹಿ ಮೂರು ಆಟಗಳು
ಪ್ರಭಾ ಪಿಕ್ಚರ್ ಹೌಸ್
ಪಾತಿವ್ರತ್ಯವನ್ನು ಕಳಿಸಿಕೊಳ್ಳಲು ಪುನರ್ಜನ್ಮ ಬಲಿ ಕೊಡಲು ಸಿದ್ಧಳಾದ ಪಿತೃ ಪತಿಭಾನಿಯ ಹೃದಯ ವಿದ್ರಾವಕ ಚಿತ್ರ
ನೇಪಾಳ ಪವಿತ್ರ
(ಹಿಂದಿ)
ಭೂಮಿಕೆಯಲ್ಲಿ— ರಾಗಿಣಿ, ಉಲ್ಲಾಸ್, ಯಾಕೂಬ್

RAJAKAMAL TALKIES
Morning Shows from 26-3-48 for 4 days
Daily at 10-30 a. m
Stage Door Canteen
With:—PARLMENT, COUNT BASIE, BENNYGOODM

ಫೋನ್‌ನಂ. 792 ॥ ನಂದೇವನಾಕರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಶನಿವಾರ ೨೭-೩-೪೮ [ಸಂಚಿಕೆ ೧೯೭

ಶ್ರೀಮನ್ಮಹಾರಾಜರವರ ರಾಜಧನದಲ್ಲಿ ಖೋತಾ

ಗಾಂಧೀಜಿ ಸ್ಮಾರಕನಿಧಿಸಮಿತಿ

ಶ್ರೀಮನ್ಮಹಾರಾಜರವರ ಸಂದೇಶ

ಸ್ವಂ.ಸು.ಫೋ] ಬೆಂಗಳೂರು ೨೬

ಮಹಾತ್ಮ ಗಾಂಧಿಯವರ ಸ್ಮಾರಕಾರ್ಥವಾಗಿ ನಿಧಿಯನ್ನು ಶೇಖರಿಸಲು ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳುವುದಕ್ಕಾಗಿ ನಿನ್ನೆ ಸಂಜೆ ನಗರ ಭವನದಲ್ಲಿ ಸಭೆಯೊಂದು ನಡೆಯಿತು. ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ. ಸಿದ್ದಲಿಂಗಯ್ಯನವರು ಅಧ್ಯಾಸನವನ್ನು ವಹಿಸಿದ್ದರು. ಸಂಸ್ಥಾನದ ಅನೇಕ ಕಡೆಗಳಿಂದ ಗಣ್ಯರಾದ ಪ್ರಮುಖ ಪ್ರಜೆಯರೂ, ಮಹಿಳೆಯರೂ ಬಂದಿದ್ದರು.

ಶ್ರೀಗಳಾದ ಕೆ. ಚಂಗಲರಾಯ ರೆಡ್ಡಿ, ಡಿ. ಹೆಚ್. ಚಂದ್ರಶೇಖರಯ್ಯ, ಮತ್ತು ಮಿಸ್ ಇ ಮೋಸ್, ಎ. ಜೆ. ಪರೀಲ್, ರಾಘವಾಚಾರ್ಲು, ರಾಮಸ್ವಾಮಿ, ಮಿ: ಎಲ್. ಎಸ್. ವೆಂಕಾಚಾರ್, ಪಾಲಹಳ್ಳಿ ಸೀತಾರಾಮಯ್ಯ, ಸೈ: ಧರ್ಮಪ್ಪ ಮುಂತಾದವರು ಭಾಷಣ ಮಾಡಿ ಕಡೆಯ ಪಕ್ಷ ಮೈಸೂರು ಸಂಸ್ಥಾನದಿಂದ ಒಂದು ಕೋಟಿ ರೂಪಾಯಿಗಳನ್ನಾದರೂ ಸಂಗ್ರಹಿಸಬೇಕೆಂದು ಸೂಚಿಸಿದರು. ೧೬೦ ಜನ ಸದಸ್ಯರನ್ನೊಳಗೊಂಡ ಕೇಂದ್ರ ಸಮಿತಿಯೊಂದನ್ನು ರಚಿಸಲಾಯಿತು. ಶ್ರೀ ಟಿ. ಸಿದ್ದಲಿಂಗಯ್ಯನವರು ಅದರ ಅಧ್ಯಕ್ಷರು. ಶ್ರೀಗಳಾದ ಎಲ್. ಎಸ್. ವೆಂಕಾಚಾರ್ ಮತ್ತು ಎ. ಜಿ. ಬಂದೀಗೌಡರು ಕಾರ್ಯದರ್ಶಿಗಳು.

ಶ್ರೀಮನ್ಮಹಾರಾಜರು ಸಭೆಗೆ ಸಂದೇಶ ಪೊಂದನ್ನು ಕಳುಹಿಸಿದ್ದರು. ಬಾಬು ರಾಜೇಂದ್ರಪ್ರಸಾದರನ್ನು ಸೂಚನೆಯ ಮೇರೆಗೆ ಸಂಸ್ಥಾನದಲ್ಲಿ ಮಹಾತ್ಮ ಗಾಂಧಿಯವರ ಸ್ಮಾರಕ ನಿಧಿಯ ಸಂಗ್ರಹಕ್ಕಾಗಿ ಸಂಸ್ಥಾನದಲ್ಲಿ ಸಮಿತಿಯೊಂದು ರಚನೆಯಾಗಲಿರುವುದಕ್ಕಾಗಿ ಪ್ರಭು ಗಳು ತಮ್ಮ ಸಂತೋಷವನ್ನು ವ್ಯಕ್ತಪಡಿಸಿ ಮಹಾತ್ಮರಿಗೆ ಪ್ರಿಯವಾಗಿದ್ದ ರಚನಾತ್ಮಕ ಕಾರ್ಯಗಳಾಗಿಯೇ ನಿಧಿಯೋಗವಾಗುವ ಈ ನಿಧಿಗೆ ಮೈಸೂರಿನ ಗಾರ್ಡ ಕಳಕ್ಕ ತಕ್ಕ ಪ್ರತಿಯಲ್ಲಿ ಪ್ರೋತ್ಸಾಹವನ್ನು ದೊರೆಯಲೆಂದು ಅವರು ತಮ್ಮ ಸಂದೇಶದಲ್ಲಿ ಹಾರೈಸಿದ್ದರು. ಸಮಿತಿಯ ಪ್ರಧಾನ ಪೋಷಕರಾಗಲೂ ಅವರು ಸಮ್ಮತಿಯನ್ನೂ ಸಹ ಸೂಚಿಸಿದ್ದರು.

ಹೋಟೆರಿ ಸಮ್ಮೇಳನ

ಜಿಲ್ಲಾ ಹೋಟೆರಿ ಸಮ್ಮೇಳನವು ೨೬ನೇ ಅಧಿವೇಶನವನ್ನು ಈ ದಿನ ಬೆಳಿಗ್ಗೆ ಪ್ರಧಾನ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಅರಂಭ ಮಾಡಿದರು. ಗಾಂಧೀಜಿಯವರ ತತ್ವಗಳಿಗೂ ಹೋಟೆರಿ ಸಂಸ್ಥೆಯ ಧ್ಯೇಯಗಳಿಗೂ ವಿಶೇಷ ವ್ಯತ್ಯಾಸ ವಿಲ್ಲವೆಂದೂ, ಅದರೂ ಇಂದಿನ ಪ್ರಸಂಗದಲ್ಲಿ ಈ ತತ್ವಗಳನ್ನು ಕಾರ್ಯರೂಪದಲ್ಲಿ ಆಚರಿಸಿ ತೋರಿಸುವ ಶಾಂತ ಸೌಹಾರ್ದವನ್ನು ಸ್ಥಾಪಿಸುವ ಅವಶ್ಯಕತೆಯು ಇಂದು ಬಹಳವಾಗಿರುವುದಾಗಿಯೂ ಅವರು ತಮ್ಮ ಭಾಷಣದಲ್ಲಿ ಹೇಳಿದರು.

ರಾಜ್ಯಾಂಗ ಸಭಾ ಚುನಾವಣೆ

